# ಅನಂತಪಥ

ANANTHKUMAR PRATISHTHANA




**ಸಂಸದೀಯ ಪಟುವಾದ ಮಾದರಿ ಕಾರ್ಯಕರ್ತ**

ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ - 2

ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರ ನೆನಪು


ಸಂಪುಟ-1 | ಸೆಪ್ಟೆಂಬರ್ - 2020 | ಸಂಚಿಕೆ - 3


## ಕೋವಿಡ್ ವಿರುದ್ಧದ ಸಮರದಲ್ಲಿ ಸ್ವಾವಲಂಬಿ ಭಾರತ

**ಡಾ. ಹರ್ಷವರ್ಧನ್**
**ಕೇಂದ್ರ ಆರೋಗ್ಯ ಸಚಿವರು**



ನಮ್ಮ ಮಹಾನ್ ನಾಯಕರೂ ಸ್ನೇಹಿತರೂ ಆದ ಶ್ರೀ ಅನಂತ್‌ಕುಮಾರ್ ಜೀ ಅವರ ಸ್ಮರಣೆಗೆ ಮೀಸಲಾಗಿರುವ ಈ ಮೊದಲ ವೆಬಿನಾರ್ ಅನ್ನು ಉದ್ದೇಶಿಸಿ ಮಾತನಾಡುತ್ತಿರುವ ಈ ಸಂದರ್ಭವು ನನಗೆ ತುಂಬಾ ಭಾವನಾತ್ಮಕ ಕ್ಷಣವಾಗಿದೆ ಎಂದು ನಾನು ಭಾವಿಸುತ್ತೇನೆ . ನಮಗೆಲ್ಲ ತಿಳಿದಿರುವಂತೆ ಅನಂತ್‌ಕುಮಾರ್ ಜೀ ಅವರು ಒಬ್ಬ ಮಹಾನ್ ನಾಯಕ, ಒಬ್ಬ ಮಹಾನ್ ಸ್ನೇಹಿತ. ಅಂತಹ ಆಕರ್ಷಕ ವ್ಯಕ್ತಿತ್ವ, ಸದಾ ನಗುತ್ತಿರುವ ವಿನಮ್ರ ಕೆಲಸಗಾರ, ಕಳೆದ ಮೂರು ದಶಕಗಳಿಂದ ವಿವಿಧ ಕ್ಷೇತ್ರಗಳಲ್ಲಿ ನಿರಂತರವಾಗಿ ಕೆಲಸ ಮಾಡುವುದನ್ನು ನಾನು ನೋಡಿದ್ದೇನೆ.ಅವರ ನೆನಪು ಮೂಡುತ್ತಿರುವ ಈ ನಿರ್ದಿಷ್ಟ ಕ್ಷಣದಲ್ಲಿ ನಾನು ಮಾತನಾಡಲು ಪ್ರಯತ್ನಿಸಿದಾಗ ಅಕ್ಷರಶಃ ನನ್ನ ಕಣ್ಣಲ್ಲಿ ನೀರು ತುಂಬುತ್ತಿದೆ.

'ದೇಶ ಮೊದಲು' ಶೀರ್ಷಿಕೆಯ ಈ ಸಂಭಾಷಣೆಯಲ್ಲಿ ಕೋವಿಡ್ ಬಗ್ಗೆ ಮಾತನಾಡಲು ಕೇಳಿದ್ದೀರಿ. ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದಾದ್ಯಂತದ ಕೋವಿಡ್ ಸನ್ನಿವೇಶದ ಬಗ್ಗೆ ನಿಮ್ಮೆಲ್ಲರಿಗೂ ಚೆನ್ನಾಗಿ ತಿಳಿದಿದೆ. ನಮ್ಮ ದೇಶದಲ್ಲಿ ಮೊದಲ ಕೋವಿಡ್ ಪ್ರಕರಣ ಪತ್ತೆಯಾದ ತಕ್ಷಣ, ಮೊದಲ ದಿನದಿಂದಲೇ ಎಲ್ಲವನ್ನೂ ಮೇಲ್ವಿಚಾರಣೆ ಮಾಡುತ್ತಿದ್ದ ಪ್ರಧಾನಿಯವರು ನನ್ನ ಮೇಲ್ವಿಚಾರಣೆಯಲ್ಲಿ ಹಲವು ಮಂತ್ರಿಗಳು ಹಾಗೂ ಭಾರತ ಸರ್ಕಾರದ ಉನ್ನತ ಕಾರ್ಯದರ್ಶಿಗಳ ಸಮಿತಿಯನ್ನು ರಚಿಸಿದರು. ಈ ಸಮಿತಿಯು ನಿರಂತರವಾಗಿ ಚರ್ಚೆ ಮತ್ತು ಯೋಜನೆಯನ್ನು ಆಯೋಜಿಸುತ್ತಿದೆ. ಯಾವುದೋ ಬೆಳವಣಿಗೆ ಸಂಭವಿಸುತ್ತದೆ ಎಂದು ನಾವು ಎಂದಿಗೂ ಕಾಯಲಿಲ್ಲ. ನಾವು ಮೊದಲೇ ವಿಷಯಗಳನ್ನು ನಿರೀಕ್ಷಿಸಿದ್ದೆವು. ಅದಕ್ಕೆ ತಕ್ಕಂತೆ ಯೋಜನೆಗಳನ್ನು ರೂಪಿಸಿಕೊಳ್ಳತೊಡಗಿದೆವು.

ಮಾರ್ಚ್ ೨೨ ರಂದು, ವಿಶ್ವ ಆರೋಗ್ಯ ಸಂಸ್ಥೆ ಕೇವಲ ಸಾಂಕ್ರಾಮಿಕ ರೋಗವೆಂದು ಘೋಷಿಸಿದ ಕೇವಲ ೧೦ ದಿನಗಳ ನಂತರ ಪ್ರಧಾನ ಮಂತ್ರಿಯವರು ಆ ಮಹಾನ್ ನವೀನ ಪ್ರಯೋಗವನ್ನು ಮಾಡಿದರು.ಅದೇ ಮಹಾನ್ ಜನತಾ ಕರ್ಫ್ಯೂ. ಆ ಹಂತದಲ್ಲಿ ನಾವು ರಾಷ್ಟ್ರವ್ಯಾಪಿ ಲಾಕ್‌ಡೌನ್‌ಗಾಗಿ ಇಡೀ ದೇಶವನ್ನು ನಿಜವಾಗಿಯೂ ಸಿದ್ಧಪಡಿಸುತ್ತಿದ್ದೇವೆಂದು ಯಾರಿಗೂ ತಿಳಿದಿರಲಿಲ್ಲ.

ಮಾರ್ಚ್ ೨೨ರ ದಿನ ಜನತಾ ಕರ್ಫ್ಯೂ ವಿಧಿಸಿದಾಗ ೧.೩೫ ಶತಕೋಟಿ ಜನರು ಪ್ರತಿಯೊಬ್ಬರೂ ತುಂಬಾ ಬದ್ಧತೆಗಳೊಂದಿಗೆ ಭಾಗವಹಿಸಿದ್ದೇವೆ, ಮುಂದೆ ನಾವೆಲ್ಲರೂ ಲಾಕ್ಡೌನ್ ೧, ೨, ೩, ೪ ಗೆ ಸಾಕ್ಷಿಯಾಗಿದ್ದೇವೆ ಮತ್ತು ನಂತರ ಅನ್ಲಾಕ್ ಮಾಡುವ ಪ್ರಕ್ರಿಯೆಯನ್ನೂ ಸಹ ನೋಡುತ್ತಿದ್ದೇವೆ.

ಒಂದೆರಡು ವರ್ಷಗಳ ಹಿಂದೆ ಸಾಂಕ್ರಾಮಿಕ ರೋಗಗಳ ವೈರಸ್ ಗಳನ್ನು ಪರೀಕ್ಷಿಸಲು, ಅಟ್ಲಾಂಟಾ ಯು.ಎಸ್.ಎ ಯಲ್ಲಿರುವ ರೋಗಗಳ ನಿಯಂತ್ರಣ ಕೇಂದ್ರಕ್ಕೆ ಪರೀಕ್ಷಿಸಲು ಈ ಮಾದರಿಗಳನ್ನು ಕಳುಹಿಸಬೇಕಾಗಿತ್ತು. ನಮ್ಮ ದೇಶದ ಪುಣೆಯಲ್ಲಿ ಇರುವ ರಾಷ್ಟ್ರೀಯ ವೈರಾಲಜಿ ಸಂಸ್ಥೆ ಒಂದೇ ಪ್ರಯೋಗಾಲಯ ನಮಗೆ ಲಭ್ಯವಿತ್ತು. ಇದೆ. ಆದರೆ, ನಮಗೆ ೧೫೮೩ ಪ್ರಯೋಗಾಲಯಗಳ ಬೆಂಬಲವಿದೆ, ಅವುಗಳಲ್ಲಿ ಸಾವಿರಕ್ಕೂ ಹೆಚ್ಚು ಸರ್ಕಾರಿ ವಲಯದಲ್ಲಿ ಇವೆ. ಕರ್ನಾಟಕದಲ್ಲೂ ಕೆಲವು ಪ್ರಯೋಗಾಲಯಗಳಿವೆ. ಏಪ್ರಿಲ್ ತಿಂಗಳಲ್ಲಿ ದೇಶದಲ್ಲಿ ದಿನಕ್ಕೆ ೬,೦೦೦ ಪರೀಕ್ಷೆಯಂತೆ ಮಾಡುತ್ತಿದ್ದರೆ ಈಗ ದಿನಕ್ಕೆ ಒಂದು ಮಿಲಿಯನ್ ಪರೀಕ್ಷೆಗಳನ್ನು ಮಾಡಲು ನಿರ್ಧರಿಸಿದೆವಲ್ಲದೆ, ಉದ್ದೇಶಿತ ದಿನಾಂಕಕ್ಕಿಂತ ಮೊದಲು ಆ ಗುರಿಯನ್ನು ಸಾಧಿಸಿದ್ದೇವೆ.

ಆರಂಭಿಕ ಹಂತದಲ್ಲಿ ಎಲ್ಲರೂ ಪಿ.ಪಿ.ಇ ಕಿಟ್ ಹಾಗೂ ಎನ್೯೫ ಮಾಸ್ಕ್ ಗಳ ಕೊರತೆಯ ಬಗೆಗೆ ಮಾತನಾಡುತ್ತಿದ್ದರು. ಇಂದು ನಾವು ಪಿ.ಪಿ.ಇಯ ೧೧೯ ತಯಾರಕರನ್ನು ಹೊಂದಿದ್ದೇವೆ.

ಪುಟ 8 ರಲ್ಲಿ ಮುಂದುವರಿದಿದೆ



ಕರ್ನಾಟಕ ರಾಜ್ಯದ ಯುವಜನತೆಯ ಪ್ರಯೋಜನಕ್ಕಾಗಿ ನಾಯಕತ್ವ ನಿರ್ಮಾಣ ಮತ್ತು ನೀತಿ ನಿರೂಪಣಾ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು **ಅನಂತಕುಮಾರ್ ಪ್ರತಿಷ್ಠಾನಕ್ಕೆ** ಅನುದಾನವನ್ನು ನೀಡುವುದಾಗಿ ರಾಜ್ಯದ ಆಯವ್ಯಯ ಪತ್ರದಲ್ಲಿ ಘೋಷಿಸಿದ್ದ ಸನ್ಮಾನ್ಯ ಮುಖ್ಯಮಂತ್ರಿಯವರಾದ **ಶ್ರೀ ಬಿ.ಎಸ್. ಯಡಿಯೂರಪ್ಪನವರು** ಪ್ರತಿಷ್ಠಾನಕ್ಕೆ ಅನುದಾನವನ್ನು ನೀಡಿ ಪ್ರೋತ್ಸಾಹಿಸಿರುತ್ತಾರೆ. ಅವರಿಗೆ ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

## ಪುನಶ್ಚೇತನದೆಡೆಗೆ ಕರ್ನಾಟಕ ಸುಧಾರಣಾಕ್ರಮಗಳು ದೇಶಕ್ಕೇ ಮಾದರಿ

**ಡಾ. ಸಿ.ಎನ್. ಅಶ್ವತ್ಥನಾರಾಯಣ,** ಸನ್ಮಾನ್ಯ ಉಪಮುಖ್ಯಮಂತ್ರಿಯವರು, ಕರ್ನಾಟಕ ಸರ್ಕಾರ



ಕೋವಿಡ್ ಸೃಷ್ಟಿಸಿದ ಆತಂಕಕಾರಿ ಪರಿಸ್ಥಿತಿಯನ್ನು ಎದುರಿಸಲು ನಮ್ಮ ವೈದ್ಯಕೀಯ ವ್ಯವಸ್ಥೆಯನ್ನು ಚುರುಕುಗೊಳಿಸುವುದು ಮತ್ತು ಅಭಿವೃದ್ಧಿಪಡಿಸುವುದು ಆಡಳಿತ ವ್ಯವಸ್ಥೆಯ ಒಂದು ಮುಖ್ಯ ಕರ್ತವ್ಯವಾಗಿದ್ದಿತು. ಈಗಾಗಲೇ ಸಾಕಷ್ಟು ವಿನಾಶ ಸಂಭವಿಸಿದೆ, ಸಾಕಷ್ಟು ಭಯವನ್ನು ಸೃಷ್ಟಿಸಲಾಗಿದೆ ಮತ್ತು ಸಾಕಷ್ಟು ಮಿತಿಗಳೂ ಇವೆ. ಈ ಪರಿಸ್ಥಿತಿಯಲ್ಲಿ ಕೆಲಸ ಮಾಡಲು ಸಾಕಷ್ಟು ಸವಾಲುಗಳು ಎದುರಾಗಿವೆ. ಆದರೆ ಅಗತ್ಯವಿರುವ ಯಾವುದೇ ಸಲಕರಣೆಗಳನ್ನು ಪೂರೈಸುವ ಬಗ್ಗೆ ಯಾವುದೇ ಹೊಂದಾಣಿಕೆಗೆ ಎಡೆಗೊಟ್ಟಿಲ್ಲ. ಏಕೆಂದರೆ, ಜನರ ಜೀವಕ್ಕಿಂತ ಯಾವುದೇ ದುಬಾರಿ ಸಲಕರಣೆಗಳಿಗೆ ಸಂಬಂಧಿಸಿದ ವೆಚ್ಚವೇ ಮುಖ್ಯವಾಗುವುದಿಲ್ಲ. ಕೋವಿಡ್ -೧೯ ನಿಯಂತ್ರಣವನ್ನು ಸಾಧಿಸಲು ಬೇಕಾದ ಸಂಪನ್ಮೂಲವನ್ನು ನಾವು ಹೊಂದಿದ್ದೇವೆ. ಜನಜೀವನವನ್ನು ಸಹಜ ಸ್ಥಿತಿಗೆ ಮರಳಿ ತರುವುದು ಅತ್ಯಂತ ಮುಖ್ಯವಾದ ಅಂಶವಾಗಿದೆ . ಆದ್ದರಿಂದ ಈ ಪರಿಸ್ಥಿತಿಯಲ್ಲಿಯೂ ನಾವು ಮನೆಯಿಂದ ಕೆಲಸ ಮಾಡುವುದು, ಮನೆಯಿಂದ ಲಾಗಿನ್ ಆಗುವುದು ಮತ್ತು ಸವಾಲುಗಳನ್ನು ಎದುರಿಸಲು ಅಗತ್ಯವಾದ ಇನ್ನೂ ಅನೇಕ ಪರಿಹಾರಗಳ ಪರಿಕಲ್ಪನೆಯನ್ನು ಮುಂದಿರಿಸಿಕೊಂಡು ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ವರ್ತಮಾನದ ಪರಿಸ್ಥಿತಿ ಏನೆಂದರೆ, ನಮ್ಮಲ್ಲಿ ಸಂಪೂರ್ಣ ಮೂಲಸೌಕರ್ಯವಿದೆ, ಅಲ್ಲದೆ, ಕಾಲಾಂತರದಲ್ಲಿ ನಿರ್ಮಿಸಲಾಗಿರುವ ಸೌಲಭ್ಯಗಳನ್ನೂ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ.

ಪುಟ 8 ರಲ್ಲಿ ಮುಂದುವರಿದಿದೆ





**ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ನಾಯಕತ್ವ**
ಪುಟ - 3
ಡಾ. ಆರ್. ಬಾಲಸುಬ್ರಹ್ಮಣ್ಯಂ

**ನಾಯಕತ್ವದ 'ಅನಂತ 'ಸೂತ್ರಗಳು**
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
ಪುಟ - 5



**ನಿಮ್ಮ ಮಿನಿಸ್ಟರ್.. ನನಗ ಮಗಾ !**
ಪ್ರಿಸಿಲ್ಲಾ ನಡಗಡ್ಡಿ
ಪುಟ - 7
ಶಿಕ್ಷಕರ ದಿನ ವಿಶೇಷ ಲೇಖನ




ಪುಟ - 11
**“ಸಾಧ್ಯತೆಗೆ ತಕ್ಕಷ್ಟು ವನ್ಯಜೀವನ ಸುಧಾರಿಸಿಲ್ಲ”**
ಡಾ. ಕೆ. ಉಲ್ಲಾಸ ಕಾರಂತ

# ಸಂಸದೀಯ ಪಟುವಾದ ಮಾದರಿ ಕಾರ್ಯಕರ್ತ

**ಶ್ರೀ ಎಂ.ವೆಂಕಯ್ಯ ನಾಯ್ಡು, ಸನ್ಮಾನ್ಯ ಉಪರಾಷ್ಟ್ರಪತಿಯವರು**

ನಾನು ಕಂಡಂತೆ



ಅನಂತಕುಮಾರ್

ಅನಂತ್‌ಕುಮಾರ್ ಇನ್ನಿಲ್ಲ ಎಂಬ ವಾಸ್ತವವನ್ನು ನನಗೆ ಜೀರ್ಣಿಸಿಕೊಳ್ಳಲಾಗುತ್ತಿಲ್ಲ. ಅವರ ಭಾವಚಿತ್ರವನ್ನೊಮ್ಮೆ ನೋಡಿ, ಆ ವ್ಯಕ್ತಿತ್ವವನ್ನೊಮ್ಮೆ ನೆನಪಿಸಿಕೊಂಡರೆ ಅವರೆಂಥ ಚುರುಕಿನ ಮತ್ತು ಉತ್ಸಾಹಭರಿತ ವ್ಯಕ್ತಿಯಾಗಿದ್ದರು ಎಂಬುದು ಗೊತ್ತಾಗುತ್ತದೆ. ಆದರೆ ಅಂಥದೊಂದು ವ್ಯಕ್ತಿತ್ವ ಇನ್ನಿಲ್ಲ ಎಂಬುದನ್ನು ಕಲ್ಪಿಸಿಕೊಳ್ಳುವುದಕ್ಕೂ ಕಷ್ಟವಾಗುತ್ತದೆ.

ಸಂವಿಧಾನಾತ್ಮಕ ಹೊಣೆಗಾರಿಕೆ ಮತ್ತು ಬದ್ಧತೆಯ ಅನುಸಾರ, ನಾನೀಗ ಉಪರಾಷ್ಟ್ರಪತಿ ಆಗಿರಬಹುದು; ಆದರೆ ಅನಂತ್ ಜತೆಯಲ್ಲಿ ಅತ್ಯಂತ ನಿಕಟವಾಗಿ ಕಾರ್ಯನಿರ್ವಹಿಸಿದ ಅನುಭವ ನನ್ನಲ್ಲಿ ಹರಳುಗಟ್ಟಿದೆ. ಆ ಕ್ಷಣಗಳೆಲ್ಲವನ್ನೂ ಮತ್ತೊಮ್ಮೆ ನೆನಪಿಸಿಕೊಂಡಾಗ, ಅವರು ನಿಜಾರ್ಥದಲ್ಲಿ ಓರ್ವ ತಳಮಟ್ಟದ ಮಾದರಿ ಕಾರ್ಯಕರ್ತರೂ ಆಗಿದ್ದರು, ಓರ್ವ ಆದರ್ಶ ಸಂಸದೀಯಪಟುವೂ ಆಗಿದ್ದರು ಎಂದು ಅಂತಿಮವಾಗಿ ಹೇಳಬೇಕಾಗುತ್ತದೆ. ಅವರೊಬ್ಬ ಮಾದರಿ ರಾಜಕೀಯ ನಾಯಕ ಅಥವಾ ಓರ್ವ ಮಾದರಿ ಮಂತ್ರಿ ಆಗಿದ್ದುದರ ಜತೆಜತೆಗೆ, ಎಲ್ಲರ ಪಾಲಿನ ಓರ್ವ ಆದರ್ಶ ಸ್ನೇಹಿತನೂ ಆಗಿದ್ದರು. ಕೆಲಸ ಕೆಲಸ ಕೆಲಸ ಎಂಬುದೇ ಅವರ ಮಂತ್ರವಾಗಿದ್ದುದು, ಕೆಲಸದಲ್ಲೇ ಅವರು ಸಂತೋಷವನ್ನು ಕಾಣುತ್ತಿದ್ದುದು, ಅದೇ ಅವರ ವರ್ತನೆಯಾಗಿಬಿಟ್ಟಿದ್ದುದೇ ಇದಕ್ಕೆ ಕಾರಣವೆನ್ನಬಹುದು. ಅವರಿಗೆ ದಣಿವಾಗುತ್ತಲೇ ಇರಲಿಲ್ಲ.

ನಾನು ಕರ್ನಾಟಕ ರಾಜ್ಯದ ಉಸ್ತುವಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಅನಂತ್ ಜತೆಯಲ್ಲಿ ಅತ್ಯಂತ ನಿಕಟವಾಗಿ ಒಡನಾಡುತ್ತಿದ್ದ ಅನುಭವ ನನಗಾಗಿದೆ. ನನಗಿನ್ನೂ ಚೆನ್ನಾಗಿ ನೆನಪಿದೆ- ನಾನು, ಅನಂತ್ ಕುಮಾರ್ ಮತ್ತು ಯಡಿಯೂರಪ್ಪ ಮೂವರೂ ಕರ್ನಾಟಕದ ಉದ್ದಗಲಕ್ಕೂ ಒಂದು ಕಾರಿನಲ್ಲಿ ಒಟ್ಟಿಗೆ ೧೮೨ ತಾಲೂಕುಗಳಲ್ಲಿ ಸಂಚರಿಸಿದ್ದೆವು. ನಾವು ರಾತ್ರಿವೇಳೆ ತಾಲೂಕು ಕೇಂದ್ರಗಳಲ್ಲಿ ತಂಗುತ್ತಿದ್ದೆವು. ಒಂದು ವೇಳೆ ವ್ಯಕ್ತಿಯೊಬ್ಬನು ಮತ್ತೊಬ್ಬನೊಂದಿಗೆ ೧೮೨ ಹಗಲು ರಾತ್ರಿಗಳನ್ನು ಒಟ್ಟಾಗಿ ಕಳೆದಿದ್ದಾನೆಂದರೆ, ಆ ಮತ್ತೊಬ್ಬನನ್ನು ನಿಕಟವಾಗಿ ವೀಕ್ಷಿಸುವ ಅವಕಾಶವೂ ದಕ್ಕಿರುತ್ತದೆ ಎಂಬದನ್ನು ನೀವು ಅರ್ಥಮಾಡಿಕೊಳ್ಳಬಲ್ಲಿರಿ. ಅಂತೆಯೇ, ಅಷ್ಟೂ ದಿನಗಳೂ ಅವರನ್ನು ಸಮರ್ಥವಾಗಿ ಅರಿಯುವಂಥ ಸದವಕಾಶ ನನಗೆ ದಕ್ಕಿತ್ತು. ಅವರೊಬ್ಬ ಚಟುವಟಿಕೆಯ ವ್ಯಕ್ತಿ, ಅಸಾಧಾರಣ ಬುದ್ಧಿವಂತ, ಅತ್ಯಂತ ಶ್ರಮಜೀವಿ ಮಾತ್ರವಲ್ಲದೆ, ತಾವು ನಂಬಿದ ಧ್ಯೇಯ ಮತ್ತು ಉದ್ದೇಶಗಳಿಗೆ ಯಾವಾಗಲೂ ಪಟ್ಟಾಗಿ ಸಮರ್ಪಿಸಿಕೊಂಡಂಥ ವ್ಯಕ್ತಿ. ಈ ಎಲ್ಲ ವೈಶಿಷ್ಟ್ಯಗಳ ಫಲವಾಗಿ, ತಮ್ಮನ್ನು ಹೊಣೆಗಾರಿಕೆಗಳಲ್ಲಿ ತೊಡಗಿಸಿದ ನಾಯಕರ ನಿರೀಕ್ಷೆಗಳಿಗೆ ತಕ್ಕಂತೆ ಅನಂತ್‌ಕುಮಾರ್ ಪ್ರವರ್ಧಮಾನಕ್ಕೆ ಬಂದರು. ನಾನು ಅವರನ್ನು ಯಾವಾಗಲೂ ನನ್ನ ತಮ್ಮನಂತೆ ನೋಡಿಕೊಳ್ಳುತ್ತಿದ್ದೆ. ದೆಹಲಿಯಲ್ಲಿ ನಾವಿಬ್ಬರೂ ಬಹಳ ಕಾಲ ಜತೆಗೇ ಕಳೆದಿದ್ದೇವೆ. ಅಗತ್ಯ ಸಲಹೆ-ಸೂಚನೆ, ಮಾರ್ಗದರ್ಶನಗಳಿಗಾಗಿ ಅವರು ನನ್ನ ನಿವಾಸಕ್ಕೆ ಯಾವಾಗಲೂ ಬರುವುದು ವಾಡಿಕೆಯಾಗಿತ್ತು; ಅವರಿಗೆ ಏನೇ ಸಲಹೆ-ಸೂಚನೆ ನೀಡಿ, ಅದು ಅವರಿಗೆ ಅರ್ಥವಾಯಿತೆಂದರೆ, ಅದನ್ನು ಅನುಷ್ಠಾನಕ್ಕೆ ತರಲು ಅವರು ಇನ್ನಿಲ್ಲದಂತೆ ಯತ್ನಿಸುತ್ತಿದ್ದರು ಹಾಗೂ ಆ ಕುರಿತಾದ ಹಿಮ್ಮಾಹಿತಿಯನ್ನು ನೀಡುತ್ತಿದ್ದರು. ವಿದ್ಯಾರ್ಥಿ ಆಂದೋಲನ, ಯುವ



ಆಂದೋಲನದಿಂದ ಮೊದಲ್ಗೊಂಡು, ಓರ್ವ ತಳಮಟ್ಟದ ಕಾರ್ಯಕರ್ತನಿಂದ ರಾಷ್ಟ್ರೀಯ ಮಟ್ಟದಲ್ಲಿ ಸಂಸದೀಯ ವ್ಯವಹಾರಗಳ ಸಚಿವನಾಗುವಂಥ ರಾಜಕೀಯ ರೂಪಾಂತರದವರೆಗಿನ ವಿಭಿನ್ನ ಹಂತಗಳಲ್ಲಿ ನಿಯೋಜಿತ ಕಾರ್ಯದಲ್ಲಿ ಇಂಥದೊಂದು ಬದ್ಧತೆಯನ್ನು ಕಾಪಾಡಿಕೊಂಡು ಬಂದವರು ಅನಂತ್. ಭಾರತೀಯ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ, ಪಕ್ಷದ ನಿರ್ಣಯವನ್ನು ತಳಮಟ್ಟದ ಕಾರ್ಯಕರ್ತರಿಗೆ ಮುಟ್ಟಿಸುವಂಥ ಮತ್ತು ತರುವಾಯದಲ್ಲಿ ಅದರ ಮೇಲ್ವಿಚಾರಣೆ ನಡೆಸುವಂಥ ಓರ್ವ ಸಂಘಟನಕಾರನ ಕೆಲಸವನ್ನೂ ಅವರು ಮಾಡಿದ್ದಿದೆ. ರಾಜ್ಯದ ಉಸ್ತುವಾರಿಯಾಗಿದ್ದಾಗಲೂ ತಮಗೆ ಯಾವುದೇ ಕೆಲಸವನ್ನು ನಿಯೋಜಿಸಲಿ, ಅದರ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನೂ ಅವಲೋಕಿಸಿ ತಮ್ಮ ಪಾಲಿನ ಕೆಲಸದ ಅನುಷ್ಠಾನದಲ್ಲಿ ನಿಗಾವಹಿಸುವುದು ಹಾಗೂ ಸಂಬಂಧಪಟ್ಟ ಎಲ್ಲರೂ ಅದೇ ದಿಕ್ಕಿನಲ್ಲಿ ಕಾರ್ಯನಿರ್ವಹಿಸುವಂತೆ ಮತ್ತು ಅದಕ್ಕಾಗಿ ಉತ್ತೇಜಿಸಲ್ಪಡುವಂತೆ ನೋಡಿಕೊಳ್ಳುವುದು ಅವರ ಕಾರ್ಯಶೈಲಿಯಾಗಿತ್ತು. ಬೆಂಗಳೂರಿನಂಥ ಕಾಸ್ಮೋಪಾಲಿಟನ್ ಕ್ಷೇತ್ರದಲ್ಲಿ ನಿರಂತರವಾಗಿ ಆರು ಬಾರಿ ಸಂಸತ್ತಿಗೆ ಚುನಾಯಿತರಾಗುವುದು ಸಾಮಾನ್ಯ ಸಂಗತಿಯಲ್ಲ; ಇದು ಅನಂತ್‌ಕುಮಾರ್ ಅವರ ವರ್ತನೆಗೆ, ಸಾಮರ್ಥ್ಯಕ್ಕೆ, ವಿಶಿಷ್ಟ ವ್ಯಕ್ತಿತ್ವಕ್ಕೆ ಮತ್ತು ಗುಣ-ವೈಶಿಷ್ಟ್ಯಕ್ಕೆ ದಕ್ಕಿದ ಒಂದು ಪುರಾವೆ ಅಥವಾ ಪ್ರಮಾಣಪತ್ರ ಎಂದರೆ ಅತಿಶಯೋಕ್ತಿ ಆಗಲಾರದು. ಎರಡನೆಯದಾಗಿ, ಆಡಳಿತಾರೂಢ ಪಕ್ಷವೊಂದರ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸಮಾಡುವುದು ಹಾಗೂ ಪ್ರತಿಯೊಂದು ರಾಜ್ಯದೊಂದಿಗೂ ಸಮನ್ವಯತೆಯನ್ನು ಸಾಧಿಸುವುದು ಹುಡುಗಾಟಿಕೆಯ ಮಾತಲ್ಲ. ನಾನು ಕೂಡ ನೇಪಥ್ಯದಲ್ಲಿದ್ದುಕೊಂಡು ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಸಂಸದೀಯ ಮಂಡಳಿಯ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದೇನೆ. ಆದರೆ ಪಕ್ಷವು ತಮಗೆ ನಿಯೋಜಿಸಿದ ಹೊಣೆಗಾರಿಕೆಗಳನ್ನು ನಿಭಾಯಿಸುವಲ್ಲಿ ಅನಂತ್‌ಕುಮಾರ್ ಅಸಾಧಾರಣ ಕಾರ್ಯಕ್ಷಮತೆಯನ್ನು ಮೆರೆದಿದ್ದಾರೆ ಎಂಬುದಂತೂ ನಿಜ.

ಮೂರನೆಯದಾಗಿ, ವಾಜಪೇಯಿಯವರ ಸರ್ಕಾರದಲ್ಲಿ ಮತ್ತು ತರುವಾಯದಲ್ಲಿ ನರೇಂದ್ರ ಮೋದಿಯವರ ಸರ್ಕಾರದಲ್ಲಿ ಮಂತ್ರಿಗಿರಿಯ ರೂಪದಲ್ಲಿ ಅವರ ಹೆಗಲೇರಿದ ಹೊಣೆಗಾರಿಕೆಗಳ



ಕುರಿತು ಹೇಳುವುದಾದರೆ, ತಮಗೆ ನೀಡಲಾದ ಖಾತೆ ಯಾವುದೇ ಇರಲಿ, ಅದರ ಕುರಿತಾದ ಆಳ ಅಧ್ಯಯನವನ್ನು ಕೈಗೊಳ್ಳುತ್ತಿದ್ದುದು, ಅದನ್ನು ಕರಗತ ಮಾಡಿಕೊಳ್ಳುತ್ತಿದ್ದುದು ಅವರ ಪರಿಪಾಠವಾಗಿತ್ತು. ನಾಗರಿಕ ವಿಮಾನಯಾನದ ಕುರಿತಾಗಿ ನಮಗೆ ಒಮ್ಮೆ ಅವರು ವಿವರಿಸುತ್ತಿದ್ದ ಪರಿಯನ್ನು ಕಂಡು ನಾನು ನಿಬ್ಬೆರಗಾಗಿದ್ದಿದೆ. ವಿಮಾನಯಾನದಂಥ ಬಾಬತ್ತಿನ ತಾಂತ್ರಿಕ, ವೈಜ್ಞಾನಿಕ ಹಾಗೂ ಇತರ ವಿವರಗಳನ್ನು ಈ ಮಟ್ಟಿಗೆ ಅರ್ಥೈಸಿಕೊಳ್ಳುವಲ್ಲಿ ಇವರು ಸಮರ್ಥರಾಗಿದ್ದಾದರೂ ಹೇಗೆ ಎಂದು ನಾನು ಅಚ್ಚರಿಗೊಂಡಿದ್ದಿದೆ. ತಮಗೆ ನೀಡಲಾದ ವಿಷಯದ ಕುರಿತಾಗಿ ಅವರು ಅಧ್ಯಯನಶೀಲರಾಗುತ್ತಿದ್ದ ಪರಿಯಿದು. ಇಷ್ಟು ಮಾತ್ರವಲ್ಲದೆ, ತಮ್ಮ ಹಿರಿಯರೊಂದಿಗೆ ಸಮಾಲೋಚಿಸಿ, ಅವರಿಂದ ಸಲಹೆ-ಸೂಚನೆ ಪಡೆದು, ತರುವಾಯದಲ್ಲಿ ನಿರ್ಧರಿಸಲ್ಪಟ್ಟಿದ್ದನ್ನು ಕರಾರುವಾಕ್ಕಾದ ವಿಧಾನದಲ್ಲಿ ಅನುಷ್ಠಾನಗೊಳಿಸಲು ಯತ್ನಿಸುವುದು ಅವರು ಅನುಸರಿಸುತ್ತಿದ್ದ ವಾಡಿಕೆಯ ಪರಿಪಾಠವಾಗಿತ್ತು. ಹೀಗಾಗಿ, ಅವರು ಪ್ರತಿಯೊಂದು ಅರ್ಥದಲ್ಲೂ ನೆಲೆಯಲ್ಲೂ ಓರ್ವ ಪರಿಪೂರ್ಣ ವ್ಯಕ್ತಿಯಾಗಿದ್ದರು. ಪ್ರವಾಸೋದ್ಯಮ, ಕ್ರೀಡೆ, ಯುವಜನ ವ್ಯವಹಾರಗಳು, ಸಂಸ್ಕೃತಿ, ನಗರಾಭಿವೃದ್ಧಿ, ಬಡತನ ನಿರ್ಮೂಲನೆ ಹಾಗೂ ಅಂತಿಮವಾಗಿ ಸಂಸದೀಯ ವ್ಯವಹಾರಗಳು- ಹೀಗೆ ಯಾವುದೇ ಹೊಣೆಗಾರಿಕೆಯನ್ನು ನೀಡಿದರೂ, ಅವರಿಂದ ಹೊಮ್ಮಿದ್ದು ಅತ್ಯುತ್ತಮ ಕಾರ್ಯಸಾಧನೆಯೇ. ತಮಗೆ ನೀಡಲಾದ ಹೊಣೆಗಾರಿಕೆಗಳ ನಿಭಾವಣೆಗೆ ನ್ಯಾಯ ಸಲ್ಲಿಸಲು ಅವರು ನಿರಂತರ ಯತ್ನಿಸುತ್ತಿದ್ದುದೇ ಇಂಥ ಫಲಿತಾಂಶಕ್ಕೆ ಕಾರಣವೆನ್ನಬೇಕು. ಪ್ರಸಕ್ತ ಸನ್ನಿವೇಶದಲ್ಲಿ ಸಂಸದೀಯ ವ್ಯವಹಾರಗಳ ಸಚಿವನಾಗಿ ಕಾರ್ಯನಿರ್ವಹಿಸುವುದು ಸಾಮಾನ್ಯ ಸಂಗತಿಯಲ್ಲ. ಇದು ನಮ್ಮಲ್ಲಿ ಪ್ರತಿಯೊಬ್ಬರಿಗೂ ಗೊತ್ತಿರುವಂಥದ್ದೇ. ಆದರೆ, ತಮ್ಮ ಹಸನ್ಮುಖಿ ಸ್ವಭಾವ, ಮನೋಭಾವ ಸೃಜನಶೀಲತೆ ಮತ್ತು ಸುಲಭವಾಗಿ ಕೈಗೆಟುಕುವಿಕೆಯಂತಹ ವೈಶಿಷ್ಟ್ಯಗಳಿಂದಾಗಿ ಹಾಗೂ ಪರಮಾವಧಿಯ ಲೋಕೋಪಕಾರ ಬುದ್ಧಿಯ ಕಾರಣದಿಂದಾಗಿ, ಪ್ರತಿಯೊಬ್ಬರಿಗೂ ತೃಪ್ತಿಯಾಗುವ ರೀತಿಯಲ್ಲಿ ಅವರು ತಮ್ಮ ಪಾಲಿನ ಹೊಣೆಗಾರಿಕೆಗಳನ್ನು ನಿಭಾಯಿಸಿಬಿಡುತ್ತಿದ್ದರು.

ನಾನು ಉಪರಾಷ್ಟ್ರಪತಿಯಾದ ತರುವಾಯ, ಜಿಎಸ್‌ಟಿಯಂಥ ಪ್ರಮುಖ ತೆರಿಗೆ ಸುಧಾರಣಾ ಉಪಕ್ರಮವನ್ನು ಜಾರಿಗೆ ತರುವಂಥ ಕಾರ್ಯಭಾರವನ್ನು ಸಂಪನ್ನಗೊಳಿಸುವುದಕ್ಕೆ ಸಂಬಂಧಿಸಿದ ಕೆಲಸಕಾರ್ಯಗಳು ಅಪೂರ್ಣವಾಗಿ ಉಳಿದಾಗ, ನಾನು ಚಿಂತಿತನಾಗಿದ್ದಿದೆ; ಏಕೆಂದರೆ, ಈ ಉಪಕ್ರಮದ ಪರಿಣಾಮಕಾರಿ ರೂಪಣೆ ಮತ್ತು ಅನುಷ್ಠಾನದ ವಿಷಯದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅಂದುಕೊಂಡಷ್ಟು ಸಾಮಾನ್ಯ ಸಂಗತಿಯಾಗಿರಲಿಲ್ಲ. ಆದರೆ, ವಿಭಿನ್ನ ದೃಷ್ಟಿಕೋನದವರನ್ನು ಸಂಧಿಸಿ, ಸಮಾಲೋಚಿಸಿ, ವಿಷಯವನ್ನು ತಲುಪಿಸಿ, ಅಂಥ ದೃಷ್ಟಿಕೋನಗಳನ್ನು ಅರ್ಥಮಾಡಿಕೊಂಡು ತರುವಾಯದಲ್ಲಿ ಮೌಲ್ಯನಿರ್ಣಯ ಮಾಡುವಂಥ ಹೊಣೆಗಾರಿಕೆಯನ್ನು ವಹಿಸಿಕೊಂಡ ಅನಂತ್‌ಕುಮಾರ್ ಈ ನಿಟ್ಟಿನಲ್ಲಿ ಅದ್ಭುತ ಸಾಧನೆಯನ್ನೇ ಮಾಡಿಬಿಟ್ಟರು. ಅಂತಿಮವಾಗಿ, ತೆರಿಗೆವ್ಯವಸ್ಥೆಗೆ ಸಂಬಂಧಿಸಿದಂತೆ ಅತಿದೊಡ್ಡ ರೂಪಾಂತರವಾಗಬೇಕೆಂಬ ದೇಶದ ಬಯಕೆಗೆ ಸಂಬಂಧಿಸಿದಂತೆ ಪ್ರಧಾನಮಂತ್ರಿಗಳು ಹೊಂದಿದ್ದ ದೃಷ್ಟಿಕೋನವು ಒಂದು ವಾಸ್ತವತೆಯಾಗುವಲ್ಲಿ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿಯವರೊಂದಿಗೆ ಕೈಜೋಡಿಸಿದ ಅನಂತ್‌ಕುಮಾರ್ ಅದು ಸಮರ್ಥವಾಗಿ ಕಾರ್ಯರೂಪಕ್ಕೆ ಬರುವಂತಾಗುವಲ್ಲಿನ ಕಾರಕಶಕ್ತಿಯಾದರು.

ತಮಗೆ ವಹಿಸಲಾದ ಯಾವುದೇ ಹೊಣೆಗಾರಿಕೆಯ ನಿಭಾವಣೆಯಲ್ಲಿ ಹೀಗೆ ವಿನಿಯೋಗಿಸುತ್ತಿದ್ದ ಶಕ್ತಿ, ಉತ್ಸಾಹ ಮತ್ತು ಪ್ರವರ್ತನಾ ಸಾಮರ್ಥ್ಯಕ್ಕೆ ಅವರು ಹೆಸರಾಗಿದ್ದರು. ಇನ್ನು, ಯೂರಿಯಾ ವಿಷಯಕ್ಕೆ ಸಂಬಂಧಪಟ್ಟಂತೆ, ಪ್ರಧಾನಮಂತ್ರಿಯವರ ನಾಯಕತ್ವ ಹಾಗೂ ಮಾರ್ಗದರ್ಶನದಲ್ಲಿ ಅವರು ಸಾಧಿಸಿದ ಐತಿಹಾಸಿಕ ಸಾಧನೆಯ ಬಗ್ಗೆ ಹೇಳಲೇಬೇಕು. ನನಗಿನ್ನೂ ನೆನಪಿದೆ, ೧೯೭೮ರಲ್ಲಿ ವಿಧಾನಸಭಾ ಶಾಸಕನಾದವ ನಾನು. ಅಂದು ಶಾಸನಸಭೆಯಲ್ಲಿ ಯೂರಿಯಾ ಕೊರತೆಯ ಕುರಿತಾಗಿ ಪ್ರತಿಭಟನೆ, ಕೋಲಾಹಲ, ಸಭಾತ್ಯಾಗ ಇತ್ಯಾದಿಗಳೆಲ್ಲ ನಡೆಯುತ್ತಿದ್ದವು. ನ್ಯಾಯಬೆಲೆ ಅಂಗಡಿಗಳ ಮುಂದೆ ಹನುಮಂತನ ಬಾಲದ ರೀತಿಯಲ್ಲಿ ಸರತಿಸಾಲುಗಳಿರುತ್ತಿದ್ದವು, ರೈತರಂತೂ ಮರುದಿನ ಬೆಳಗಾಗುವವರೆಗೆ ರಾತ್ರಿಪೂರಾ ಸರದಿಯಲ್ಲೇ ನಿಂತಿರಬೇಕಾಗುತ್ತಿತ್ತು. ಏಕೆಂದರೆ ರಸಗೊಬ್ಬರವೆಂಬುದು ಅವರ ಪಾಲಿಗೆ ಅಷ್ಟೊಂದು ಅನಿವಾರ್ಯವಾಗಿತ್ತು. ಜನರ ಬಳಿಯಿದ್ದ ಯೂರಿಯಾ ಸಂಗ್ರಹ ಅಲ್ಪಪ್ರಮಾಣದ್ದಾಗಿರುತ್ತಿತ್ತು. ಯೂರಿಯಾದ ಹೆಚ್ಚುವರಿ ಬಳಕೆಯು ಮಣ್ಣಿನ ಆರೋಗ್ಯಕ್ಕೆ ಹಾನಿಕರವಾಗಿದ್ದರೂ, ಕೃಷಿಕರು ಯೂರಿಯಾವನ್ನು ಬಯಸುತ್ತಿದ್ದರು. ಅನಂತ್‌ಕುಮಾರ್ ಅವರ ತವರುರಾಜ್ಯವಾಗಿರುವ ಕರ್ನಾಟಕದ ಗದಗ, ಹಾವೇರಿ ಮೊದಲಾದ ಕಡೆಗಳಲ್ಲಿ ಯೂರಿಯಾ ವಿಷಯಕ್ಕೆ ಸಂಬಂಧಿಸಿದಂತೆ ಗುಂಡುಹಾರಿಸುವಿಕೆಯ ವಿದ್ಯಮಾನಗಳೂ ಘಟಿಸಿದಂಥ ದಿನಗಳು ನನಗೆ ನೆನಪಿವೆ. ಆದರೆ ಅನಂತ್‌ಕುಮಾರ್ ಪಾರುಪತ್ಯದಿಂದಾಗಿ ಯೂರಿಯಾ ಕೊರತೆ ಇನ್ನಿಲ್ಲವಾಯಿತೆನ್ನಬೇಕು. ಅದು ಕೃಷಿಕ ಸಮುದಾಯಕ್ಕೆ ಅವರು ಮಾಡಿದ ಅತಿದೊಡ್ಡ ಸೇವೆ. ಅಷ್ಟೊತ್ತಿಗಾಗಲೇ ಮುಚ್ಚಲ್ಪಟ್ಟಿದ್ದ ಮಿಕ್ಕ ನಾಲ್ಕು ರಸಗೊಬ್ಬರ ತಯಾರಿಕಾ ಘಟಕಗಳ ಪುನಶ್ಚೇತನಕ್ಕೆ ಅನಂತ್ ಅತೀವ ಕಸರತ್ತು ನಡೆಸಿದ್ದರ ಪರಿಣಾಮವಾಗಿ, ಅವುಗಳ ಪುನರಾರಂಭಕ್ಕೆ ಇನ್ನೇನು ಕ್ಷಣಗಣನೆ ಆರಂಭವಾಗಿದೆ. ಇದು ಅನಂತ್ ಮಡಿಲಲ್ಲಿರುವ ಪ್ರಮುಖ ಸಾಧನೆಗಳಲ್ಲೊಂದು. ಭಾರಿ ಹೂಡಿಕೆಗಳ ನೆರವಿನಿಂದ ಆ ರಸಗೊಬ್ಬರ ತಯಾರಿಕಾ ಘಟಕಗಳ ಪುನಶ್ಚೇತನಕ್ಕೆ ಅವರು ಅತೀವ ಆಸಕ್ತಿ ತೋರಿದರು; ಅವು ಪುನರಾರಂಭಗೊಳ್ಳುತ್ತಿದ್ದಂತೆ ಅವಿರುವ ರಾಜ್ಯಗಳ ಪಾಲಿಗೆ ವರದಾನವಾಗುವುದರಲ್ಲಿ ಸಂದೇಹವಿಲ್ಲ. ದೇಶದ ಉದ್ದಗಲಕ್ಕೂ ಜನೌಷಧಿ ಕೇಂದ್ರಗಳನ್ನು ತೆರೆಯುವ ಅಥವಾ ವಿಸ್ತರಿಸುವ ನಿಟ್ಟಿನಲ್ಲಿ ಅವರು ಕಾರಕಶಕ್ತಿಯಾಗಿದ್ದರು ಎನ್ನಲಡ್ಡಿಯಿಲ್ಲ. ಮಹಿಳೆಯರ ಪ್ರಯೋಜನಕ್ಕೆಂದು "ಸುವಿಧಾ" ಎಂಬ ಹೆಸರಿನ ಪರಿಸರ-ಸ್ನೇಹಿ ಮತ್ತು ಜೈವಿಕವಾಗಿ ವಿಘಟನವಾಗಬಲ್ಲ ಸ್ಯಾನಿಟರಿ ಪ್ಯಾಡ್‌ಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಿದ್ದೂ ಅವರೇ.

ಪುಟ 7ರಲ್ಲಿ ಮುಂದುವರಿದಿದೆ

'ದೇಶ ಮೊದಲು' ವೆಬಿನಾರ್ ಸಂವಾದದ ಮುಖ್ಯ ಭಾಷಣದ ಸಂಗ್ರಹರೂಪ

# ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ನಾಯಕತ್ವ

**ಡಾ. ಆರ್. ಬಾಲಸುಬ್ರಹ್ಮಣ್ಯಂ**
ಸಾಮಾಜಿಕ ಕಾರ್ಯಕರ್ತರು ಹಾಗೂ ನಾಯಕತ್ವ ತರಬೇತುದಾರರು
ಸ್ವಾಮಿ ವಿವೇಕಾನಂದ ಕೇಂದ್ರ, ಮೈಸೂರು



ಕೋವಿಡ್ ಸಂಕಷ್ಟದ ಈ ಸಂದರ್ಭವು ಅತಿ ಮಹತ್ವದ್ದಾಗಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇಂಥ ಸಂಕಟಸ್ಥಿತಿಯನ್ನು ಎದುರಿಸುವ ಬಗೆ ಹೇಗೆ, ನಾಯಕತ್ವದ ಮಟ್ಟದಲ್ಲಿ ಅಥವಾ ತಾಂತ್ರಿಕ ಮಟ್ಟದಲ್ಲಿ ಈ ರೀತಿಯ ಸವಾಲನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ವಿವರಿಸುವ ಯಾವುದೇ ಪಠ್ಯ ಪುಸ್ತಕಗಳಿಲ್ಲ, ಸೋಂಕು ತಗುಲಿರಲಿ ಬಿಡಲಿ, ಜಗತ್ತಿನ ಎಲ್ಲ ಮನುಷ್ಯರ ಮೇಲೂ ಕೋವಿಡ್ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವ ಬೀರಿದೆ. ಎಲ್ಲ ದೇಶಗಳು, ಸಂಸ್ಥೆಗಳು, ಆರ್ಥಿಕತೆಗಳ ಮೇಲೆ ಮೊದಲ ಬಾರಿಗೆ ಸಾಮೂಹಿಕವಾಗಿ ಪರಿಣಾಮ ಬೀರಿದೆ, ಮುಖ್ಯವಾಗಿ ಈ ಜಗತ್ತಿನಲ್ಲಿ ನಮ್ಮಲ್ಲಿ ಪ್ರತಿಯೊಬ್ಬರೂ ಎಷ್ಟು ದುರ್ಬಲರಾಗಿದ್ದೇವೆ ಎನ್ನುವುದನ್ನು ತೋರಿಸಿಕೊಟ್ಟಿದೆ ಮಾತ್ರವಲ್ಲ, ಇಡೀ ಪ್ರಪಂಚವು ಪಾರಸ್ಪರಿಕವಾಗಿ ಒಂದರ ಮೇಲೊಂದು ಅವಲಂಬಿತವಾಗಿದೆ ಎಂಬುದೂ ಸಹ ನಿರೂಪಿತವಾಗಿದೆ.

ಕಳೆದ ಶತಮಾನಕ್ಕೆ ಹೋಲಿಸಿದರೆ ಇಂದಿನ ಪ್ರಪಂಚದ ಸಮಸ್ಯೆಗಳು ಹೆಚ್ಚು ಸಂಕೀರ್ಣವಾಗಿವೆ, ಒಂದು ಸೋಪ್ ಕೊಳ್ಳುವುದೇ ಅಸಾಧ್ಯವೆಂಬ ಸ್ಥಿತಿಯಲ್ಲಿರುವ ಗ್ರಾಮೀಣ ಸಮುದಾಯಕ್ಕೆ ಸಾಬೂನಿನಿಂದ ಕೈ ತೊಳೆಯುವ ಸಂದೇಶವನ್ನು ಮನದಟ್ಟುಮಾಡಿಕೊಡಬೇಕಾದ ಆಶಾ ಕಾರ್ಯಕರ್ತೆ, ತರಬೇತಿಯನ್ನೇ ಪಡೆಯದೆ ಇದ್ದಕ್ಕಿದ್ದಂತೆ ವೈದ್ಯಕೀಯ ಪರಿಸ್ಥಿತಿಯನ್ನು ನಿರ್ವಹಿಸಬೇಕಾಗಿರುವ ಜಿಲ್ಲಾಧಿಕಾರಿ ಇಂಥವರಿಂದ ಮೊದಲುಗೊಂಡು ಕೋವಿಡ್ ನಿಭಾವಣೆಯ ಹೆಚ್ಚುವರಿ ಕರ್ತವ್ಯದಲ್ಲಿ ಅಸಾಮಾನ್ಯ ನಾಯಕತ್ವವನ್ನು ಪ್ರದರ್ಶಿಸುತ್ತಿರುವ ಗೌರವಾನ್ವಿತ ಪ್ರಧಾನ ಮಂತ್ರಿಗಳವರೆಗೂ ಎಲ್ಲರೂ ಇಂದಿನ ಸಂದರ್ಭದಲ್ಲಿ ಮಹತ್ತ್ವದ ಸವಾಲುಗಳನ್ನು ನಿಭಾಯಿಸಬೇಕಾಗಿದೆ.

### ನಾಯಕತ್ವದ ಅಭಿವ್ಯಕ್ತಿ ಹೇಗೆ?

ಇಂತಹ ಸಂದರ್ಭಗಳಲ್ಲಿ ನಾಯಕತ್ವದ ಅಭಿವ್ಯಕ್ತಿ ಹೇಗೆ ಕಂಡುಬರುತ್ತದೆ ಎನ್ನುವುದು ಮಹತ್ತ್ವದ ವಿಷಯ. ಅನಂತಕುಮಾರ್ ಅವರ ಪಥವನ್ನು ಮತ್ತು ವಿದ್ಯಾರ್ಥಿ ನಾಯಕರಾಗಿ ಅವರ ಜೀವನದಲ್ಲಿ ಅವರು ಸಾಧಿಸಿದ ಸಾಧನೆಯನ್ನು ನೀವು ಗಮನಿಸಿದರೆ ನಾಯಕನಾಗಿರುವುದಕ್ಕಿಂತ ಹೆಚ್ಚಾಗಿ, ಅವರು ನಾಯಕತ್ವದ ಪ್ರಬಲ ಅಭಿವ್ಯಕ್ತಿ ಎಂತಹುದು ಎಂಬುದನ್ನು ನಮ್ಮೆಲ್ಲರಿಗೂ ತೋರಿಸಿಕೊಟ್ಟರು. ನಾಯಕನಾಗಿರುವುದು ಎಂದರೆ ಅದೊಂದು ಹೇಳಿಕೆ ಮಾತ್ರ; ನಾಯಕತ್ವವನ್ನು ವ್ಯಕ್ತಪಡಿಸುವುದು ಒಂದು ಜೀವನಶೈಲಿ. ಇವೆರಡರ ನಡುವೆ ಭಾರಿ ವ್ಯತ್ಯಾಸವಿದೆ. ತನ್ನಲ್ಲಿರುವ ಕೌಶಲ್ಯದ ಭಂಡಾರವನ್ನು ಉಪಯೋಗಿಸಿ ಕೋವಿಡ್ ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸಬಲ್ಲೆ ಎಂದು ಹೇಳುವ ಒಬ್ಬನೇ ವ್ಯಕ್ತಿಯೂ ಈ ಜಗತ್ತಿನಲ್ಲಿ ಇಲ್ಲ, ಹೀಗಿರುವಾಗ ನಮ್ಮ ದೇಶದಲ್ಲಿ ಈ ಬಿಕ್ಕಟ್ಟನ್ನು ಎದುರಿಸಲು ಸನ್ನದ್ಧವಾದ ನಾಯಕತ್ವದ ಪರಿಮಾಣವನ್ನು ಗಮನಿಸುವುದು ಬಹು ಮುಖ್ಯ.

ಇಲ್ಲಿ ನಾಯಕತ್ವವು ಮೂರು ಹಂತಗಳಲ್ಲಿ ವ್ಯಕ್ತಪಡಲು ಸಾಧ್ಯ. ಭಾರತವು ಪ್ರದರ್ಶಿಸಬಹುದಾದ ಮೊದಲ ಹಂತದ ನಾಯಕತ್ವವನ್ನು ನಾನು ಬಿಕ್ಕಟ್ಟಿನ ನಾಯಕತ್ವವೆಂದು (crisis leadership) ಕರೆಯುತ್ತೇನೆ, ಎಂದರೆ, ನಾವು ಸ್ಥಳೀಯವಾಗಿ ನಾಗರಿಕರ ಮಟ್ಟದಲ್ಲಿ ನಾಯಕತ್ವವನ್ನು ಪ್ರದರ್ಶಿಸುವ ಹಾಗೂ ನಿಭಾಯಿಸುವ ಕ್ರಮ. ಮುಂದಿನ ಹಂತದ ನಾಯಕತ್ವವನ್ನು ನಾನು ಕಾರ್ಯಕ್ಷಮತೆ ನಾಯಕತ್ವ (performance leadership) ಎಂದು ಕರೆಯುತ್ತೇನೆ. ಪ್ರತಿಯೊಬ್ಬರೂ ಬಿಕ್ಕಟ್ಟಿನತ್ತ ಗಮನವನ್ನು ಹರಿಸಬಹುದು ಆದರೆ ದೇಶಕ್ಕೆ ಮಹತ್ತ್ವದ್ದೆನಿಸುವ ಉಳಿದ ವ್ಯವಸ್ಥೆಗಳನ್ನು ನಡೆಸುವ ಬಗ್ಗೆ ಕಾರ್ಯಕ್ಷಮತೆಯ ನಾಯಕತ್ವ ಗಮನ ಹರಿಸುತ್ತದೆ. ರಾಷ್ಟ್ರಕ್ಕೆ ನಿಜವಾದ ನಾಯಕತ್ವವನ್ನು ಒದಗಿಸುವ ಮೂರನೆಯ ಪ್ರಮುಖ ನಾಯಕತ್ವವೆಂದರೆ, ಕಾರ್ಯತಂತ್ರದ ಪರಿವರ್ತನೀಯ ನಾಯಕತ್ವ (strategic transformation leadership). ಒಬ್ಬ ರಾಷ್ಟ್ರೀಯ ನಾಯಕನು ಅದನ್ನು ಒದಗಿಸಬಲ್ಲನು, ಭಾರತವು ಜಗತ್ತಿಗೆ ಪ್ರದರ್ಶಿಸುವ ಕಾರ್ಯತಂತ್ರದ ಮಟ್ಟದಲ್ಲಿ ಪರಿವರ್ತನೆಯ ನಾಯಕತ್ವ ಮಹತ್ತ್ವದ್ದು. ಬಿಕ್ಕಟ್ಟಿನ ನಾಯಕತ್ವ, ಕಾರ್ಯಕ್ಷಮತೆ ನಾಯಕತ್ವ ಮತ್ತು ಕಾರ್ಯತಂತ್ರದ ಪರಿವರ್ತನೆಯ ನಾಯಕತ್ವವನ್ನು ನಾವು ಹೇಗೆ ಯಶಸ್ವಿಯಾಗಿ ನಿರ್ವಹಿಸುತ್ತೇವೆ ಎಂಬುದೇ ಒಂದು ಸಮರ್ಥ ರಾಷ್ಟ್ರವಾಗಿ ನಾವು ಜಗತ್ತಿನ ಇತರ ಭಾಗಗಳಿಗೆ ಕಲಿಸಬಹುದಾದ ಪಾಠವಾಗಿದೆ.

ಬಿಕ್ಕಟ್ಟಿನ ನಾಯಕತ್ವದ ಮೊದಲ ಹೆಜ್ಜೆಯೇನೆಂದರೆ, 'ಸಮಸ್ಯೆ ಇದೆ 'ಎಂದು ಜನರಿಗೆ ತಿಳಿಸುವುದು. 'ಸಮಸ್ಯೆಯೇನೋ ಇದೆ. ಆದರೆ ಚಿಂತಿಸಬೇಡಿ. ನೀವೆಲ್ಲ ಒಟ್ಟಿಗೆ ಇದ್ದರೆ, ನಾವು ಅದನ್ನು ಪರಿಹರಿಸಲು ಸಾಧ್ಯವಾಗುತ್ತದೆ' ಎಂದು ಹೇಳಿದ ನಮ್ಮ ಗೌರವಾನ್ವಿತ ಪ್ರಧಾನಿಯವರು ಈ ದೇಶದ ೧೩೦ ಕೋಟಿ ಜನರು, ನಾವೆಲ್ಲರೂ ಒಟ್ಟಾಗಿ ಪರಿಹಾರವನ್ನು ಕಂಡುಕೊಳ್ಳುತ್ತೇವೆ ಮತ್ತು ಪಡೆಯುತ್ತೇವೆ ಎಂದು ಹೇಳಿದರು. ಇದು ಜನರಿಗೆ ಒಗ್ಗಟ್ಟಿನ ಹಿರಿಮೆಯನ್ನು ಮನವರಿಕೆ ಮಾಡಿಕೊಡುವ, ಬಿಕ್ಕಟ್ಟಿನ ನಾಯಕತ್ವದ ಮೊದಲ ಸೂಚಕವಾಗಿದೆ. ಬಿಕ್ಕಟ್ಟು ಇದೆ. ಅದು ನಿಜ. ಆದರೆ ನಾವು ಅದರಿಂದ ಮುಳುಗಬಾರದು.

### ಜೀವನ ಮೊದಲು. ಆರ್ಥಿಕತೆ ಆಮೇಲೆ

ಜೀವನ ಮೊದಲು. ಆರ್ಥಿಕತೆ ಆಮೇಲೆ. ಜನರಿಲ್ಲದೆ ಆರ್ಥಿಕತೆ ಎಲ್ಲಿದೆ? ನಮ್ಮ ಇಡೀ ದೇಶದ ಆರೋಗ್ಯ ವ್ಯವಸ್ಥೆಗಳ ಮೇಲೆ ಈ ಒಂದೇ ಸಂದೇಶವು ಸಾಕಷ್ಟು ಪರಿಣಾಮ ಬೀರಿತು . ನಮ್ಮ ಆರೋಗ್ಯಪಾಲನಾ ವ್ಯವಸ್ಥೆ ಮಾಡಿದ ಸೇವೆಯು ನಮಗೆಲ್ಲ ಹೆಮ್ಮೆಯ ವಿಷಯ ಎಂದು ನಾನು ಭಾವಿಸುತ್ತೇನೆ. ಅದು ಪರಿಪೂರ್ಣವೆಂದು ನಾನು ಹೇಳುತ್ತಿಲ್ಲ, ಕೆಲವು ಅಡಚಣೆಗಳೂ ಇದ್ದವು. ಆದರೆ ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳು ಎಂಥ ಕಠಿಣ ಪರಿಸ್ಥಿತಿಗೂ ಸ್ಪಂದಿಸಬಲ್ಲವು ಎಂಬುದನ್ನು ನಿಜವಾಗಿ ತೋರಿಸಿಕೊಟ್ಟಿವೆ.

ಕೋವಿಡ್ ಇಡೀ ಸಮುದಾಯಕ್ಕೆ ಸವಾಲಾಗಿದೆಯೆಂದು ವಿಭಿನ್ನ ವಿಭಾಗಗಳ ಜನರು ಏಕಾಭಿಪ್ರಾಯ ಹೊಂದಿರುವುದು ಹೇಗೆ? ತಂತಮ್ಮ ವಲಯದ ವ್ಯಾಖ್ಯಾನ, ವಲಯದ ಆದೇಶಗಳು ಅಥವಾ ಶಿಸ್ತಿನ ಪರಿಣತಿಯನ್ನು ಬದಿಗಿಟ್ಟು ಎಲ್ಲಾ ಕ್ಷೇತ್ರಗಳು ಮೊಟ್ಟ ಮೊದಲ ಬಾರಿಗೆ ಮಾನವೀಯತೆಯ ಹಿತಾಸಕ್ತಿಗಾಗಿ ನಾವೆಲ್ಲ ಒಟ್ಟಾಗಿ ಬರಬೇಕು ಎಂಬುದನ್ನು ಅರಿತುಕೊಂಡಿದ್ದೇವೆ . ಇದೀಗ ವಿಶ್ವ ಸಮುದಾಯಗಳೇ ಪರಸ್ಪರ ಕೈಜೋಡಿಸಿವೆ.

### ಸಂಕಷ್ಟದಲ್ಲೂ ಆತ್ಮನಿರ್ಭರತೆ

ಆತ್ಮನಿರ್ಭರತೆ ತತ್ತ್ವದ ವ್ಯಾಖ್ಯಾನವನ್ನು ನೋಡಿದರೆ, ಅದು ಕಾರ್ಯಕ್ಷಮತೆ ನಾಯಕತ್ವ ಮತ್ತು ಕಾರ್ಯತಂತ್ರದ ನಾಯಕತ್ವದ ಸಂಯೋಜನೆ ಎಂದು ನಾನು ಭಾವಿಸುತ್ತೇನೆ. ಆತ್ಮನಿರ್ಭರತೆ ಎನ್ನುವುದು ಆರ್ಥಿಕ ಸ್ವಾವಲಂಬನೆ ಮಾತ್ರವೇ ಅಲ್ಲ, ಇದು ರಾಷ್ಟ್ರೀಯ ಸರ್ಕಾರದ ಒಂದು ಮಹತ್ತ್ವದ ನಾಯಕತ್ವದ ಸೂಚನೆಯ ಅತ್ಯಂತ ಸೀಮಿತ ಅಭಿವ್ಯಕ್ತಿ ಎಂದು ನಾನು ಭಾವಿಸುತ್ತೇನೆ.

ಪಿ.ಪಿ.ಇ. ಹಾಗೂ ವೆಂಟಿಲೇಟರ್‌ಗಳನ್ನು ಉತ್ಪಾದಿಸುವ ನಮ್ಮ ಸಾಮರ್ಥ್ಯಕ್ಕೆ ಹೆಮ್ಮೆ ಪಟ್ಟುಕೊಂಡು ಸಂಭ್ರಮಿಸಲು ಕೆಲವು ಕಾರಣಗಳಿವೆ. ನಾವು ಬಿಕ್ಕಟ್ಟನ್ನು ಹೊಂದಿರುವಾಗ, ಬಿಕ್ಕಟ್ಟಿನ ನಾಯಕತ್ವ ಪಿ.ಪಿ.ಇ. ಮತ್ತು ವೆಂಟಿಲೇಟರ್‌ಗಳ ರಫ್ತಿನ ಮೇಲೆ ನಿಷೇಧ ಹೇರಿತ್ತು. ಆದರೆ, ಭಾರತವು ಸಂಪೂರ್ಣವಾಗಿ ಸ್ವಾವಲಂಬಿಯಾಗಿದೆ ಎಂದು ನಾವು ಸ್ಥಾಪಿಸಿದ ನಂತರ, ತಕ್ಷಣವೇ ರಾಷ್ಟ್ರೀಯ ಸರ್ಕಾರವು ಮಾರುಕಟ್ಟೆಯನ್ನು ಮುಕ್ತಗೊಳಿಸಿತು, ಇದರಿಂದಾಗಿ ನಮ್ಮ ಉದ್ಯಮಿಗಳಿಗೆ ತಮ್ಮ ಮಳಿಗೆಗಳಲ್ಲಿ ದಾಸ್ತಾನು ಧೂಳು ಹಿಡಿಯುವ ಬಗ್ಗೆ ಚಿಂತಿಸಬೇಕಾಗಿ ಬರಲಿಲ್ಲ. ಇಂದು ಭಾರತವು ಪಿ.ಪಿ.ಇ. ಹಾಗೂ ವೆಂಟಿಲೇಟರ್‌ಗಳನ್ನು ವಿಶ್ವದಾದ್ಯಂತ ರಫ್ತುಮಾಡುತ್ತಿದೆ. ನಿಮ್ಮ ಉತ್ಪನ್ನಗಳಿಗೆ ಸಿಗುತ್ತಿರುವ ಜಾಗತಿಕ ಮಾನ್ಯತೆಯನ್ನು ಗಮನಿಸಿದರೆ, ಅದಕ್ಕಿಂತ ದೊಡ್ಡದಾದ ಆತ್ಮನಿರ್ಭರತೆ ಮತ್ತೇನಿದೆ?

### ಕೋವಿಡ್ ಒಂದು ಅವಕಾಶ

ಮೊದಮೊದಲಿಗೆ ನಾವು ಕೋವಿಡ್ ಅನ್ನು ಒಂದು ಬಿಕ್ಕಟ್ಟು ಎಂದು ಗುರುತಿಸಬೇಕಾಗಿತ್ತು. ಆದರೆ ಇಂದಿನ ನಿರೂಪಣೆಯೇನೆಂದರೆ, ಕೋವಿಡ್ ಒಂದು ಅವಕಾಶ. ಭಾರತದಲ್ಲಿ ಹೊಸ ಭವಿಷ್ಯವನ್ನು ಸಿದ್ಧಪಡಿಸಲು ನಾವು ಕ್ರೋಡೀಕರಿಸಬೇಕಾದ ಸಂಪನ್ಮೂಲಕ್ಕೆ ಇದು ಒಂದು ಅಪಾರ ಅವಕಾಶ. ಭವಿಷ್ಯದಲ್ಲಿ ನಾವು ಎದುರಿಸಬಹುದಾದ ಎಲ್ಲಾ ಸವಾಲುಗಳ ವಿರುದ್ಧ ನಾವು ಭಾರತವನ್ನು ಸಿದ್ಧಗೊಳಿಸಬೇಕಾಗಿದೆ . ಆ ಮುಂಚೂಣಿಯ ಸ್ಥಾನಗಳನ್ನು ಆಕ್ರಮಿಸಿಕೊಳ್ಳಲು ಯುವಜನರನ್ನು ಸನ್ನದ್ಧಗೊಳಿಸಿದಾಗ ಮಾತ್ರ ಈ ಅವಕಾಶವು ಫಲಿಸಬಲ್ಲುದು.

ಭಾರತೀಯರಾದ ನಮ್ಮ ಕಲ್ಪನಾಲೋಕವು ಎಷ್ಟೋ ಸಲ ಅದೃಶ್ಯವಾದ ಮಂತ್ರದಂಡವನ್ನು ನಿರೀಕ್ಷಿಸುತ್ತಿರುತ್ತದೆ. ಆ ದಂಡ ಒಮ್ಮೆ ಬೀಸುತ್ತಿದ್ದಂತೆಯೇ ನಮ್ಮ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತವೆ ಎಂಬ ಭ್ರಮೆ ನಮ್ಮನ್ನು ಆವರಿಸಿರುತ್ತದೆ. ದೇಶದ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಯಾವುದೇ ಒಬ್ಬನೇ ನಾಯಕನಿಗೆ ಸಾಧ್ಯವಿಲ್ಲ. ನಾವು ಸಮಸ್ಯೆಯನ್ನು ಪರಿಹರಿಸಲು ಇರುವ ಏಕೈಕ ಮಾರ್ಗವೆಂದರೆ, ಪ್ರತಿಯೊಬ್ಬರಲ್ಲೂ ನಾಯಕತ್ವವನ್ನು ಗುರುತಿಸಿ ಹೊರತರುವುದು; ಅವಕಾಶಗಳನ್ನು ಕಲ್ಪಿಸುವುದು. ೧೩೦ ಕೋಟಿ ಭಾರತೀಯರು. ಈ ಸರಳ ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಕೆಲವೊಮ್ಮೆ ಮೈಸೂರಿನ ಬೀದಿಗಳಲ್ಲಿ ನಡೆಯುವಾಗ, ಜನರು ಕೋವಿಡ್ ರಜೆ ತೆಗೆದುಕೊಂಡು ಹೋಗಿಯೇ ಬಿಟ್ಟಿದೆ ಎಂದು ಭಾವಿಸಿ ನಿಶ್ಚಿಂತರಾಗಿ ನಡೆಯುವುದನ್ನು ನೋಡಿದರೆ ದುಃಖವೆನಿಸುತ್ತದೆ. ಜನರು ಸಾಮಾಜಿಕ ದೂರವನ್ನೇ ಮರೆತುಬಿಡುತ್ತಾರೆ. ಆದ್ದರಿಂದ ನಾಯಕತ್ವವು ಆಡಳಿತಶಿಖರದ ಮೇಲ್ಭಾಗದಲ್ಲಿಲ್ಲ. ಕೆಳಭಾಗದ ಪ್ರತಿಯೊಬ್ಬರೂ ನಾಯಕರೇ ಆಗಿದ್ದಾರೆ. ಇಂದು, ವ್ಯವಸ್ಥೆಯನ್ನು ಟೀಕಿಸುವುದನ್ನು ನಿಲ್ಲಿಸಿ ನಾವೆಲ್ಲರೂ ಪರಿಹಾರದ ಅನಿವಾರ್ಯ ಭಾಗವೇ ಆಗಿದ್ದೇವೆ ಎಂದು ನಾವು ಅರ್ಥಮಾಡಿಕೊಂಡರೆ ಸಾಕು.

ಯೋಜನೆಯ ಅನುಷ್ಠಾನದಲ್ಲಿ ವೈಫಲ್ಯಗಳೂ ಇಲ್ಲದಿಲ್ಲ. ಇಂದಿಗೂ ಹಲವಾರು ಜಿಲ್ಲೆಗಳು ಬಿಕ್ಕಟ್ಟನ್ನು ಹೇಗೆ ನಿರ್ವಹಿಸುವುದು ಎಂದು ಅರ್ಥಮಾಡಿಕೊಳ್ಳುತ್ತಿಲ್ಲ, ಅನೇಕರು ಕಲಿಯಬೇಕಾದ ಪಾಠಗಳು ಇನ್ನೂ ಇವೆ. ಅಧಿಕಾರಶಾಹಿಯನ್ನು ಹೇಗೆ ಬಲಪಡಿಸಬೇಕು ಎಂಬುದನ್ನು ಕಲಿಯಲು ಇವು ಪಾಠಗಳಾಗಿವೆ. ಕಳೆದ ೨೦ ವರ್ಷಗಳ ಔದಾಸೀನ್ಯದಿಂದ ಸಡಿಲಗೊಂಡಿರುವ ನಟ್ಟು ಬೋಲ್ಟುಗಳನ್ನು ಬಿಗಿಗೊಳಿಸುವ ಅವಕಾಶವು ಇದೀಗ ಒದಗಿಬಂದಿದೆ. ನಾವು ನಿಜವಾಗಿಯೂ ಈ ಜಗತ್ತನ್ನು ಉತ್ತಮ ಸ್ಥಳವನ್ನಾಗಿ ಮಾಡುತ್ತೇವೆ. ಅದಕ್ಕೆ ತಕ್ಕ ಬದಲಾವಣೆ ಭಾರತದಿಂದಲೇ ಆಗುತ್ತದೆ.

### ಪ್ರತಿಷ್ಠಾನದ ಪ್ರಯತ್ನಕ್ಕೆ ಕೈಜೋಡಿಸೋಣ

ಶ್ರೀ ಅನಂತಕುಮಾರರ ಎರಡು ಪ್ರಬಲ ಕ್ಷೇತ್ರಗಳಾಗಿರುವ ಸಾರ್ವಜನಿಕ ನೀತಿ ಮತ್ತು ನಾಯಕತ್ವದತ್ತ ಗಮನ ಹರಿಸುವ ಅನಂತಕುಮಾರ್ ಪ್ರತಿಷ್ಠಾನದ ಪ್ರಯತ್ನಕ್ಕೆ ಎಲ್ಲರೂ ಕೈಜೋಡಿಸೋಣ. ನೀತಿಯನ್ನು ಕುರಿತ ಅವರ ದೃಷ್ಟಿಕೋನ ಮತ್ತು ನೀತಿ ಜಾರಿಗೆ ಬರುವುದನ್ನು ಖಚಿತಪಡಿಸಿಕೊಳ್ಳುವ ನಾಯಕತ್ವ ನಮ್ಮೆಲ್ಲರಿಗೂ ಪಾಠಗಳಾಗಿವೆ. ಪ್ರೊ.ಕೃಷ್ಣ ಭಟ್ ಮತ್ತು ಇತರ ಪ್ರಖ್ಯಾತ ವ್ಯಕ್ತಿಗಳೊಂದಿಗೆ ಡಾ.ತೇಜಸ್ವಿನಿ ಮತ್ತು ಅವರ ನಾಯಕತ್ವವು ಹೊಸ ಪಡೆಯನ್ನು ರಚಿಸುತ್ತದೆ, ಹೊಸ ಪೀಳಿಗೆಯ ಯುವಜನರು ಪರಿವರ್ತನೆಯ ಹರಿಕಾರರಾಗಲಿದ್ದಾರೆ ಎಂದು ನನಗೆ ಖಾತ್ರಿಯಿದೆ. ಭಾರತ ಈ ಯುವಜನರ ಮೇಲೆ ಹೂಡಿಕೆ ಮಾಡಬೇಕಾದ ನಾಯಕತ್ವದ ದರ್ಶನ, ಭರವಸೆಗಳೇ ನಮ್ಮ ದೇಶವು ಪ್ರಪಂಚದ ಉಳಿದ ಭಾಗಗಳಿಗೆ ನೀಡಬಹುದಾದ ನೀತಿ ಸೂಚನೆಯ ದರ್ಶನವೂ ಆಗಿದೆ . ಇದೇ ವಿವೇಕಾನಂದರಂತಹ ಜನರು ಮಾತೃ ಭಾರತವನ್ನು ಜಗತ್ತಿನ ಸಿಂಹಾಸನದಲ್ಲಿ ಕಂಡ ಕನಸು .

“ದೇಶ ಮೊದಲು" 'ನೇಷನ್ ಫಸ್ಟ್ ' ಎಂಬುದು ಅತ್ಯಂತ ಶಕ್ತಿಯುತ ಘೋಷಣೆಯಾಗಿದೆ ; ಬಹುಶಃ ಇದು ಆತ್ಮನಿರ್ಭರತೆಯ ಆಂಗ್ಲೀಕರಣಗೊಂಡ ಆವೃತ್ತಿಯಾಗಿದೆ. ಪ್ರತಿಯೊಂದು ಹಂತದಲ್ಲೂ ರಾಷ್ಟ್ರವನ್ನು ಮುಂದಿರಿಸಿಕೊಳ್ಳುವುದೇ ನಾವು ಸಲ್ಲಿಸಬೇಕಾದ ಕರ್ತವ್ಯ. ಇದೇ ಅನಂತ್ ಕುಮಾರ್ ಅವರಂತಹ ಮಹನೀಯರು ರಾಜಕೀಯ ದಂತಕತೆಯೆನಿಸಿಕೊಳ್ಳಲು ದೊಡ್ಡ ಸಾಕ್ಷಿಯೂ ಆಗಿದೆ.

# ಆರೋಗ್ಯ ನೀತಿಯಲ್ಲಿ ಮಹತ್ತ್ವದ ಪರಿವರ್ತನೆಯ ಕ್ರಮಗಳು

## ಟೆಲಿಮೆಡಿಸನ್ ಹಾಗು ಉನ್ನತ ವೈದ್ಯಕೀಯ ಶಿಕ್ಷಣಕ್ಕೆ ತೆರೆದ ಬಾಗಿಲು



ಕೋವಿಡ್ ನಮ್ಮ ದೇಶಕ್ಕೆ ಏನು ಮಾಡಿದೆ? ಕೋವಿಡ್ ಇಡಿಯ ಜಗತ್ತನ್ನೇ ತಲೆಕೆಳಗಾಗಿ ಮಾಡಿದೆ ; ಇದರ ಅನಾಹುತದಿಂದ ಭಾರತವೇನೂ ಹೊರತಾಗಿಲ್ಲ.

ಈ ಆತಂಕದ ಸನ್ನಿವೇಶದಲ್ಲಿ ನಮ್ಮ ಕೇಂದ್ರ ಸರ್ಕಾರವು ಕಳೆದ ಕೆಲವು ವಾರಗಳಲ್ಲಿ ತೆಗೆದುಕೊಂಡ ಎರಡು ನೀತಿ ನಿರ್ಧಾರಗಳಿಗೆ ನಾನು ಒತ್ತು ನೀಡಲು ಬಯಸುತ್ತೇನೆ, ಇದು ದೇಶದ ಜನಸಂಖ್ಯೆಯ ಕನಿಷ್ಠಅರ್ಧ ಭಾಗದಷ್ಟಾದರೂ ಜನರನ್ನು ಆರೋಗ್ಯ ರಕ್ಷಣೆಗೆ ಒಳಪಡಿಸಬಲ್ಲ ವಿಧಾನದ ಮೇಲೆ ಯಶಸ್ವೀ ಪರಿಣಾಮ ಬೀರುತ್ತದೆ.

ಲಾಕ್ ಡೌನ್ ಹೊರತುಪಡಿಸಿ ಸರ್ಕಾರವು ಜಾರಿಗೆ ತಂದ ಮೊದಲ ನೀತಿಯೆಂದರೆ ಟೆಲಿಮೆಡಿಸಿನ್ . ಟೆಲಿಮೆಡಿಸಿನ್ ಬಗ್ಗೆ ನಾವು ೧೨ ವರ್ಷಗಳ ಹಿಂದೆಯೇ ಕೇಳಿದ್ದರೂ ಸಹ ಇತ್ತೀಚಿನ ದಿನಗಳವರೆಗೂ ಇದು ಕಾನೂನುಬಾಹಿರವಾಗಿತ್ತು, ಪ್ರಾಥಮಿಕ ಮತ್ತು ಎರಡನೆಯ ಹಂತದ ಆರೋಗ್ಯ ರಕ್ಷಣೆಯು ದೇಶದ ಸಾಮಾನ್ಯ ಮನುಷ್ಯನಿಗೆ ತಲುಪುವ ವಿಧಾನವನ್ನು ಈ ಟೆಲಿಮೆಡಿಸನ್ ಸಂಪೂರ್ಣವಾಗಿ ಬದಲಾಯಿಸಲಿದೆ.. ಈಗ ಅದು ಕಾನೂನುಬದ್ಧವಾಗಿರುವುದು ಒಂದು ಪ್ರಮುಖ ಹೆಜ್ಜೆಯಾಗಿದೆ.

ಆಗಸ್ಟ್ ತಿಂಗಳ ಆರನೇ ತಾರೀಖಿನಂದು ಸರ್ಕಾರ ಕೈಗೊಂಡಿರುವ ಇನ್ನೊಂದು ಮಹತ್ತ್ವದ ಕ್ರಮವೇನೆಂದರೆ, ಉತ್ತಮ ಮೂಲಸೌಕರ್ಯ ಮತ್ತು ನೂರು ಹಾಸಿಗೆಗಳನ್ನು ಹೊಂದಿರುವ ಯಾವುದೇ ಆಸ್ಪತ್ರೆಗೆ ಶಿಕ್ಷಣ ಸೌಲಭ್ಯದ ಅಧಿಕಾರ ನೀಡುವ ಮೂಲಕ ಉನ್ನತ ವೈದ್ಯಕೀಯ ಶಿಕ್ಷಣವನ್ನು ಮುಕ್ತಗೊಳಿಸುವುದು.

ಈ ಕ್ರಮದಿಂದಾಗಿ, ಸ್ತ್ರೀರೋಗ ಶಾಸ್ತ್ರ, ಅನಸ್ತಾಸಿಯಾ, ಪೀಡಿಯಾಟ್ರಿಕ್ಸ್ , ವಿಕಿರಣಶಾಸ್ತ್ರ ಮತ್ತು ಇತರ ವಿಶೇಷತೆಗಳಲ್ಲಿ ಎಂಬಿಬಿಎಸ್ ವೈದ್ಯರನ್ನು ಡಿಪ್ಲೊಮಾ ಪದವಿ ಪಡೆದವರನ್ನಾಗಿ ಪರಿವರ್ತಿಸುವುದು ಸುಲಭಸಾಧ್ಯವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಏನಾಗಬಹುದು ? ಎಂದರೆ, ೨೦೦ ಜಿಲ್ಲಾ ಆಸ್ಪತ್ರೆಗಳು, ಕೆಲವು ಸಾವಿರ ತಾಲೂಕು ಆಸ್ಪತ್ರೆಗಳು ಮತ್ತು ಬಹುಪಾಲು ಸಮುದಾಯ ಆರೋಗ್ಯ ಕೇಂದ್ರಗಳು ಸ್ನಾತಕೋತ್ತರ ಸಂಸ್ಥೆಗಳೇ ಆಗಿ ಪರಿವರ್ತಿತವಾಗಬಹುದು.

ಈಗ ಈ ನೀತಿ ಬದಲಾವಣೆಯ ಪರಿಣಾಮ ಏನು? ಈ ಮುನ್ನ ಇದ್ದ ಪರಿಸ್ಥಿತಿ ಹೀಗಿದೆ: ಪ್ರತಿವರ್ಷ ಒಂದು ಲಕ್ಷ ಎಪ್ಪತ್ತು ಸಾವಿರದಷ್ಟು ಯುವ ವೈದ್ಯರು ಅಮೂಲ್ಯವಾದ ಪಿಜಿ ಸೀಟುಗಳಲ್ಲಿ ಒಂದನ್ನು ಪಡೆಯಲು ಪ್ರವೇಶ ಪರೀಕ್ಷೆಗೆ ಹಾಜರಾಗುತ್ತಾರೆ ; ಆದರೆ, ಅವರಲ್ಲಿ ೪೦,೦೦೦ ಕ್ಕಿಂತ ಹೆಚ್ಚು ಜನರು ಪಿಜಿ ಸೀಟ್ ಪಡೆಯುವುದಿಲ್ಲ . ಹಾಗೆಂದು ಉಳಿದ ಒಂದು ಲಕ್ಷ ಇಪ್ಪತ್ತು ಸಾವಿರ ಜನರು ಕ್ಲಿನಿಕಲ್ ಅಭ್ಯಾಸಕ್ಕೆ ಹಿಂತಿರುಗುವುದಿಲ್ಲ, ಅಂದರೆ, ಆಸ್ಪತ್ರೆಯಲ್ಲಿ ಕೆಲಸ ಮಾಡುವ ಬಗ್ಗೆ ಚಿಂತಿಸುವುದಿಲ್ಲ. ಬದಲಾಗಿ ಅವರು ನೇರವಾಗಿ ಕೇರಳಕ್ಕೋ ಅಥವಾ ರಾಜಸ್ಥಾನದ ಕೋಟಾ ಎಂಬ ಊರಿಗೋ ಹೋಗುತ್ತಾರೆ. ಅಲ್ಲಿ ಅವರು ಎರಡು ವರ್ಷದಿಂದ ಐದು ವರ್ಷಗಳವರೆಗೆ ಕೋಚಿಂಗ್ ತರಗತಿಗಳಿಗೆ ಹಾಜರಾಗುತ್ತಾರೆ, ಪಿಜಿ ಸೀಟುಗಳಲ್ಲಿ ಒಂದನ್ನು ಪಡೆಯಲು ರೋಗಿಗಳ ಆರೈಕೆಗೆ ಬದಲಾಗಿ, ಬಹು ಆಯ್ಕೆ ಪ್ರಶ್ನೆಗಳನ್ನು ಬಾಯಿಪಾಠ ಮಾಡುತ್ತ ಕಾಲಹರಣ ಮಾಡುತ್ತಾರೆ. ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಅವರಿಗೆ ಸೀಟೂ ದಕ್ಕುವುದಿಲ್ಲ, ಇನ್ನೊಂದೆಡೆ ಅವರ ಕಲಿಕೆಯ ಪ್ರಯೋಜನ ರೋಗಿಗಳಿಗೂ ಸಿಕ್ಕುವುದಿಲ್ಲ.

ವಸ್ತುಸ್ಥಿತಿ ಹೀಗಿರುವಾಗ, ಇಂದು ನೀವು ಸರ್ಕಾರಿ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗೆ ಹೋದರೆ, ಮಧ್ಯಮಮಟ್ಟದ ತಜ್ಞರು ಕಂಡುಬರುವುದೇ ಇಲ್ಲ. ವಿಷಯ ತಜ್ಞರು ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಜ್ಞರ ಕೊರತೆ ೮೦% ಇದೆ. ವಿಶೇಷವಾಗಿ ಈ ನೀತಿಯನ್ನು ಪ್ರಾರಂಭಿಸುವುದರೊಂದಿಗೆ ಪರಿಸ್ಥಿತಿ ಬದಲಾಗುವುದು ಖಚಿತ. ನನ್ನ ಮಾತನ್ನು ನೀವು ನಂಬಬಹುದು. ಈ ನೀತಿಯನ್ನು ರಾಜ್ಯ ಸರ್ಕಾರಗಳು ಉತ್ತಮವಾಗಿ ಜಾರಿಗೊಳಿಸಿದರೆ ನಾಲ್ಕು ವರ್ಷಗಳಿಗಿಂತ ಕಡಿಮೆ ಅವಧಿಯಲ್ಲಿ ಎಲ್ಲಾ ಸಾರ್ವಜನಿಕ ಆಸ್ಪತ್ರೆಗಳನ್ನು ಸಂಪೂರ್ಣವಾಗಿ ಕಾರ್ಯತತ್ಪರಗೊಳಿಸಲು ನಾವು ಸಾಕಷ್ಟು ಸಂಖ್ಯೆಯ ವೈದ್ಯಕೀಯ ತಜ್ಞರನ್ನು ಹೊಂದಲಿದ್ದೇವೆ. ಸಾರ್ವಜನಿಕ ಆಸ್ಪತ್ರೆಗಳನ್ನು ಕಾರ್ಯಶೀಲಗೊಳಿಸುವುದು ದೇಶಕ್ಕೆ ಅತ್ಯಂತ ಮುಖ್ಯವಾದ ವಿಷಯ. ಏಕೆಂದರೆ ಖಾಸಗಿ ಆರೋಗ್ಯ ವಲಯವು ದೇಶದ ಸಮಗ್ರ ಅಗತ್ಯಗಳನ್ನು ನೋಡಿಕೊಳ್ಳಲು ಸಾಧ್ಯವಿಲ್ಲ.

ಆದ್ದರಿಂದ ಮೂಲಭೂತವಾಗಿ ಈ ಎಲ್ಲಾ ರೂಪಾಂತರಗಳು ಕೊನೆಯಲ್ಲಿ ನಮ್ಮ ದೇಶವನ್ನು ಪರಿವರ್ತಿಸುತ್ತವೆ. ಆರೋಗ್ಯ ರಕ್ಷಣೆಯನ್ನು ಸಂಯೋಜಿಸುವುದರಲ್ಲಿ ಸ್ವಾವಲಂಬಿಯೂ ಸಮೃದ್ಧವೂ ಆದ ವಿಶ್ವದ ಮೊದಲ ದೇಶವಾಗಿ ಭಾರತ ನಿಲ್ಲಲು ಸಾಧ್ಯ.

ನನ್ನ ಸ್ವಂತ ಅಂದಾಜಿನ ಪ್ರಕಾರ ಈ ಎಲ್ಲಾ ರೂಪಾಂತರವು ಹತ್ತೋ ಹದಿನೈದೋ ವರ್ಷಗಳು ತೆಗೆದುಕೊಳ್ಳಬಹುದು ಎಂದು ನಾನು ಯೋಚಿಸುತ್ತಿದ್ದೆ, ಆದರೆ ಹೊಸ ಸರ್ಕಾರದ ನೀತಿಗಳೊಂದಿಗೆ ಇದು ಐದು ವರ್ಷಗಳಿಗಿಂತ ಕಡಿಮೆ ಅವಧಿಯಲ್ಲಿ ಸಂಭವಿಸುತ್ತದೆ ಎಂದು ನನಗೆ ಸ್ಪಷ್ಟವಾಗಿದೆ, ದೇಶದ ಪ್ರತಿಯೊಬ್ಬ ನಾಗರಿಕರಿಗೂ ಆರೋಗ್ಯ ರಕ್ಷಣೆ ನೀಡಲು ಬದ್ಧವಾದ ಈ ಮಾಂತ್ರಿಕ ನಿಯಂತ್ರಕ ಬದಲಾವಣೆಗಳಿಗಾಗಿ ನಾನು ೧.೩ ಬಿಲಿಯನ್ ಜನರ ಪರವಾಗಿ ನಮ್ಮ ಸರ್ಕಾರಕ್ಕೆ ಧನ್ಯವಾದ ಹೇಳಲು ಬಯಸುತ್ತೇನೆ.

**ಡಾ. ದೇವಿಶೆಟ್ಟಿ**
**ನಾರಾಯಣ ಹೃದಯಾಲಯ**

# ಎರಡು ಸಾಮಾಜಿಕ ಲಸಿಕೆಗಳೇ ಸದ್ಯದ ಪರಿಹಾರ

ನಾವು ಕೋವಿಡ್ ೧೯ ರೊಂದಿಗೆ ಸುಮಾರು ಆರು ತಿಂಗಳು ಪ್ರಯಾಣಿಸಿದ್ದೇವೆ. ಮಾರ್ಚ್‌ನಿಂದ ಆಗಸ್ಟ್‌ವರೆಗೂ ನಾವು ರೋಗವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇವೆ. ಆದರೆ, ರೋಗಲಕ್ಷಣಗಳನ್ನು ಗಮನಿಸುವಾಗ ಈ ವರ್ಷದ ಆರಂಭದಲ್ಲಿ ಜ್ವರ, ಕೆಮ್ಮು, ಗಂಟಲು ನೋವು - ಇವೇ ಕೊರೋನಾ ರೋಗಲಕ್ಷಣಗಳು ಎಂದು ಪರಿಗಣಿಸಲಾಗಿತ್ತು ಆದರೆ ಈಗ ನಮಗೆ ತಿಳಿದಿರುವುದೇನೆಂದರೆ, ತಲೆನೋವು, ದೇಹದ ನೋವು, ನೋವು ನಷ್ಟ, ವಾಸನೆ ಕಳೆದುಕೊಳ್ಳುವುದು, ಹೊಟ್ಟೆ ನೋವು, ಡಯೋರಿಯಾ ಸಹ ಕೋವಿಡ್ ೧೯ ರ ಇತರ ಪ್ರಮುಖ ಲಕ್ಷಣಗಳಾಗಿವೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಗಮನಾರ್ಹ ವಿಷಯವೆಂದರೆ ನಮ್ಮ ಪರೀಕ್ಷಾ ಸಾಮರ್ಥ್ಯ ಗಮನಾರ್ಹವಾಗಿ ಹೆಚ್ಚಾಗಿದೆ. ವಾಸ್ತವವಾಗಿ ಏಪ್ರಿಲ್‌ನಲ್ಲಿ ನಮ್ಮಲ್ಲಿ ಕೇವಲ ಎಂಟು ಪರೀಕ್ಷಾ ಪ್ರಯೋಗಾಲಯಗಳಿದ್ದವು. ಇಂದು ಕರ್ನಾಟಕವು ೧೦೮ ಕೋವಿಡ್ ೧೯ ಪರೀಕ್ಷಾ ಪ್ರಯೋಗಾಲಯಗಳನ್ನು ಹೊಂದಿದೆ ಎಂದು ಹೆಮ್ಮೆಪಡಬಹುದು. ಬೆಂಗಳೂರಿನಲ್ಲೇ ೪೦ ಪರೀಕ್ಷಾ ಪ್ರಯೋಗಾಲಯಗಳಿವೆ.

ಇನ್ನೊಂದೆಡೆ ಪರೀಕ್ಷೆಯ ವೆಚ್ಚವೂ ಕಡಿಮೆಯಾಗಿದೆ. ಮತ್ತು ಕೋವಿಡ್‌ಗೆ ಚಿಕಿತ್ಸೆಯ ವಿಧಾನವೂ ಬಲಗೊಳ್ಳುತ್ತಿದೆ. ಉದಾಹರಣೆಗೆ, ಒಂದು ತಿಂಗಳ ಹಿಂದೆ ರೆಮ್ ಡೆಸಿವೆರ್ ಎಂದು ಕರೆಯಲ್ಪಡುವ ವ್ಯಾಪಕ ಆಂಟಿವೈರಲ್ ಔಷಧವು ಸರಿಯಾಗಿ ಸಿಕ್ಕುತ್ತಲೇ ಇರಲಿಲ್ಲ. ಈಗ ಏಳು ಫಾರ್ಮಾಸ್ಯುಟಿಕಲ್ ಕಂಪನಿಗಳು ರೆಮ್ ಡೆಸಿವೆರ್ ಅನ್ನು ಉತ್ಪಾದಿಸುತ್ತಿವೆ. ಏಕೆಂದರೆ ಇದು ವೈರಲ್ ಪ್ರಭಾವವನ್ನು ಕಡಿಮೆ ಮಾಡಲು ಬಹಳ ಮುಖ್ಯವಾದ ಔಷಧವಾಗಿದೆ. ಇಂದು ಕರ್ನಾಟಕ ಸರ್ಕಾರವು ಕೋವಿಡ್ ೧೯ ರೋಗಿಗಳ ಅನುಕೂಲಕ್ಕಾಗಿ ೧ ಲಕ್ಷಕ್ಕೂ ಹೆಚ್ಚು ಪ್ರಮಾಣದ ರೆಮ್ ಡೆಸಿವೆರ್ ಔಷಧವನ್ನು ಸಂಗ್ರಹಿಸಿದೆ. ಸದ್ಯದ ಸ್ಥಿತಿಯಲ್ಲಿ ನಮಗೆ ಇನ್ನೂ ಲಸಿಕೆ ಲಭ್ಯವಿಲ್ಲ .ಬಹುಶಃ ನಮ್ಮ ಗೌರವಾನ್ವಿತ ಆರೋಗ್ಯ ಸಚಿವರು ಹೇಳಿದಂತೆ ಇದು ಈ ವರ್ಷದ ಅಂತ್ಯದ ವೇಳೆಗೆ ಅಥವಾ ಮುಂದಿನ ವರ್ಷದ ಆರಂಭದ ವೇಳೆಗೆ ಲಭ್ಯವಾಗಬಹುದು.

ಹೇಗಿದ್ದರೂ ಅತಿ ಮುಖ್ಯವಾದ ಎರಡು ಸಾಮಾಜಿಕ ಲಸಿಕೆಗಳು ಇಂದು ಲಭ್ಯವಿವೆ. ಮೊದಲನೆಯ ಸಾಮಾಜಿಕ ಲಸಿಕೆ ಎಂದರೆ ದೈಹಿಕ ಅಂತರವನ್ನು ಕಾಪಾಡಿಕೊಳ್ಳುವುದು ಮತ್ತು ಇನ್ನೊಂದು - ಮಾಸ್ಕ್ ಧರಿಸುವುದು. ಕೋವಿಡ್ ೧೯ ನಮಗೆ ಕಲಿಸಿರುವ ಪಾಠವೆಂದರೆ ಇದೇ. ಬಹುಶಃ ನಾವು ಮುಂದಿನ ೬ ತಿಂಗಳವರೆಗಾದರೂ ಈ ಮಾಸ್ಕ್ ಅನ್ನು ಧರಿಸಬೇಕಾಗಿರುತ್ತದೆ ಮತ್ತು ದೈಹಿಕ ಅಂತರವನ್ನು ತಪ್ಪದೆ ಕಾಯ್ದುಕೊಳ್ಳಬೇಕು.

ನಾವು ಅರ್ಥಮಾಡಿಕೊಳ್ಳಬೇಕಾದ ಇನ್ನೊಂದು ಪ್ರಮುಖ ವಿಷಯವೆಂದರೆ ಕರ್ನಾಟಕ ಸರ್ಕಾರವು ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಿದೆ. ಎರಡೂ ಸಾರ್ವಜನಿಕ ಆಸ್ಪತ್ರೆಗಳೂ ವೈದ್ಯಕೀಯ ಕಾಲೇಜುಗಳೂ ಪ್ರಯೋಗಾಲಯದ ಪರೀಕ್ಷೆಗಾಗಿ ಸಾಕಷ್ಟು ಆರ್.ಟಿ.ಪಿ.ಸಿ.ಆರ್ ಯಂತ್ರಗಳನ್ನು ಹೊಂದಿವೆ.



ರೋಗದ ಶೀಘ್ರ ಪತ್ತೆಯಿಂದ ರೋಗಿಗಳನ್ನು ಮೊದಲೇ ಪ್ರತ್ಯೇಕಿಸಲು ಮತ್ತು ಹರಡುವುದನ್ನು ತಡೆಯಲು ಸಹಾಯವಾಗುತ್ತದೆ. ಕರ್ನಾಟಕ ಸರ್ಕಾರವು ಎಲ್ಲಾ ಆಸ್ಪತ್ರೆಗಳನ್ನು ಹೈ ಫ್ಲೋ ಆಮ್ಲಜನಕ ವ್ಯವಸ್ಥೆಗಳೊಂದಿಗೆ ಬಲಪಡಿಸಿದೆ. ಹೆಚ್ಚಿನ ರೋಗಿಗಳಿಗೆ ಬೇಕಾಗಿರುವುದು ಹೈ ಫ್ಲೋ ಆಕ್ಸಿಜನ್ ವ್ಯವಸ್ಥೆಯೇ. ವೆಂಟಿಲೇಟರ್ ಅವಶ್ಯಕತೆ ೦.೫ ಪ್ರತಿಶತಕ್ಕಿಂತ ಕಡಿಮೆಯಿದೆ .

ಈ ವೇದಿಕೆಯ ಮೂಲಕ ನಾನು ಒತ್ತು ನೀಡಲು ಬಯಸುವ ಇನ್ನೊಂದು ವಿಷಯವೆಂದರೆ ನಾವು ಕೋವಿಡ್ ರೋಗಿಗಳನ್ನು ಗೌರವಿಸಬೇಕು. ಮತ್ತು ಕೋವಿಡ್ ಸಾಂಕ್ರಾಮಿಕಕ್ಕೆ ತುತ್ತಾದವರ ನೆರೆಹೊರೆಯವರನ್ನು ಗೌರವಿಸಬೇಕು. ಏಕೆಂದರೆ ಕೋವಿಡ್ ರೋಗಿಗಳಿಗೆ ಈಗಾಗಲೇ ಸಾಕಷ್ಟು ಕಳಂಕವನ್ನು ಅಂಟಿಸಲಾಗಿದೆ . ಅದನ್ನು ಮೊದಲು ತೆಗೆದುಹಾಕಬೇಕು ಮತ್ತು ಕೋವಿಡ್ ರೋಗಿಗಳನ್ನು ಗೌರವಿಸಬೇಕು.

ಇನ್ನೊಂದು ಮುಖ್ಯ ವಿಷಯವೇನೆಂದರೆ, ಸತ್ತ ವ್ಯಕ್ತಿಗಳು ಎಂದಿಗೂ ವೈರಸ್ ಹರಡುವುದಿಲ್ಲ. ಜೀವಂತವ್ಯಕ್ತಿ ಮಾತ್ರವೇ ವೈರಸ್ ಹರಡಬಹುದು. ಏಕೆಂದರೆ ಸತ್ತ ವ್ಯಕ್ತಿಯು ಕೆಮ್ಮಲು ಸಾಧ್ಯವಿಲ್ಲ, ಸೀನುವಂತಿಲ್ಲ, ಉಸಿರಾಡಲು ಸಾಧ್ಯವಿಲ್ಲ, ಇದು ನಾವು ಅರ್ಥೈಸಿಕೊಳ್ಳಬೇಕಾದ ಒಂದು ವಿಷಯ ಎಂದು ನಾನು ಭಾವಿಸುತ್ತೇನೆ .

ಈಗ ನಾವು ಎರಡನೇ ತಲೆಮಾರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮೆಡಿಸನ್ ಸಂಸ್ಥೆಗಳನ್ನು ತೆರೆಯುವ ಕಾಲ ಸನ್ನಿಹಿತವಾಗಿದೆ ಎಂದು ಒತ್ತಿ ಹೇಳಲು ನಾನು ಬಯಸುತ್ತೇನೆ. ಇದು ರಾಂಚಿಯಲ್ಲೇ ಆಗಿರಲಿ ಗೌಹಾತಿಯಲ್ಲೋ ಭೋಪಾಲ್ ನಲ್ಲೋ ಆಗಿರಲಿ, ಒಟ್ಟಿನಲ್ಲಿ ಈ ಉನ್ನತ ಸಂಸ್ಥೆಗಳನ್ನು ಸ್ಥಾಪಿಸಬೇಕಾಗಿದೆ. ದೆಹಲಿಯಲ್ಲಿಯೇ ನಮಗೆ ಇನ್ನೂ ಒಂದು ಐ.ಐ.ಎಮ್.ಎಸ್.ಬೇಕಾಗುತ್ತದೆ.

ಎಲ್ಲರಿಗೂ ಆರೋಗ್ಯವೆಂದರೆ ನನ್ನ ಅಭಿಪ್ರಾಯದಲ್ಲಿ ಸುರಕ್ಷಿತ ನೀರು ಮತ್ತು ಶುದ್ಧ ಗಾಳಿ ಮತ್ತು ಪೌಷ್ಠಿಕಾಂಶವನ್ನು ಒದಗಿಸುವುದು. ಇದು ಎಲ್ಲರಿಗೂ ಲಭ್ಯವಾಗುವಂತಾಗಲಿ. ಧನ್ಯವಾದಗಳು.

**ಡಾ. ಸಿ.ಎನ್. ಮಂಜುನಾಥ್**
**ನಿರ್ದೇಶಕರು, ಜಯದೇವ ಹೃದ್ರೋಗ ಸಂಶೋಧನಾ ಸಂಸ್ಥೆ**

# ನಾಯಕತ್ವದ ' ಅನಂತ 'ಸೂತ್ರಗಳು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ರಾಜ್ಯ ವಿಧಾನಸಭೆ

**ನಿರೂಪಣೆ: ಟಿ.ಎಸ್. ಗೋಪಾಲ್**



೧೯೭೮-೭೯. ನಾನು ಆಗತಾನೇ ಕಾಲೇಜು ಮೆಟ್ಟಿಲು ಹತ್ತಿದ್ದೆ. ಧಾರವಾಡದ ಪ್ರತಿಷ್ಠಿತ ಕರ್ನಾಟಕ ಕಾಲೇಜಿನಲ್ಲಿ ಪಿ.ಯು.ಸಿ. ಓದಲು ಸೇರಿಕೊಂಡಿದ್ದೆ. ನಮ್ಮ ಮನೆಯಲ್ಲಿ ನನ್ನ ತಂದೆಯವರೂ ಸೇರಿದಂತೆ ನಾವೆಲ್ಲ ಸ್ವಯಂಸೇವಕರಾಗಿದ್ದವರು. ತುರ್ತುಪರಿಸ್ಥಿತಿಯ ಕಾಲದಲ್ಲಿ ಸರ್ಕಾರದ ನಿಷೇಧಕ್ಕೆ ಒಳಪಟ್ಟು ಸ್ವಯಂಸೇವಕರ ಚಟುವಟಿಕೆಗಳೂ, ಶಾಖೆಯ ಕಾರ್ಯಕ್ರಮಗಳೂ ಸ್ಥಗಿತಗೊಂಡಿದ್ದವು. ಇಲ್ಲಿ ಧಾರವಾಡಕ್ಕೆ ಬಂದಕೂಡಲೇ ಶಾಖೆಯ ಚಟುವಟಿಕೆ ನಡೆಯುತ್ತಿರುವುದನ್ನು ಗಮನಿಸಿ ಅಲ್ಲಿಗೆ ಹೋಗಿ ಸೇರಿಕೊಂಡೆ. ಹಿರಿಯ ಸ್ವಯಂಸೇವಕರಾಗಿದ್ದ ಶ್ರೀ ಕೃಷ್ಣ ಗೋಖಲೆಯವರ ಮಗ ಶ್ರೀ ರಾಜೇಂದ್ರ ಗೋಖಲೆಯವರ ಪರಿಚಯವಾಗಿ ಅವರ ಮೂಲಕ ವಿದ್ಯಾರ್ಥಿ ಪರಿಷತ್ತಿಗೆ ಸೇರಲು ಅವಕಾಶವಾಯಿತು.

ಆ ಹೊತ್ತಿಗೆ ಅನಂತಕುಮಾರ್ ಹುಬ್ಬಳ್ಳಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ವಿದ್ಯಾರ್ಥಿ ಪರಿಷತ್ತಿನ ಕಾರ್ಯಕ್ರಮಗಳಿಗಾಗಿ ಧಾರವಾಡಕ್ಕೂ ಆಗಿಂದಾಗ್ಗೆ ಬರುತ್ತಿದ್ದರು. ಅವರಲ್ಲಿದ್ದ ನಾಯಕತ್ವದ ಗುಣ, ಮಾತುಗಾರಿಕೆಯ ವೈಖರಿ, ಸ್ನೇಹಪರತೆಗಳು ಎಲ್ಲ ವಿದ್ಯಾರ್ಥಿಗಳಿಗೂ ಮೆಚ್ಚುಗೆ ತಂದಿದ್ದವು. ಅವರನ್ನು ನಮ್ಮ ಕಾಲೇಜಿಗೆ ಕರೆಸಬೇಕಾದ ಸಂದರ್ಭವೂ ಶೀಘ್ರದಲ್ಲೇ ಒದಗಿ ಬಂದಿತು.

ನಮ್ಮ ಕಾಲೇಜಿಗೆ ಸಂಬಂಧಿಸಿದ ಹಲವು ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಕಾಲೇಜಿನ ಆಡಳಿತಮಂಡಳಿಯ ಹಾಗೂ ಸರ್ಕಾರದ ಗಮನ ಸೆಳೆಯುವ ಸಲುವಾಗಿ ಒಂದು ಚಳುವಳಿಯನ್ನು ಹಮ್ಮಿಕೊಳ್ಳಲು ನಿರ್ಧರಿಸಿದ್ದೆವು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲು ಅನಂತಕುಮಾರರನ್ನು ಕರೆಯಿಸುವುದೆಂದು ತೀರ್ಮಾನಿಸಿದೆವು. ನಿಗದಿತ ದಿನ ಕಾಲೇಜು ಆವರಣಕ್ಕೆ ಅನಂತಕುಮಾರ್ ಆಗಮಿಸಿದ್ದೂ ಆಯಿತು. ಅಷ್ಟರಲ್ಲಿ ಸಾವಿರಾರು ವಿದ್ಯಾರ್ಥಿಗಳು ಗುಂಪುಗೂಡಿದ್ದರು. ಸಭೆಯ ವ್ಯವಸ್ಥೆಯನ್ನು ಕುರಿತು ಯಾವ ಯೋಚನೆಯನ್ನೂ ಮಾಡಿರದಿದ್ದ ನಮಗೆ ಏನು ಮಾಡುವುದೆಂದೇ ತೋಚಲಿಲ್ಲ. ಭಾಷಣಕಾರರಾದ ಅನಂತಕುಮಾರ್ ಎಲ್ಲರಿಗೂ ಕಾಣುವ ಹಾಗೆ ನಿಲ್ಲುವುದಕ್ಕೆ ಒಂದು ವೇದಿಕೆ ಹೋಗಲಿ, ಒಂದು ಕುರ್ಚಿಯೂ ಇರಲಿಲ್ಲ. ಇನ್ನು ಧ್ವನಿವರ್ಧಕದ ವ್ಯವಸ್ಥೆ ಬೇಕಾದೀತೆಂಬ ಕಲ್ಪನೆಯೋ ನಮ್ಮ ತಲೆಗೆ ಹೊಳೆದೇ ಇರಲಿಲ್ಲ.

ಏನೂ ತೋಚದೆ ಪೆಚ್ಚುಪೆಚ್ಚಾಗಿ ನಿಂತಿದ್ದ ನಮ್ಮ ಗೊಂದಲ ಅನಂತಕುಮಾರರಿಗೆ ಅರ್ಥವಾಗದೆ ಇರುತ್ತದೆಯೇ? ಆಚೀಚೆ ನೋಡಿದ ಅನಂತಕುಮಾರರಿಗೆ ಮೂಲೆಯಲ್ಲಿ ಸೈಕಲ್ ಸ್ಟಾಂಡೊಂದು ಕಂಡಿತು. ಅದೊಂದು ತಗಡಿನ ಛಾವಣಿ ಹೊದೆಸಿದ್ದ ಷೆಡ್. ಎಲ್ಲರೂ ಬನ್ನಿ ಎಂದು ಹೇಳುತ್ತ ಸರಸರನೆ ಸೈಕಲ್ ಸ್ಟಾಂಡಿನ ಕಡೆಗೆ ನಡೆದೇ ಬಿಟ್ಟರು. ಹುಡುಗರ ಗುಂಪು ಸಡಗರದಿಂದಲೇ ಅವರನ್ನು ಹಿಂಬಾಲಿಸಿತು. ಮೂರು ನಾಲ್ಕು ಹುಡುಗರನ್ನು ಕರೆದು ಆ ಷೆಡ್ಡಿನ ಕಂಬವೊಂದನ್ನು ಹಿಡಿದುಕೊಳ್ಳುವಂತೆ ಸೂಚಿಸಿ ನಿಲ್ಲಿಸಿದರು. ಆ ಹುಡುಗರ ತೋಳನ್ನೋ ಹೆಗಲನ್ನೋ ಆಧರಿಸಿ ಅನಂತಕುಮಾರ್ ಸೈಕಲ್ ಸ್ಟಾಂಡಿನ ಮೇಲಕ್ಕೆ ಹತ್ತಿಯೇ ಬಿಟ್ಟರು. ಆಯಿತಲ್ಲ, ಎಲ್ಲರ ಕಣ್ಣಿಗೆ ಕಾಣುವಂತಹ ವೇದಿಕೆ ಸಿದ್ಧವಾಗಿಯೇ ಬಿಟ್ಟಿತು. ಧ್ವನಿವರ್ಧಕ ಇಲ್ಲದಿದ್ದರೆ ಏನಂತೆ, ಎತ್ತರದಲ್ಲಿ ನಿಂತ ಅನಂತಕುಮಾರರ ದೊಡ್ಡ ಧ್ವನಿಯ ಮಾತುಗಳು ಆ ಬೃಹತ್ ಗುಂಪನ್ನು ತಲುಪಲು ಕಷ್ಟವಾಗಲಿಲ್ಲ.




ನಾಯಕತ್ವದ ಲಕ್ಷಣವೆಂದರೆ ಇದು. ನಾಯಕತ್ವದ ಹಮ್ಮುಬಿಮ್ಮುಗಳನ್ನೇನೂ ತೋರದೆ , ಸಂವಹನಕ್ಕಾಗಿ ನಿರ್ದಿಷ್ಟ ವ್ಯವಸ್ಥೆಯನ್ನೋ ಆಡಂಬರವನ್ನೋ ಅಪೇಕ್ಷಿಸದೆ, ಲಭ್ಯವಿರುವ ಸ್ಥಿತಿಯನ್ನೇ ಅನುಕೂಲಕ್ಕೆ ಮಾರ್ಪಡಿಸಿಕೊಳ್ಳುವ ಇಂಥ ಗುಣವಿಶೇಷವು ಸಾಮಾನ್ಯರಲ್ಲಿ ಕಂಡುಬರುವಂತಹುದಲ್ಲ. ಯಾವುದೇ ಪೂರ್ವಸಿದ್ಧತೆ ಸಜ್ಜಿಕೆಗಳಿಲ್ಲದಿರುವ, ಪ್ರತಿಕೂಲ ಪರಿಸ್ಥಿತಿಯಲ್ಲೂ ಅಗತ್ಯಕ್ಕೆ ತಕ್ಕಷ್ಟು ಸಮರ್ಪಕವೆನಿಸಬಹುದಾದ ವ್ಯವಸ್ಥೆಯನ್ನು ಆಯಾ ಕ್ಷಣದಲ್ಲಿ ಕಲ್ಪಿಸಿಕೊಳ್ಳಬಲ್ಲ ಸಾಮರ್ಥ್ಯ ಅನಂತಕುಮಾರರಲ್ಲಿ ಇದ್ದುದಕ್ಕೆ ಇದೊಂದು ನಿದರ್ಶನ.

ಆಗೆಲ್ಲ ವಿದ್ಯಾರ್ಥಿಸಂಘದ ಚಟುವಟಿಕೆಗಳೆಂದರೆ ಸಡಗರದ ಸಂಗತಿಗಳೇ. ಕಾಲೇಜಿನ ವಿದ್ಯಾರ್ಥಿಸಂಘದ ಚುನಾವಣೆಯೆನ್ನುವುದೇ ಒಂದು ಹಬ್ಬ. ಆನೆಯನ್ನು ತರಿಸಿ ಮೆರವಣಿಗೆ ಮಾಡುವಷ್ಟು ಸಂಭ್ರಮ. ಅದರಲ್ಲೂ ಧಾರವಾಡದ ಕರ್ನಾಟಕ ಕಾಲೇಜಿನ ದೊಡ್ಡಸ್ತಿಕೆ ಒಂದು ಹೆಜ್ಜೆ ಮುಂದೆಯೇ. ಇನ್ನು ಚಳುವಳಿಯೆಂದರೆ ಹೇಳಬೇಕೇ? ಇಂತಹ ಸನ್ನಿವೇಶದಲ್ಲಿ ವಿದ್ಯಾರ್ಥಿಗಳ, ವಿದ್ಯಾರ್ಥಿನಾಯಕರ ಸಭೆಗಳಲ್ಲಿ ಅನಂತಕುಮಾರರ ಮಾತುಗಳಿಗೆ ವಿಶೇಷ ಮಹತ್ತ್ವವಿರುತ್ತಿತ್ತು. ವಿದ್ಯಾರ್ಥಿ ಪರಿಷತ್ತಿಗೆ ಸಂಬಂಧಪಡದ ವಿದ್ಯಾರ್ಥಿಗಳೂ ಅನಂತಕುಮಾರರ ಮಾತನ್ನು ಶ್ರದ್ಧೆ ವಿಶ್ವಾಸಗಳಿಂದ ಆಲಿಸುತ್ತಿದ್ದರು. ಯಾವುದೇ ಸಂಘಟನೆ, ಪಕ್ಷಗಳಿಂದ ಹೊರತುಪಡಿಸಿದ ನಾಯಕತ್ವದ ಗುಣವಿಶೇಷವನ್ನು ಅನಂತಕುಮಾರರಲ್ಲಿ ಪರವಿರೋಧವೆನ್ನದೆ ಎಲ್ಲರೂ ಕಾಣುತ್ತಿದ್ದುದೇ ಒಂದು ವಿಶೇಷ. ವಿದ್ಯಾರ್ಥಿ ಪರಿಷತ್ತಿನ ಸದಸ್ಯರಾಗಿರಲಿ ಬಿಡಲಿ, ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಎಲ್ಲರನ್ನೂ ತನ್ನ ವಲಯಕ್ಕೆ ಒಳಕೊಳ್ಳುವ ಹಾಗೂ ಅವರಿಗೆ ಪ್ರೇರಣೆ ನೀಡಬಲ್ಲ ಶಕ್ತಿ ಅನಂತಕುಮಾರರಲ್ಲಿತ್ತು. ಅವರ ನಡೆನುಡಿಗಳಲ್ಲಿ ಒಟ್ಟಾರೆ ವಿದ್ಯಾರ್ಥಿಸಮುದಾಯದ ಬಗೆಗೆ ಕಾಳಜಿ, ಅನುಭೂತಿಗಳಿದ್ದುವಲ್ಲದೆ ಸ್ವಾರ್ಥಪರತೆಯ ಲವಲೇಶವೂ ಇರಲಿಲ್ಲ. ಹೀಗಾಗಿ ಯಾವುದೇ ಸಂಘಟನೆಗೆ ಸೇರಿದ, ಯಾವುದೇ ವಿಚಾರಧಾರೆಯನ್ನು ಅನುಸರಿಸುವ ವ್ಯಕ್ತಿಯೂ ಹೀಗೊಬ್ಬ ಮುಖಂಡನನ್ನು ನಾಯಕನೆಂದೇ ಗುರುತಿಸಿ ಗೌರವಿಸುವ ಅಪೂರ್ವಗುಣಲಕ್ಷಣವು ಅನಂತಕುಮಾರರಲ್ಲಿ ಕಂಡುಬಂದಂತೆ ಉಳಿದವರಲ್ಲಿ ಕಾಣುವುದು ಮುಂಬರುವ ಕಾಲಕ್ಕೂ ಅಸಂಭವವೆಂದೇ ಹೇಳಬೇಕು.

ವಾರಕ್ಕೊಮ್ಮೆ ವಿದ್ಯಾರ್ಥಿ ಪರಿಷತ್ತಿನ ಸದಸ್ಯರ ಸಭೆಯಲ್ಲಿ ನಾವೆಲ್ಲ ಭಾಗವಹಿಸುತ್ತಿದ್ದೆವು. ಧಾರವಾಡದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ಮೋಡಕ್ ಎಂಬ ಮಹನೀಯರ ಮನೆಯ ಅಟ್ಟದಲ್ಲಿ ಈ ಸಭೆ ನಡೆಯುತ್ತಿತ್ತು. ಇದರ ಅಂಗವಾಗಿ ಆಗಿಂದಾಗ್ಗೆ ಸ್ಟಡಿ ಸರ್ಕಲ್ (ಅಭ್ಯಾಸವರ್ಗ) ಎಂಬ ವಿದ್ಯಾರ್ಥಿಸಂವಾದ ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದೆವು. ಈ ಕಾರ್ಯಕ್ರಮಕ್ಕೆ ಅಗತ್ಯವಾದ ಸೂಚನೆಗಳೆಲ್ಲವನ್ನೂ ಕಿಂಚಿತ್ತೂ ತಪ್ಪದಂತೆ ಅನಂತಕುಮಾರರೇ ಕೊಡುತ್ತಿದ್ದರು. ಅಭ್ಯಾಸವರ್ಗದಲ್ಲಿ ನಿರ್ದಿಷ್ಟ ಉಪನ್ಯಾಸಕ್ಕೆ ಯಾರನ್ನು ಕರೆಯಬೇಕು, ಈ ಸಂವಾದ ಕಾರ್ಯಕ್ರಮಗಳಲ್ಲಿ ಚರ್ಚೆಗೆ ಯಾವ ಯಾವ ವಿಷಯಗಳಿರತಕ್ಕದ್ದು ಎನ್ನುವುದರಿಂದ ಮೊದಲುಗೊಂಡು ನಿರ್ದಿಷ್ಟ ವಿಷಯದ ಬಗೆಗೆ ಮಾತನಾಡಬಲ್ಲ ತಜ್ಞರು ಯಾರು, ಇಲ್ಲವೇ ಯಾರನ್ನು ಕರೆಸುವುದು ಸೂಕ್ತವೆಂಬುದನ್ನು ತಿಳಿಯಲು ಯಾರನ್ನು ಸಂಪರ್ಕಿಸಬೇಕು ಎಂಬ ಅಂಶದವರೆಗೆ ಪ್ರತಿಯೊಂದು ಸೂಚನೆಯನ್ನೂ ಅನಂತಕುಮಾರ್ ಅತಿ ಸಮರ್ಪಕವಾಗಿ ಮುಂದಿಡುತ್ತಿದ್ದರು. ನಾಯಕತ್ವ ವಹಿಸಬೇಕಾದವನಿಗೆ ಇರಬೇಕಾದ ವ್ಯಾಪಕವಾದ ವಿಷಯ ಪರಿಜ್ಞಾನ ಮಾತ್ರವಲ್ಲದೆ, ವಿಷಯಗ್ರಹಣೆಯ ಬಗೆಗೂ ಅವರು ಸದಸ್ಯರಿಗೆ ತಿಳಿಹೇಳುತ್ತಿದ್ದ ಪರಿ ಅಸಾಧಾರಣವಾಗಿತ್ತು. ಅವರ ಮಾತುಗಳು ನಾಯಕತ್ವದ ಪರಿಯನ್ನೇ ಬೋಧಿಸುತ್ತಿವೆಯೋ ಎನ್ನುವಂತೆ , ಸಾಮಾನ್ಯ ಕಾರ್ಯಕರ್ತರಲ್ಲೂ ನಾಯಕತ್ವದ ಗುಣಗಳನ್ನು ಪ್ರೇರಿಸುವುದರಲ್ಲಿ ಪರಿಣಾಮಕಾರಿಯಾಗಿರುತ್ತಿದ್ದವು. ಅಂದರೆ, ನಾಯಕತ್ವದ ಹಾದಿಯಲ್ಲಿ ಅನಂತಕುಮಾರ ಒಬ್ಬರೇ ಮುಂದೆ ಹೋಗುತ್ತಿದ್ದರು ಎಂದು ತೋರುತ್ತಲೇ ಇರಲಿಲ್ಲ , ನಮ್ಮೆಲ್ಲರನ್ನೂ, ಹುಬ್ಬಳ್ಳಿ ಧಾರವಾಡ ಭಾಗದಲ್ಲಿದ್ದ ಪ್ರತಿಯೊಬ್ಬರನ್ನೂ ಅವರು ತಮ್ಮ ಜೊತೆಗೇ ಮುಂದಕ್ಕೆ ಕರೆದೊಯ್ಯುತ್ತಿದ್ದರು.

ಹುಬ್ಬಳ್ಳಿಯಲ್ಲಿ ನಾವು ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಸಮ್ಮೇಲನವನ್ನೂ ಆಯೋಜಿಸಿದ್ದೆವು. ಶ್ರೀ ಗೋವಿಂದಾಚಾರ್ಯರು ನಮಗೆ ಮುಖ್ಯ ಮಾರ್ಗದರ್ಶಕರಾಗಿದ್ದರು. ಚೋ. ರಾಮಸ್ವಾಮಿ ಮೊದಲಾದವರು ಅತಿಥಿಗಳಾಗಿ ಆಗಮಿಸಿದ್ದ ಸಮಾರಂಭವದು. ನಮಗೆ ಮುಖ್ಯಪ್ರೇರಕರಾಗಿ ಶ್ರೀಯುತ ಪಿ.ವಿ. ಕೃಷ್ಣಭಟ್ಟರು, ದತ್ತಾತ್ರೇಯ ಹೊಸಬಾಳೆಯವರು ಮುಂಚೂಣಿಯಲ್ಲಿದ್ದರು. ಇವರಿಬ್ಬರು ಹಿರಿಯರೂ ಇಡಿಯ ಕರ್ನಾಟಕದಲ್ಲೇ ವಿದ್ಯಾರ್ಥಿ ಪರಿಷತ್ತಿಗೆ ನಾಯಕತ್ವ ತಂದುಕೊಟ್ಟವರು. ವಾಸ್ತವವಾಗಿ ಈ ಇಬ್ಬರು ಮಹನೀಯರೇ ಅನಂತಕುಮಾರರಿಗೆ ಪ್ರೇರಣೆ ನೀಡಿ, ಕೆಲಸದಲ್ಲಿ ತೊಡಗಿಸಿಕೊಳ್ಳಲು ಮುಖ್ಯ ಕಾರಣಕರ್ತರೆನ್ನಬಹುದು.

ಇಂಥ ಯಾವುದೇ ಸಮ್ಮೇಳನ ಅದು ರಾಜ್ಯಮಟ್ಟದ್ದಿರಲಿ, ರಾಷ್ಟ್ರಮಟ್ಟದ್ದಿರಲಿ ಅನಂತಕುಮಾರ್ ತಪ್ಪದೆ ಭಾಗವಹಿಸುತ್ತಿದ್ದರು. ಅದೂ ಒಬ್ಬರೇ ಅಲ್ಲ, ಒಂದು ಗುಂಪನ್ನೇ ತಮ್ಮೊಡನೆ ಹೊರಡಿಸುತ್ತಿದ್ದರು. ಯಾವ ಊರಿನಿಂದ ಯಾರು ಬರಬೇಕು, ಯಾವ ಕಾಲೇಜಿನಿಂದ ಯಾರು ಭಾಗವಹಿಸಬೇಕು ಎಲ್ಲವನ್ನೂ ಪಟ್ಟಿಮಾಡಿಸುವವರೂ ಅವರೇ. ಸುಮ್ಮನೆ ಯಾರದ್ದೋ ಹೆಸರು ಸೇರಿಸುವುದಲ್ಲ, ನಮ್ಮ ಅಭ್ಯಾಸವರ್ಗದಲ್ಲಿ ಭಾಗವಹಿಸುತ್ತಿರುವವರು ಯಾರು, ನಮ್ಮ ಗುಂಪಿನ ಸದಸ್ಯರು ಯಾರಿದ್ದಾರೆ, ಸಮಾನಮನಸ್ಕ ಆಸಕ್ತರು ಯಾರಿದ್ದಾರೆ ಎಲ್ಲರನ್ನೂ ನೆನಪುಮಾಡಿಕೊಂಡು ಇಂತಿಂಥ ಸಮ್ಮೇಳನದಲ್ಲಿ ಭಾಗವಹಿಸಬೇಕಾದವರು ಯಾರು ಎಂಬ ಪಟ್ಟಿಯನ್ನು ತಯಾರುಮಾಡಿಸುತ್ತಿದ್ದರು. ಯಾರು ಯಾರು ಎಲ್ಲೆಲ್ಲಿಂದ ಹೊರಡಬೇಕು, ಎಲ್ಲಿ ಸೇರಬೇಕು ಎಂಬ ಚಿಕ್ಕಪುಟ್ಟ ವಿಷಯಗಳೂ ನಮೂದಾಗುವಷ್ಟು ನಿಖರವಾಗಿ ಕಾರ್ಯಕ್ರಮವನ್ನು ಸಿದ್ಧಪಡಿಸಲು ಅನಂತಕುಮಾರರ ಮಾರ್ಗಸೂಚಿ ಸದಾ ನೆರವಿಗೆ ಒದಗುತ್ತಿತ್ತು.

ಆಗಿನ ಕಾಲದಲ್ಲಿ ಹಣದ ಕೊರತೆ ತೀರಾ ಸಾಮಾನ್ಯ. ಆದರೆ ಅದು ಸಮಸ್ಯೆಯೆಂದೇ ತೋರುತ್ತಿರಲಿಲ್ಲ. ಸಂಘಟನೆಯ ಕೆಲಸ ಎಂದರೆ ಮಾಡಲೇಬೇಕಾದ ಕೆಲಸ ಅಷ್ಟೇ, ಅದರ ಖರ್ಚುವೆಚ್ಚಗಳಿಗೆ ಏನು ಮಾಡುವುದು, ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬಂದದ್ದಾಯಿತು, ವಾಪಸ್ ಹೋಗಲಿಕ್ಕೆ ಹಣವನ್ನು ಹೊಂದಿಸುವುದು ಹೇಗೆ ಎಂಬ ಪ್ರಶ್ನೆಗಳಿಗೆ ಅವಕಾಶವಿಲ್ಲದಂತೆ ಅವರಿವರು ಸೇರಿ ವೆಚ್ಚವನ್ನು ಸರಿದೂಗಿಸಿಕೊಂಡು ಹೋಗುತ್ತಿದ್ದೆವು.

ಅಂತೆಯೇ ಹಣಕಾಸಿನ ಕೊರತೆಯೆನ್ನುವುದು ಅನಂತಕುಮಾರರಿಗೆ ಎಂದೂ ಸಮಸ್ಯೆಯೆಂದೇ ತೋರಿರಲಿಲ್ಲ. ಅವರಲ್ಲಿ ಇದ್ದುದು ಕರ್ತವ್ಯನಿಷ್ಠೆ, ಕೆಲಸವನ್ನು ಮಾಡಿ ಮುಗಿಸುವ ಬದ್ಧತೆ ಅಷ್ಟೇ. ಪ್ರಯಾಣ ಮಾಡಬೇಕು ಅಂದರೆ ಹೋಗಿ ತಲುಪುವುದಷ್ಟೇ ಮುಖ್ಯ. ಬಸ್ಸಾದರೂ ಸರಿಯೇ, ಲಾರಿಯಾದರೂ ಸರಿಯೇ; ನಡೆದುಹೋಗುವುದಕ್ಕೂ ಸಿದ್ಧವೇ. ಸೌಖ್ಯ, ಸುಲಲಿತವ್ಯವಸ್ಥೆಗಳೆಲ್ಲ ತಮ್ಮ ಪಯಣದ ಭಾಗವಾಗಿರಲೇಬೇಕೆಂಬ ನಿರೀಕ್ಷೆ ಅವರ ಮನೋಭಾವದಲ್ಲಿ ಇರಲೇ ಇಲ್ಲ.



ಅಸ್ಸಾಂ ಆಂದೋಲನದಲ್ಲಿ ಭಾಗವಹಿಸಲು ಹೋದಾಗಲೂ ಅಷ್ಟೇ. ಕಲ್ಕತ್ತಾದಿಂದ ಗೌಹಾಟಿಗೆ ಹೊರಟ ರೈಲಿನಲ್ಲಿ ಅನಂತಕುಮಾರರ ನಾಯಕತ್ವದ ಗುಂಪು ಇದ್ದಿತು. ರೈಲು ಪ್ರಯಾಣಿಕರಿಂದ ಕಿಕ್ಕಿರಿದು ತುಂಬಿತ್ತು. ಕಾಲಿಡಲೂ ಜಾಗವಿಲ್ಲದ ಪರಿಸ್ಥಿತಿ. ಪರಿಷತ್ತಿನ ಗೆಳೆಯರು ಬೋಗಿಯಲ್ಲಿ ಪ್ರಯಾಣಿಕರು ಸಾಮಾನುಗಳನ್ನಿರಿಸುವ ಮೇಲುಖಾನೆಗಳಲ್ಲಿ ಒಂದೊಂದರಲ್ಲಿ ಐದಾರು ಜನರಂತೆ ಇಕ್ಕಟ್ಟಿನಲ್ಲಿ ಕುಳಿತು ಪಯಣಿಸಿದ್ದೇ ಒಂದು ಕಥೆ.

ಅಸ್ಸಾಂ ಆಂದೋಲನ ವಿಪರೀತಕ್ಕೆ ತಿರುಗಿ ಲಾಠೀಚಾರ್ಜ್, ಗೋಲೀಬಾರ್ ಎಲ್ಲವೂ ಸಂಭವಿಸಿ ಗೊಂದಲವಾಯಿತು. ಅನಂತಕುಮಾರರ ನೇತೃತ್ವದ ನಮ್ಮ ಗುಂಪನ್ನು ಬಂಧಿಸಿದ ಪೋಲೀಸರು ಎಲ್ಲಿಯೋ ದೂರದ ಹಳ್ಳಿಗೆ ನಮ್ಮನ್ನು ಕರೆದೊಯ್ದು ಬಿಟ್ಟು ಹೋದರು. ಎಲ್ಲಿದ್ದೇವೆ, ಎಲ್ಲಿಗೆ ಹೋಗಬೇಕು ಏನೂ ಗೊತ್ತಾಗದ ಅಪರಿಚಿತ ಪ್ರದೇಶ. ಅಲ್ಲಲ್ಲಿ ಜನ ಕಂಡರೂ ನಮ್ಮ ಭಾಷೆ ಅವರಿಗಾಗಲಿ ಅವರ ಭಾಷೆ ನಮಗಾಗಲಿ ತಿಳಿಯುವಂತಿಲ್ಲ. ನಿಸ್ಸಹಾಯಕರಾಗಿದ್ದ ನಮಗೆ ಅನಂತಕುಮಾರ್ ಸೂಚಿಸಿದ ಪರಿಹಾರವಿಷ್ಟೇ: " ಮುಖ್ಯ ರಸ್ತೆ ಎಲ್ಲಿದೆ ಹುಡುಕುತ್ತ ನಡೆಯೋಣ . ಅಲ್ಲಿಂದ ಯಾವುದಾದರೂ ಪಟ್ಟಣಕ್ಕೆ ಸೇರಬಹುದು". ಅದೇ ಸೂಚನೆಯನ್ನನುಸರಿಸಿ ಹೊರಟ ನಮಗೆ ಮುಖ್ಯರಸ್ತೆಯೂ ಕಾಣಸಿಕ್ಕಿತು; ಅತ್ತ ಬಂದ ಟ್ರಕ್ಕೊಂದನ್ನು ಏರಿ ಮುಂದಿನ ಪಟ್ಟಣವನ್ನು ತಲುಪುವುದಕ್ಕೂ ಸಾಧ್ಯವಾಯಿತು. ಎಂಥ ಪರಿಸ್ಥಿತಿಯಲ್ಲೂ ಮನಸ್ಸ್ಥೈರ್ಯವನ್ನು ಕಳೆದುಕೊಳ್ಳದ, ಯಾವುದೇ ಸಮಸ್ಯೆಗೆ ಸೂಕ್ತ ಪರಿಹಾರವೊಂದನ್ನು ಅನ್ವೇಷಿಸಬಲ್ಲ ವ್ಯಕ್ತಿತ್ವ ಅವರದ್ದಾಗಿತ್ತು ಎನ್ನುವುದಕ್ಕೆ ಇದೊಂದು ಉದಾಹರಣೆ. ತಾವು ಸಾಹಸಶೀಲರಾಗಿರುವುದಲ್ಲದೆ, ಉಳಿದವರಲ್ಲೂ ಸಾಹಸದ ಪ್ರವೃತ್ತಿಯನ್ನು ಬೆಳೆಸುವ ಪ್ರೇರಕಶಕ್ತಿ ಅವರಲ್ಲಿತ್ತು.

ಅನಂತಕುಮಾರರ ಕಾರ್ಯಸಾಮರ್ಥ್ಯವನ್ನು ನೋಡಿಯೇ ತಿಳಿಯಬೇಕು. ಅದು ಯಾವುದೋ ಅಭ್ಯಾಸವರ್ಗದ ಕಾರ್ಯಕ್ರಮವಿರಲಿ, ರಾಷ್ಟ್ರೀಯ ಸಮ್ಮೇಳನವೇ ಇರಲಿ. ಕಾರ್ಯಕ್ರಮದ ಪ್ರತಿಯೊಂದು ರೂಪರೇಶೆಯೂ ಸಿದ್ಧವಾಗತಕ್ಕದ್ದು. ಸಭೆ ನಡೆಯಬೇಕಾದ್ದು ಎಲ್ಲಿ, ಯಾರು ಮುಖ್ಯ ಅತಿಥಿಗಳು, ಅವರ ಪ್ರಯಾಣವ್ಯವಸ್ಥೆ ಹೇಗೆ, ಅವರನ್ನು ಕರೆದುಕೊಂಡು ಬರುವವರು ಯಾರು, ನೆರವಿಗೆ ನಿಲ್ಲುವವರು ಯಾರು, ಧ್ವನಿವರ್ಧಕ ಎಲ್ಲಿಂದ, ಅದರ ವ್ಯವಸ್ಥೆ ವಹಿಸಬೇಕಾದವರು ಯಾರು, ಸಭಿಕವಿದ್ಯಾರ್ಥಿಗಳು ಯಾರು, ಅವರು ಎಲ್ಲಿಂದ ಬರಬೇಕು-ಇವೆಲ್ಲ ವಿವರಗಳು ಒಂದೂ ಬಿಡದಂತೆ ಅವರ ಅವಗಾಹನೆಗೆ ಬಂದು ನಿಶ್ಚಯವಾಗಿಬಿಡಬೇಕು. ಸಭೆಯಲ್ಲಿ ಮಂಡಿಸಬೇಕಾದ ನಿರ್ಣಯಗಳನ್ನೂ ಅವರೇ ಬರೆಯತೊಡಗುವರು.

ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಲ್ಲಿ ವಿದ್ಯಾರ್ಥಿಪಥ ಎಂಬ ಪತ್ರಿಕೆಯ ಪ್ರಕಟಣೆಯೂ ಸೇರಿತ್ತು. ಈ ಪತ್ರಿಕೆಗಾಗಿ ಅನಂತಕುಮಾರ್ ಬರೆಯುತ್ತಿದ್ದ ಚುಟುಕಗಳು ಬಹು ಜನಪ್ರಿಯವಾಗಿದ್ದವು. ಒಂದು ಕಾಲಕ್ಕೆ ಈ ಪತ್ರಿಕೆಯನ್ನು ಸ್ಟೆನ್ಸಿಲ್ ಕಾಗದದಲ್ಲಿ ಬರೆದು ಬಿಳಿಹಾಳೆಗಳ ಮೇಲೆ ಛಾಪುಮೂಡಿಸಲು ರೋಲರ್ ಬಳಸಿ ಒತ್ತಬೇಕಾಗಿತ್ತು. ಲೇಖನಚುಟುಕಗಳನ್ನು ಬರೆಯುವುದರ ಜೊತೆಗೆ ಈ ಕಲ್ಲಚ್ಚಿನ ಕೆಲಸಕ್ಕೂ ಅನಂತಕುಮಾರರು ಸಜ್ಜಾಗಿ ನಿಲ್ಲುತ್ತಿದ್ದರು. ಆಗ ರಾಜ್ಯದ ಶೈಕ್ಷಣಿಕ ಸ್ಥಿತಿಗತಿಗಳು ಹದಗೆಟ್ಟಿದ್ದವು. ಇದರ ಅವ್ಯವಸ್ಥೆಯ ಕಡೆಗೆ ವಿದ್ಯಾರ್ಥಿಗಳಿಂದ ಮೊದಲುಗೊಂಡು ಸರ್ಕಾರದವರೆಗೆ ಎಲ್ಲರ ಗಮನ ಸೆಳೆಯುವ ಸಲುವಾಗಿ ಕರಾಳಪತ್ರ ಎಂಬ ಸಂಚಿಕೆಯನ್ನು ಹೊರಡಿಸುತ್ತಿದ್ದೆವು. ಈ ಪತ್ರದ ಒಕ್ಕಣೆಯನ್ನು ಹೇಳಿ ಬರೆಸುವವರು ಅನಂತಕುಮಾರರೇ. ಬರೆದುಕೊಳ್ಳುವ ಲಿಪಿಕಾರ ಬೇಳೂರು ಸುದರ್ಶನ. ನಾನು ಸಾಕ್ಷೀಭೂತ. ಎಲ್ಲಿಯೋ ಪದವನ್ನೋ ವಾಕ್ಯವನ್ನೋ ಸರಿಮಾಡಲು ಒಗ್ಗರಣೆ ಹಾಕುವ ಕೆಲಸವಷ್ಟೇ ನನ್ನದು. ಅನಂತಕುಮಾರ ಗಮನಿಸುತ್ತಿದ್ದ ರೀತಿಯ ಪ್ರಕಾರ, ಬರೆವಣಿಗೆಯ ಸಾಹಿತ್ಯ ಸಮತೂಕವಾಗಿರತಕ್ಕದ್ದು. ಎಲ್ಲಿ ಯಾವ ಪದ ಬಳಸಬೇಕು ಎಂಬ ಎಚ್ಚರ ಅವರಲ್ಲಿತ್ತು. ಪದಪ್ರಯೋಗ ಎಲ್ಲಿ ಸೌಮ್ಯವಾಗಿರಬೇಕು, ಎಲ್ಲಿ ವಿಡಂಬಿಸುವಂತಿರಬೇಕು, ಎಲ್ಲಿ ಉಗ್ರವಾಗಿರತಕ್ಕದ್ದು ಎಂಬುದನ್ನೆಲ್ಲ ಅವರು ಗಮನಿಸುವವರೇ. ಒಕ್ಕಣೆ ಪತ್ರಿಕೆಯದ್ದಿರಲಿ, ಕರಪತ್ರದ್ದಾಗಿರಲಿ, ಗೋಡೆಗೆ ಅಂಟಿಸುವ ಪೋಸ್ಟರ್ ಇರಲಿ, ಎಲ್ಲದರ ಬರೆಹದ ಹಿನ್ನೆಲೆಯಲ್ಲಿ ಅನಂತಕುಮಾರರ ಪ್ರೇರಣೆ ಇದ್ದೇ ಇರುತ್ತಿತ್ತು.

ಕರಪತ್ರ, ಪೋಸ್ಟರುಗಳನ್ನು ಅಂಟಿಸುವ ಜವಾಬ್ದಾರಿಯೂ ನಮ್ಮದೇ. ರಾತ್ರಿಯ ಹೊತ್ತಿನಲ್ಲಿ ಸೈಕಲ್ಲೋ ಲೂನಾ, ಸ್ಕೂಟರೋ ಯಾವುದು ಸಿಕ್ಕರೆ ಅದನ್ನು ಹತ್ತಿಕೊಂಡು ಹೊರಡುತ್ತಿದ್ದೆವು. ಊಟತಿಂಡಿಗೆ ಇಂಥದೇ ಬೇಕೆಂಬ ಹಂಬಲವಾಗಲಿ, ಪರಿವೆಯಾಗಲಿ ಇರುತ್ತಿರಲಿಲ್ಲ. ಹಿರಿಯ ನಾಯಕರಾದ ಕೃಷ್ಣ ಭಟ್ಟರು, ದತ್ತಾತ್ರೇಯ ಹೊಸಬಾಳೆಯವರನ್ನೊಳಗೊಂಡಂತೆ ನಾವೆಲ್ಲ ರಸ್ತೆಬದಿಯ ಗಾಡಿಗಳಲ್ಲಿ ಸಿಕ್ಕಿದ್ದನ್ನು ತಿಂದುಕೊಂಡು ಕಾಲದೂಡಿದ್ದುಂಟು. ಆಗ ಮೆಜೆಸ್ಟಿಕ್ ನಲ್ಲಿ ಬಂಡು ಹೋಟೇಲ್ ಎಂಬ ಹೆಸರಿನ ಉಪಾಹಾರಗೃಹವಿತ್ತು. ಆ ಹೋಟೆಲಿನವನು ಕೊಡುವ ಊಟವೋ ಏನೂ ಸಾಲದು. ಅಂತೂ ಅದನ್ನೇ ತಿಂದುಕೊಂಡಿರಬೇಕಾದ ಸ್ಥಿತಿ. ಆ ಗಾಡಿಗಳವರು, ರಾತ್ರಿ ಹೋಟೆಲಿನವರು ನಮ್ಮ ಹೊಟ್ಟೆ ತುಂಬಿಸದೇ ಇದ್ದರೂ ಒಳ್ಳೆಯ ಸ್ನೇಹಿತರೇ ಆಗಿದ್ದರು.

ಒಬ್ಬ ನಾಯಕರಾಗಿ ಅನಂತಕುಮಾರ್ ಪ್ರವಾಸ ಕೈಗೊಳ್ಳುತ್ತಿದ್ದ ಬಗೆಯೂ ಅತಿ ವಿಶಿಷ್ಟವಾಗಿರುತ್ತಿತ್ತು. ಸಾಮಾನ್ಯವಾಗಿ ಮುಖಂಡರಾದವರು ಜಿಲ್ಲಾಕೇಂದ್ರಕ್ಕೋ ತಾಲ್ಲೂಕು ಕೇಂದ್ರಕ್ಕೋ ಬಂದು ಅಲ್ಲಿ ವಿದ್ಯಾರ್ಥಿಕಾರ್ಯಕರ್ತರನ್ನು ಭೇಟಿಯಾಗಿ ಮಾತನಾಡಿಸಿ ಕಳುಹಿಸುವಂತೆ ಅನಂತಕುಮಾರ್ ಕೆಲಸಮುಗಿಸಿ ಹೋಗುವವರಲ್ಲ. ಕಾರ್ಯಕರ್ತರು ಎಲ್ಲಿ ಯಾವ ಹಳ್ಳಿಯಲ್ಲಿ ವಾಸವಾಗಿರುತ್ತಾರೋ ಅಲ್ಲಿಗೇ ಸೀದಾ ಹೋಗಿ ಮಾತನಾಡಿಸುವಂಥವರು ಅವರು. ನಾನು ಆಗ ಉತ್ತರಕನ್ನಡ ಜಿಲ್ಲೆಯ ಪ್ರಮುಖನಾಗಿ ಎರಡು ವರ್ಷ ಕಾರ್ಯನಿರ್ವಹಿಸುತ್ತಿದ್ದ ಕಾಲ. ನಮ್ಮ ಜಿಲ್ಲೆಯಲ್ಲಿ ಹುಡುಗರೆಲ್ಲ ಬಹುತೇಕ ಹಳ್ಳಿಯವರು. ಕೆಲಸಕ್ಕೋ ಕಾಲೇಜಿಗೋ ಮಾತ್ರವೇ ಪೇಟೆಯತ್ತ ಸುಳಿಯುವವರು. ಅನಂತಕುಮಾರ್ ಬಂದಾಗಲೆಲ್ಲ ಅವರೊಡನೆ ಜಿಲ್ಲೆಯ ಹಳ್ಳಿಹಳ್ಳಿಗೂ ಹೋಗುತ್ತಿದ್ದೆ. ಸಿಕ್ಕಿದ ವಾಹನ ಹತ್ತಿಕೊಂಡೋ ಸೈಕಲ್ಲೋ ಬೈಕೋ ಏರಿಕೊಂಡೋ ಮೂಲೆಮೂಲೆಯ ಹಳ್ಳಿಗೆ ಹೋಗುತ್ತಿದ್ದೆವು. ಕಾರ್ಯಕರ್ತನಿಗೂ ಆತನ ಮನೆಯವರಿಗೂ ನಮ್ಮನ್ನು ನೋಡಿ ಅಚ್ಚರಿ,ಸಂತೋಷ . ಆ ಕಾರ್ಯಕರ್ತನಿಗೆ ಮುಖಂಡರು ತಾನು ಇರುವಲ್ಲಿಗೇ ಬಂದರಲ್ಲ ಎಂಬ ಸಂತಸವಾದರೆ, ನಮಗೆ ಕಾರ್ಯಕರ್ತನನ್ನು ಕೆಲಸಕ್ಕೆ ತೊಡಗಿಸುವುದರ ಬಗೆಗೆ ಖಚಿತವಾದ ಸ್ಪಷ್ಟತೆ ಲಭ್ಯವಾಗುತ್ತದೆ ಎಂಬುದು ಅನಂತಕುಮಾರರ ಆಲೋಚನೆ. ಮುಖಂಡನೆಂದರೆ ಎಲ್ಲೋ ಕೇಂದ್ರಸ್ಥಾನಕ್ಕೆ ಬಂದು ಅವರಿವರನ್ನು ಮಾತನಾಡಿಸಿ ಬೈಠಕ್ ನಡೆಸಿ ಕೆಲಸ ಮುಗಿಸಿ ಹೊರಟುಬಿಡುವುದಲ್ಲ. ಸಂಘಟನೆಯ ಕಾರ್ಯದಲ್ಲಿ ಕಾರ್ಯಕರ್ತರನ್ನು ಆತ್ಮೀಯವಾಗಿ ಒಳಪಡಿಸಿಕೊಳ್ಳುವ ಕಲೆ ಅನಂತಕುಮಾರರಿಗೆ ಕರಗತವಾಗಿತ್ತು.

ಕಾರ್ಯಕರ್ತರ ವಿಶ್ವಾಸವನ್ನು ಗಳಿಸುವುದಷ್ಟೇ ಅಲ್ಲ, ಅವರ ಮನೆಯ ಸದಸ್ಯರಲ್ಲೇ ಒಬ್ಬರಂತೆ ಆತ್ಮೀಯರಾಗುವ ಕಲೆ ಅವರಿಗೆ ಸಿದ್ಧಿಸಿತ್ತು. ಅದರಲ್ಲೂ ಮನೆಯ ಹಿರಿಯರ ಪ್ರೀತಿವಿಶ್ವಾಸಗಳಿಗೆ ಅವರು ಪಾತ್ರರಾಗುತ್ತಿದ್ದ ಪರಿ ಅನನ್ಯವೇ ಸರಿ. ನಮ್ಮ ಮನೆಗೆ ಬಂದಾಗಲೆಲ್ಲ ನಮ್ಮ ತಂದೆಯವರೊಡನೆ ಕುಳಿತು ಕವಳ ಮೆಲ್ಲುತ್ತ ರಾತ್ರಿ ಒಂದು ಗಂಟೆಯವರೆಗೂ ಅನಂತಕುಮಾರ್ ಹರಟೆ ಹೊಡೆದದ್ದೂ ಹೊಡೆದದ್ದೇ. ವಯಸ್ಸಿನ ಅಂತರ ಅಲ್ಲಿ ಗೋಚರವಾಗುತ್ತಲೇ ಇರಲಿಲ್ಲ. ಅಷ್ಟು ಹೊತ್ತು ಮಾತುಕತೆಗಾದರೂ ವಿಷಯ ಎಲ್ಲಿರುತ್ತಿತ್ತೋ ಏನೋ. ಸಮಾನವಯಸ್ಕರಲ್ಲದವರೊಡನೆಯೂ ಅನಂತಕುಮಾರ್ ಬೆಳೆಸಿಕೊಳ್ಳುತ್ತಿದ ಸ್ನೇಹ ಅಚ್ಚರಿ ಮೂಡಿಸುವಂಥದ್ದೇ ಸರಿ. ಆಯಾ ಕಾರ್ಯಕರ್ತರ ಮನೆಯ ಸ್ಥಿತಿಗತಿ, ಅವರ ಸಂಸ್ಕೃತಿ, ಆಚಾರವಿಚಾರಗಳೆಲ್ಲ ಅನಂತಕುಮಾರರಿಗೆ ಅಧ್ಯಯನದ, ಆಸಕ್ತಿಯ ವಸ್ತುವಿಷಯಗಳೂ ಆಗಿರುತ್ತಿದ್ದವು. ಸಮಯಸಂದರ್ಭಗಳಿಗೆ ತಕ್ಕಂತೆ ತಮ್ಮ ತಿಳುವಳಿಕೆಯನ್ನು ಅವರು ಬಳಸಿಕೊಳ್ಳುವುದಕ್ಕೂ ಅವಕಾಶವಾಗುತ್ತಿತ್ತು. ಹವ್ಯಕರ ಸಮ್ಮೇಳನದಲ್ಲಿ ಅವರು ಅಪ್ಪೆಹುಳಿಯನ್ನು ನೆನಪಿಸಿಕೊಳ್ಳುವವರೇ. ಹೀಗೆ ಹೋದಲ್ಲೆಲ್ಲ ಮೇಲುನೋಟದ ಬಾಯಿಮಾತಿನ ಉಪಚಾರಕ್ಕೆ ಸೀಮಿತವಾಗಿರದೆ, ತಳಮಟ್ಟದವರೆಗೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದುದರಿಂದಲೇ ಎಲ್ಲರಿಗೂ ಅನಂತಕುಮಾರ್ ನಮ್ಮವರು ಎಂಬ ಭಾವನೆ ಮೂಡಲು ಸಾಧ್ಯವಾಯಿತು. ದೇಶದ ಉದ್ದಗಲಗಳಲ್ಲಿ ಅನಂತಕುಮಾರ್ ಎಲ್ಲರ ನಾಯಕರೆನಿಸಿಕೊಂಡದ್ದು ಹೀಗೆಯೇ.

ಇಲ್ಲಿಯವರೆವಿಗೂ ನಾನು ಅನಂತಕುಮಾರ್ ವಿದ್ಯಾರ್ಥಿಪರಿಷತ್ತಿನ ನಾಯಕರಾಗಿದ್ದ ಕಾಲದ ಸಂದರ್ಭಗಳನ್ನು ಹೇಳಿದೆ. ಅನಂತಕುಮಾರ್ ಕೇಂದ್ರಮಂತ್ರಿಗಳಾಗಿದ್ದ ಕಾಲದ ಇನ್ನೊಂದು ಸಂದರ್ಭ ನನಗೆ ನೆನಪಾಗುತ್ತಿದೆ. ತುರ್ತುಪರಿಸ್ಥಿತಿಯಲ್ಲಿ ಹೋರಾಟ ಮಾಡಿದವರ ಸಭೆಯೊಂದನ್ನು ಮಧ್ಯಪ್ರದೇಶದಲ್ಲಿ ಆಯೋಜಿಸಲಾಗಿತ್ತು. ಅದಕ್ಕೆ ಅನಂತಕುಮಾರರನ್ನೂ ಆಹ್ವಾನಿಸಲಾಗಿತ್ತು. ಅವರೊಡನೆ ನಾನೂ ಹೋಗಿದ್ದೆ. ಇಡೀ ರಾಜ್ಯದ ವಿವಿಧೆಡೆಗಳಿಂದ ಬಂದಿದ್ದ ಜನರು ಅನಂತಕುಮಾರ್ ವಿಮಾನ ನಿಲ್ದಾಣದಲ್ಲಿ ಇಳಿದಾಗಿನಿಂದ ದಿನವಿಡೀ ಅವರೊಡನೆ ನಡೆದುಕೊಂಡ ರೀತಿ, ತೋರಿದ ಪ್ರೀತ್ಯಾದರಗಳು ನನಗೆ ಅಚ್ಚರಿ ಮೂಡಿಸಿದವು. ಉಳಿದವರಿರಲಿ, ಸ್ವತಃ ಮುಖ್ಯಮಂತ್ರಿಯವರು ತಮ್ಮ ಖಾಸಗಿ ಕೊಠಡಿಯಲ್ಲಿ ಅನಂತಕುಮಾರರೊಡನೆ ಮಾತನಾಡುವಾಗಲೂ ನಿಂತೇ ಇದ್ದರೇ ಹೊರತು ಕುಳಿತು ಮಾತನಾಡುವುದಕ್ಕೂ ಸಂಕೋಚ ಪಡುವಷ್ಟು ಗೌರವಯುತವಾಗಿ ವರ್ತಿಸುತ್ತಿದ್ದರು. ಆಮೇಲೆ ನನ್ನೊಡನೆ ಮಾತನಾಡುವಾಗ, ಅನಂತಕುಮಾರರ ಕಾರ್ಯಶೀಲತೆ, ಪ್ರಯತ್ನಗಳಿಂದಲೇ ತಮಗೆ ಮುಖ್ಯಮಂತ್ರಿಯಾಗಲು ಸಾಧ್ಯವಾಯಿತೆಂದು ಧನ್ಯತಾಪೂರ್ವಕ ಹೇಳಿಕೊಂಡರು.

ಉಳಿದ ಕಾರ್ಯಕರ್ತರು, ಶಾಸಕರ ವಿಷಯ ಹೇಳುವುದೇ ಬೇಡ. ಅನಂತಕುಮಾರ್ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರನ್ನು ಹೇಗೆ ಸಂಘಟನೆಯಲ್ಲಿ ತೊಡಗಿಸುತ್ತಿದ್ದರೋ ಅದೇ ತತ್ಪರತೆಯಿಂದ ಬಿಜೆಪಿ ಕಾರ್ಯಕರ್ತರನ್ನೂ ಪಕ್ಷದ ಕಾರ್ಯದಲ್ಲಿ ತೊಡಗಿಸುತ್ತಿದ್ದರು. ಕರ್ನಾಟಕದಲ್ಲೇನೋ ತಮ್ಮವರನ್ನು ನೆನಪಿಟ್ಟುಕೊಂಡು ಮಾತನಾಡಿಸುತ್ತಿದ್ದುದು ಸರಿಯೇ. ದೂರದ ಮಧ್ಯಪ್ರದೇಶದಲ್ಲಿ ತಾವು ಚುನಾವಣಾ ಸಂದರ್ಭದಲ್ಲಿ ಮೇಲ್ವಿಚಾರಕರಾಗಿ ಹೋಗಿದ್ದಾಗ ಕಂಡು ಮಾತನಾಡಿಸಿದವರನ್ನೂ ಅವರು ಹೆಸರು, ಊರು ಸಹಿತ ನೆನಪಿಟ್ಟುಕೊಂಡಿದ್ದುದು ಬೆರಗುಗೊಳಿಸುವಂತಹದ್ದೇ ನಿಜ. ಪಾರ್ಟಿಯ ಟಿಕೆಟ್ ಪಡೆದು ಗೆದ್ದವನನ್ನು ಹೆಸರು ಹಿಡಿದು ಮಾತನಾಡಿಸುವುದಿರಲಿ, ಅವನಿಗೆ ಪ್ರತಿಸ್ಪರ್ಧಿಯಾಗಿ ಸ್ಥಾನಾಕಾಂಕ್ಷಿಯಾಗಿದ್ದವನ ಹೆಸರನ್ನೂ ನೆನಪಿಸಿಕೊಂಡು ಅವನು ಹೇಗಿದ್ದಾನೆ, ಏನು ಮಾಡುತ್ತಿದ್ದಾನೆ ಎಂದು ವಿಚಾರಿಸುವುದೆಂದರೆ ಸಾಮಾನ್ಯವೇ? ಮಧ್ಯಪ್ರದೇಶದಂತೆಯೇ ಬಿಹಾರ, ದಿಲ್ಲಿ ಮೊದಲಾದ ರಾಜ್ಯಗಳಲ್ಲೂ ಅವರು ಪಕ್ಷದ ಉಸ್ತುವಾರಿಯಾಗಿ ಕೆಲಸಮಾಡಿದ್ದಾರೆ. ಅಲ್ಲೂ ಅಸಂಖ್ಯ ಕಾರ್ಯಕರ್ತರು, ಅಭ್ಯರ್ಥಿಗಳು, ಶಾಸಕರು ಅನಂತಕುಮಾರರನ್ನು ತಮ್ಮವರೆಂದು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಿರುವುದರಲ್ಲಿ ಅತಿಶಯೋಕ್ತಿಯಿಲ್ಲ. ಅನಂತಕುಮಾರರ ಈ ಮಹತ್ತರ ಗುಣವೇ ಅವರು ರಾಷ್ಟ್ರನಾಯಕರಾಗಿ ಬೆಳೆಯಲು ಕಾರಣವಾಯಿತು. ಅದಕ್ಕಿಂತ ಮುಖ್ಯವಾಗಿ ದೇಶದೆಲ್ಲೆಡೆ ಹೀಗೆ ನಾಯಕರಾಗಿ ಬೆಳೆಯಬಲ್ಲ ಸಾಮರ್ಥ್ಯವಿರುವವರನ್ನು ಗುರುತಿಸಿ ಅವರು ನಾಯಕತ್ವ ಬೆಳೆಸಿಕೊಳ್ಳಲು ಅನಂತಕುಮಾರರು ಪ್ರೇರಕ ಶಕ್ತಿಯಾದರು ಎಂಬುದು ಗಮನಾರ್ಹ. ಈಗ ನಾನೇ ವಿಧಾನಸಭೆಯ ಸಭಾಧ್ಯಕ್ಷನಾಗಿ ಇಲ್ಲಿ ಕುಳಿತುಕೊಳ್ಳುವುದಕ್ಕೆ ಅನಂತಕುಮಾರರ ಕೊಡುಗೆ ಎಷ್ಟಿದೆಯೆಂದು ಏನು ಹೇಳಲಿ? ನನ್ನಂತೆ ಇಡೀ ದೇಶದಲ್ಲಿ ಅವರಿಂದ ಪ್ರೇರಿತರಾಗಿ, ಕಲಿತು, ಪ್ರಭಾವಿತರಾಗಿ ಮುಂದೆ ಬಂದವರು ಅದೆಷ್ಟು ಜನರಿರಬಹುದು! ಹೀಗೆ ಕಾರ್ಯಕರ್ತರಲ್ಲಿ ನಾಯಕತ್ವದ ಪ್ರತಿಭೆಯನ್ನು ಗುರುತಿಸಿ, ಬೆಳೆಸಿ ಅವರನ್ನು ದೇಶದ ಸೇವೆಗೆ ಜೋಡಿಸುವುದಿದೆಯಲ್ಲ, ಅದು ಅಸಾಮಾನ್ಯವಾದ ಕೆಲಸ. ಕಾರ್ಯಕರ್ತರನ್ನು ಬೆಳೆಸಿ ನಾಯಕರನ್ನಾಗಿ ಮಾಡುವುದಲ್ಲದೆ ಅವರನ್ನು ದೇಶದ ಕಾರ್ಯದಲ್ಲಿ ತೊಡಗಿಸುವುದೂ ಒಂದು ಮಹಾನ್ ಸೇವೆಯೇ ಸರಿ.

### ಶಿಕ್ಷಕರ ದಿನದ ವಿಶೇಷ ಲೇಖನ

# ನಿಮ್ಮ ಮಿನಿಸ್ಟರ್.. ನನಗ ಮಗಾ !



ಪ್ರಾಥಮಿಕ ಶಾಲೆಯೊಂದರ ನಿವೃತ್ತ ಶಿಕ್ಷಕಿ ಪ್ರಿಸಿಲ್ಲಾ ನಡಗಡ್ಡಿಯವರಿಗೆ ಕೇಂದ್ರ ಸಚಿವರಿಂದ ಫೋನ್ ಕರೆ ಬಂದಿತೆಂದು ಹೇಳಿದರೆ ಯಾರೂ ಅಚ್ಚರಿಪಡಬೇಕಾಗಿಲ್ಲ. ನಡಗಡ್ಡಿ ಟೀಚರ್ ತಮ್ಮ ಮೂವತ್ತೆಂಟು ವರುಷಗಳ ಸೇವಾವಧಿಯಲ್ಲಿ ಪಾಠಹೇಳಿದ ಮಕ್ಕಳಲ್ಲಿ ಹಿರಿಯ ಅಧಿಕಾರಿಗಳಾಗಿ ಉನ್ನತಸ್ಥಾನಕ್ಕೇರಿದ ಅನೇಕರಿದ್ದಾರೆ. ಅಂಥ ಶಿಷ್ಯರಲ್ಲೊಬ್ಬ ಕೇಂದ್ರಸಚಿವನಾಗುವುದು ದೊಡ್ಡಸಂಗತಿಯೇ. ಹಾಗೆ ಮಂತ್ರಿಯಾದವರು ತನಗೆ ಪ್ರಾಥಮಿಕ ಶಾಲೆಯಲ್ಲಿ ಪಾಠ ಹೇಳಿದ ನಡಗಡ್ಡಿಯವರನ್ನು ಇನ್ನೂ ನೆನಪಿಟ್ಟುಕೊಂಡು ಅವರನ್ನು ಕಾಣಬಯಸುವುದು ದೊಡ್ಡ ವಿಷಯ. ಇಲ್ಲಿ ಹಿರಿಮೆಯಿರುವುದು ಆ ವಿದ್ಯಾರ್ಥಿಯ ನೆನಪಿನದಲ್ಲ; ಹಾಗೆ ನೆನಪಿಟ್ಟುಕೊಳ್ಳುವಂಥ ವ್ಯಕ್ತಿತ್ವವುಳ್ಳ ಶಿಕ್ಷಕಿಯದೇ ದೊಡ್ಡತನವೆಂದರೆ ಅತಿಶಯವಲ್ಲ.

೧೯೬೦ರ ದಶಕ. ಎಂ.ಟಿ.ಎಸ್. ಕಾಲನಿಯಲ್ಲಿ ರೈಲ್ವೆ ಇಲಾಖೆ ತೆರೆದಿದ್ದ ಪ್ರಾಥಮಿಕ ಶಾಲೆಯ ಮೊದಲ ಉಪಾಧ್ಯಾಯಿನಿಯಾಗಿ ಸೇರಿದವರು ಪ್ರಿಸಿಲ್ಲಾ ನಡಗಡ್ಡಿ. ಇಡೀ ಶಾಲೆಗೆ ಆಗ ಅವರೊಬ್ಬರೇ ಶಿಕ್ಷಕಿ. ಆ ವರ್ಷ ಶಾಲೆಗೆ ಸೇರಿದ ಮೊದಲ ತಂಡದ ಮಕ್ಕಳಲ್ಲಿ ಅನಂತಕುಮಾರನೂ ಒಬ್ಬ. ಬಲುಬೇಗ ಶಾಲೆಯ ಮಕ್ಕಳಿಗೆಲ್ಲ ನಡಗಡ್ಡಿಯವರು ಪ್ರೀತಿಪಾತ್ರರಾದರು. ಎಂ.ಟಿ.ಎಸ್. ಕಾಲನಿಯೇ ಒಂದು ದೊಡ್ಡ ಕುಟುಂಬದಂತಿತ್ತು. ಹೀಗಾಗಿ ಟೀಚರ್ ಇಡಿಯ ಕಾಲನಿಯ ಅಕ್ಕರೆಯ ಮಡಿಲಲ್ಲಿ ಸೇರಿಕೊಳ್ಳಲು ತಡವಾಗಲಿಲ್ಲ.

ಕಾಲನಿಯ ಚಟುವಟಿಕೆಗಳ ನೇತೃತ್ವ ವಹಿಸಿದ ಗಿರಿಜಾ ಶಾಸ್ತ್ರಿಯವರಂತೂ ನಡಗಡ್ಡಿಯವರ ಕ್ರಿಯಾಶೀಲತೆಗೆ ಬೆಂಬಲವಾಗಿ ನಿಂತರು. ಶಾಲೆಯ ಪಠ್ಯೇತರ ಚಟುವಟಿಕೆಗಳಿಗೆಲ್ಲ ಗಿರಿಜಾರವರ ಸಹಕಾರ ಸದಾ ಸಿದ್ಧ. ಇನ್ನು ಗಿರಿಜಾರವರ ಮಗ ಅನಂತನನ್ನು ಕೇಳಬೇಕೆ? ನಡಗಡ್ಡಿ ಟೀಚರ್ ಹೋದಲ್ಲಿ ಬಂದಲ್ಲಿ ಅವನೂ ಇರಲೇಬೇಕು. ಶಾಲೆ ಮುಗಿಸಿ ಟೀಚರ್ ಮನೆಗೆ ಹೊರಟಾಗ ಅವರ ಕೈಚೀಲವನ್ನೋ ಕೊಡೆಯನ್ನೋ ಹೊತ್ತು ಅವರ ಮನೆಯವರೆಗೂ ತಲುಪಿಸಿ ಬರುವ ಹೊಣೆಗಾರಿಕೆಯನ್ನು ಅನಂತ ಅಧಿಕೃತವಾಗಿ ವಹಿಸಿಕೊಂಡುಬಿಟ್ಟಿದ್ದ! ಅವನ ಜೊತೆಗೆ ಇನ್ನಷ್ಟು ಮಕ್ಕಳ ಸಾಲುಮೆರವಣಿಗೆ. ಹುಬ್ಬಳ್ಳಿಯ ರಸ್ತೆಯ ಟ್ರಾಫಿಕ್ ಗಜಿಬಿಜಿಯಲ್ಲಿ ಮಕ್ಕಳು ವಾಪಸು ತಮ್ಮ ಮನೆ ಸೇರಬೇಕಲ್ಲ ಎಂಬ ಆತಂಕ ಟೀಚರಿಗೆ. ಟೀಚರ್ ಅವರನ್ನು ಸುರಕ್ಷಿತವಾಗಿ ಮನೆ ತಲುಪಿಸುವ ಹಿರಿಯ ಜವಾಬ್ದಾರಿ ನಿರ್ವಹಿಸಿದ ಸಂತೋಷ ಮಕ್ಕಳಿಗೆ!

ಅಂಥ ನಾಯಕತ್ವದ ಗುಣಗಳನ್ನು ಚಿಕ್ಕಂದಿನಿಂದಲೇ ಬೆಳೆಸಿಕೊಂಡ ಅನಂತಕುಮಾರ ಇಂದು ಕೇಂದ್ರಮಂತ್ರಿಯಾದುದರಲ್ಲಿ ಅಚ್ಚರಿಯಿಲ್ಲ ಎಂದು ನಡಗಡ್ಡಿ ಹೆಮ್ಮೆಪಟ್ಟುಕೊಂಡರು. ಚಿಕ್ಕಂದಿನ ಅದೇ ಅಕ್ಕರೆ, ವಿಶ್ವಾಸ, ಗೌರವವನ್ನು ಇವತ್ತಿಗೂ ಉಳಿಸಿಕೊಂಡಿರುವ ಬಗೆಗೆ ಅಭಿಮಾನ ತುಂಬಿಬಂದಿತು.

ಅನಂತ ಎಷ್ಟು ಬುದ್ಧಿವಂತನೋ ಅಷ್ಟೇ ತುಂಟ. ಪಠ್ಯೇತರ ಚಟುವಟಿಕೆಗಳಲ್ಲಿ ಅಷ್ಟೇ ಮುಂದು. ಅನಂತಕುಮಾರ ಇದ್ದಾನೆಂದರೆ ಸ್ಕೌಟ್ ಶಿಬಿರಗಳಲ್ಲಿ ಎಂ ಟಿ ಎಸ್ ಕಾಲನಿ ಶಾಲೆಗೇ ಮೊದಲ ಪಾರಿತೋಷಕ ಎಂಬುದು ತೀರ್ಮಾನವಾದ ಹಾಗೆಯೇ. ಹಾಗೆಂದು ಅನಂತನ ತುಂಟತನವೇನೂ ಕಡಿಮೆಯಲ್ಲ. ಹೈದರಾಬಾದಿನ ಸ್ಕೌಟ್ ಶಿಬಿರಕ್ಕೆ ಮಕ್ಕಳನ್ನು ಕರೆದೊಯ್ಯುವಾಗಲೂ ಹಿಂತಿರುಗುವಾಗಲೂ ಇವನ ಚೇಷ್ಟೆಗಳನ್ನು ತಡೆಯುವುದೇ ಕಷ್ಟವಾಗಿತ್ತು. ಹುಡುಗಿಯರ ಚಪ್ಪಲಿಗಳನ್ನು ಅಡಗಿಸುವುದೇನು, ಗೋಳುಹೊಯ್ದುಕೊಳ್ಳುವುದೇನು? ಅನಂತನ ಚೇಷ್ಟೆಗಳನ್ನು ನಿಯಂತ್ರಿಸಲು ನಡಗಡ್ಡಿಯವರು ದಾರಿಗಾಣದೆ ಅವನಿಗೆಂದೇ ಪ್ರತ್ಯೇಕ ಕಾನೂನು ಹೊರಡಿಸಬೇಕಾಯಿತು- ಪ್ರಯಾಣದುದ್ದಕ್ಕೂ ಅವನು ಟೀಚರರ ಕಣ್ಣಮುಂದೆಯೇ ಕುಳಿತಿರತಕ್ಕದ್ದು!

ಹೀಗೆ ತಮ್ಮ ಕಣ್ಣಮುಂದೆ ಬೆಳೆದ ಅನಂತಕುಮಾರ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಬೇರೆ ಶಾಲೆಗೆ ಸೇರಿದರೂ ಕಾಲನಿಯ ಪರಿಚಿತ ವೃತ್ತದಲ್ಲಿ ಸುಳಿದಾಡುತ್ತಿದ್ದ. ತನ್ನ ಶಿಕ್ಷಕಿ ಮಾತ್ರವಲ್ಲದೆ ಕುಟುಂಬದ ಆತ್ಮೀಯರೂ ಆಗಿದ್ದ ನಡಗಡ್ಡಿಯವರನ್ನು ಮುಂದಿನ ವರ್ಷಗಳಲ್ಲೂ ಅದೇ ಪ್ರೀತಿ ವಿಶ್ವಾಸಗಳಿಂದ ಕಂಡ ಅನಂತಕುಮಾರ್ ಇದೀಗ ರಾಜಕೀಯದ ಯಶಸ್ಸಿನ ಉತ್ತುಂಗಕ್ಕೆ ತಲುಪಿದಾಕ್ಷಣ ಮರೆತುಬಿಡಲು ಸಾಧ್ಯವೇ?

ಕೇಂದ್ರ ಸಚಿವನಾಗಿ ಅಧಿಕಾರ ವಹಿಸಿಕೊಂಡನಂತರ ಒಮ್ಮೆ ಹುಬ್ಬಳ್ಳಿಗೆ ಬರಲಿದ್ದ ಅನಂತಕುಮಾರ್ ನಡಗಡ್ಡಿಯವರನ್ನು ಕಂಡು ಮಾತನಾಡಬಯಸಿದ್ದುದರಲ್ಲಿ ಆಶ್ಚರ್ಯವೇನಿದೆ? ತಮ್ಮ ಪ್ರಿಯಶಿಷ್ಯ ಮನೆಗೇ ಬರಲೆಂಬ ಹಂಬಲ ನಡಗಡ್ಡಿಯವರಿಗೆ. ಆದರೆ ತನ್ನ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ಹಾಗೆ ಬರಲಾಗುವುದಿಲ್ಲವೆಂದು ವಿನಯದಿಂದ ಹೇಳಿದ ಅನಂತಕುಮಾರ್ ತಾವು ಬರಲಿದ್ದ ದಿನ ಬೆಳಗ್ಗೆ ಇಂತಿಷ್ಟು ಹೊತ್ತಿಗೆ ಮಿತ್ರ ವಿಜಯ ಸಂಕೇಶ್ವರರನ್ನು ಕಾಣಲು ಬರುವುದಾಗಿಯೂ ಅವರ ಕಚೇರಿಗೆ ಬಂದರೆ ಪರಸ್ಪರ ಭೇಟಿಮಾಡಬಹುದೆಂದೂ ಕೇಳಿಕೊಂಡರು.

ಆದಿನ ಸಚಿವರು ಬರಲಿದ್ದ ಸ್ಥಳದಲ್ಲಿ ಜನಜಂಗುಳಿಯನ್ನು ನಿಯಂತ್ರಿಸುತ್ತಿದ್ದ ಪೋಲೀಸರು ಕಚೇರಿಯನ್ನು ಪ್ರವೇಶಿಸಲೆತ್ನಿಸಿದ ನಡಗಡ್ಡಿಯವರನ್ನು ತಡೆದುಬಿಟ್ಟರು. ಮಿನಿಸ್ಟರ್ ಬರುವಾಗ ಆ ಕಟ್ಟಡದೊಳಕ್ಕೆ ಯಾರನ್ನೂ ಬಿಡಲಾಗುವುದಿಲ್ಲವೆಂದು ನಿಷ್ಠುರವಾಗಿ ಹೇಳಿದರು. ಪೋಲೀಸ್ ಅಧಿಕಾರಿಗಳೊಡನೆ ನಡಗಡ್ಡಿಯವರು, 'ಅನಂತಕುಮಾರ ಮಂತ್ರಿಯಾದರೇನು, ಅವ ನನ್ನ ಮಗನಿದ್ದಾನೆ, ಅವನನ್ನು ನೋಡಲಿಕ್ಕೆಂದೇ ಬಂದಿದ್ದೇನೆ' ಇತ್ಯಾದಿಯಾಗಿ ಹೇಳಿಕೊಂಡ ಮಾತುಗಳೇನೂ ಮನಸ್ಸಿಗೆ ನಾಟುವಂತಿರಲಿಲ್ಲ. 'ನೀವು ಮಗ ಮತ್ತೊಂದು ಅಂತ ಹೇಳಿ ಒಳಕ್ಕೆ ಹೋದರೆ ಇಲ್ಲಿ ನಮ್ಮ ಕೆಲಸವೇ ಹೋಗುತ್ತದೆ, ನೀವು ದೂರ ಹೋಗಿ' ಎಂದುಬಿಟ್ಟರು. ಅಷ್ಟರಲ್ಲಿ ಅಲ್ಲಿಗೆ ಬಂದ ಅನಂತಕುಮಾರರ ಮಿತ್ರ ಗಂಭೀರ್ ಜೊತೆಗೆ ನಡಗಡ್ಡಿಯವರು ಪೋಲಿಸರ ಅಡಚಣೆ ಕುರಿತು ಹೇಳಿದರೂ ಪ್ರಯೋಜನವಾಗಲಿಲ್ಲ. ಪಾಪ, ಟೀಚರ್ ಅಲ್ಲಿಯೇ ಸುಮ್ಮನೆ ನಿಲ್ಲುವಂತಾಯಿತು.

ಮಂತ್ರಿಗಳ ಕಾರು ಬಂದಿತು. ಕಾರನ್ನು ಜನ ಸುತ್ತುಗಟ್ಟಿದರು. ಕಾರಿನಿಂದಿಳಿದ ಅನಂತಕುಮಾರರಿಗೆ ಸ್ಥಳೀಯ ಮುಖಂಡರು ಹಾರ ಹಾಕಿ ಸ್ವಾಗತಿಸಿದರು. ಎಲ್ಲರಿಗೂ ಕೈಮುಗಿದ ಅನಂತಕುಮಾರರ ದೃಷ್ಟಿ ದೂರದಲ್ಲಿ ನಿಂತ ನಡಗಡ್ಡಿ ಟೀಚರರ ಕಡೆಗೆ ಹೊರಳಿತು. ಜನರನ್ನು ಸರಿಸಿ ಅವರತ್ತ ಬಂದ ಅನಂತಕುಮಾರ ತಮ್ಮ ಕೊರಳಿನಲ್ಲಿದ್ದ ಹಾರವನ್ನು ಟೀಚರ್ ಕೊರಳಿಗೆ ಹಾಕಿದರು. ಬರ್‍ರೀ ಇಲ್ಲೇ ಯಾಕ ನಿಲ್ಲೂದು, ಆಫೀಸ್ ಒಳಗ ಕೂತು ಚಾ ಕುಡಿಯೋಣು ಎಂದವರೇ ತೋಳಿನಲ್ಲಿ ಟೀಚರ್ ಅವರನ್ನೂ ಸೆಳೆದುಕೊಂಡು ಕಚೇರಿಯೊಳಕ್ಕೆ ಹೊರಟುಬಿಟ್ಟರು. ಅವರಿಗಾಗಿ ದಾರಿಮಾಡಿಕೊಡಲು ಬಂದ ಪೋಲಿಸ್ ಅಧಿಕಾರಿಗಳು ಸ್ವಲ್ಪ ಹೊತ್ತಿಗೆ ಮುನ್ನ ನಡಗಡ್ಡಿಯವರನ್ನು ತಡೆದು ನಿಲ್ಲಿಸಿದವರೇ. ಅನಂತಕುಮಾರರ ಜೊತೆಗೆ ಹೆಜ್ಜೆಹಾಕಿದ ನಡಗಡ್ಡಿಯವರು, 'ನಾನಾಗಲೇ ಹೇಳಿದೆನಲ್ಲ, ನಿಮ್ಮ ಮಿನಿಸ್ಟರ್ ನನಗ ಮಗಾ ಅಂತ' ಎಂದು ಹೇಳಿದ್ದು ಪೋಲೀಸರಿಗೆ ಅರ್ಥವಾಯಿತೋ ಇಲ್ಲವೋ ತಿಳಿಯಲಿಲ್ಲ.

## ಸಂಸದೀಯ ಪಟುವಾದ ಮಾದರಿ ಕಾರ್ಯಕರ್ತ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರ ನೆನಪು

ಪುಟ 2 ರಿಂದ

ಅನಂತ್‌ಕುಮಾರ್ ಅಗಲಿಕೆಯಿಂದಾಗಿ, ದೇಶವು ಓರ್ವ ಕಟ್ಟಾಸಕ್ತಿಯ ಸಾಮಾಜಿಕ ಕಾರ್ಯಕರ್ತನನ್ನು, ಓರ್ವ ಮಹಾನ್ ಸಂಸದೀಯ ಪಟುವನ್ನು ಹಾಗೂ ಓರ್ವ ಉತ್ತಮ ಆಡಳಿತಗಾರನನ್ನು ಕಳೆದುಕೊಂಡಿದೆ. ತಮ್ಮ ಪತ್ನಿ ಶ್ರೀಮತಿ ತೇಜಸ್ವಿನಿಯವರೊಂದಿಗೆ ಕೈಜೋಡಿಸಿ ಅನಂತ್‌ಕುಮಾರ್ ಹುಟ್ಟುಹಾಕಿರುವ 'ಅದಮ್ಯ ಚೇತನ' ಎಂಬ ಸರ್ಕಾರೇತರ ಸಂಸ್ಥೆಯೊಂದು, ಸಾಮಾನ್ಯ ಜೀವನಾನುಕೂಲಗಳೂ ಇಲ್ಲದ ಹಾಗೂ ಕಡುಬಡತನದಿಂದ ಕೂಡಿದ ಶಾಲಾಮಕ್ಕಳ ಅವಶ್ಯಕತೆಗಳನ್ನು ಈಡೇರಿಸುವಲ್ಲಿ ವ್ಯಸ್ತವಾಗಿದ್ದು, ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯ, ಮೂಲಸೌಕರ್ಯ, ಶೈಕ್ಷಣಿಕ ಸಾಧನ-ಸಲಕರಣೆಗಳನ್ನು ಒದಗಿಸುವ ಮತ್ತು ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸುವ ಕೈಂಕರ್ಯದಲ್ಲಿ ತೊಡಗಿಸಿಕೊಂಡಿದೆ. ಇಷ್ಟು ಮಾತ್ರವಲ್ಲದೆ, ಬಡಕುಟುಂಬಗಳ ಹುಡುಗಿಯರು ಮತ್ತು ಮಹಿಳೆಯರಿಗಾಗಿ ವೃತ್ತಿಪರ/ಔದ್ಯೋಗಿಕ ತರಬೇತಿ ಕಾರ್ಯಕ್ರಮಗಳನ್ನೂ ಅದು ಹಮ್ಮಿಕೊಳ್ಳುತ್ತ ಬಂದಿದೆ. 'ಒಬ್ಬ ವ್ಯಕ್ತಿಗೆ ಒಂದು ಮರ' ಎಂಬುದನ್ನು ಖಾತ್ರಿಪಡಿಸಲು 'ಹಸಿರು ಬೆಂಗಳೂರು' ಎಂಬ ಉಪಕ್ರಮಕ್ಕೂ ಅನಂತ್ ಚಾಲನೆ ನೀಡಿದರು ಹಾಗೂ ಅದನ್ನೊಂದು ಜನಾಂದೋಲನವಾಗಿ ಪರಿವರ್ತಿಸಿದರು. ಅವರು ಬೆಂಗಳೂರಿನಲ್ಲಿನ ಏರೋಸ್ಪೇಸ್ ಮ್ಯೂಸಿಯಂ ಸೊಸೈಟಿಯ ಸಂಸ್ಥಾಪಕ ಪೋಷಕರೂ ಆಗಿದ್ದರು. ವಿಶ್ವಸಂಸ್ಥೆಯ ೬೭ನೇ ಸಾಮಾನ್ಯ ಸಭೆಗೆ ಕಳಿಸಲಾದ ಭಾರತದ ಸಂಸದೀಯ ನಿಯೋಗದ ಓರ್ವ ಸದಸ್ಯರಾಗಿದ್ದ ಅನಂತ್‌ಕುಮಾರ್, ೨೦೧೨ರ ಅಕ್ಟೋಬರ್ ೧೬ರಂದು ವಿಶ್ವಸಂಸ್ಥೆಯನ್ನುದ್ದೇಶಿಸಿ ಕನ್ನಡದಲ್ಲೇ ಮಾತಾಡುವ ಮೂಲಕ ಇಂಥದೊಂದು ಪಥನಿರ್ಮಿಸಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ವಿಶ್ವಸಂಸ್ಥೆಯನ್ನುದ್ದೇಶಿಸಿ ಹಿಂದಿಯಲ್ಲಿ ಮಾತನಾಡಿದ ಪ್ರಥಮ ವ್ಯಕ್ತಿಯಾಗಿದ್ದರು ಅಟಲ್‌ಜಿ.

ಅನಂತ್‌ಕುಮಾರ್ ಕಣ್ಮರೆಯಾಗುವುದರೊಂದಿಗೆ, ಜನರ ಕಲ್ಯಾಣ ಮತ್ತು ಯೋಗಕ್ಷೇಮಕ್ಕಾಗಿ ಅಹರ್ನಿಶಿ ದುಡಿದ ಜನಪ್ರತಿನಿಧಿಯೊಬ್ಬನನ್ನು ದೇಶ ಕಳೆದುಕೊಂಡಂತಾಗಿದೆ. ಅವರೊಬ್ಬ ಬದ್ಧತೆಯುಳ್ಳ ರಾಜಕೀಯ ಕಾರ್ಯಕರ್ತನಾಗಿದ್ದರು, ಓರ್ವ ಸಮರ್ಥ ಆಡಳಿತಗಾರನಾಗಿದ್ದರು ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ಅವರೊಬ್ಬ ಮಹಾನ್ ಮಾನವಜೀವಿಯೂ ಮಾನವತಾವಾದಿಯೂ ಆಗಿದ್ದರು ಎಂಬುದು ನಿರ್ವಿವಾದ. ಈ ಮುಂದೆ ಉಲ್ಲೇಖಿಸಲಾಗಿರುವ ಚಟುವಟಿಕೆಗಳನ್ನು ನಿರ್ವಹಿಸುವುದೇ ಅನಂತ್‌ಕುಮಾರ್ ಅವರಿಗೆ ನಾವೆಲ್ಲ ಸಲ್ಲಿಸುವ ಅತಿದೊಡ್ಡ ಗೌರವವಾಗುತ್ತದೆ ಎಂಬುದು ನನ್ನ ಭಾವನೆ:


೧) ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿರುವ ನಮ್ಮಲ್ಲಿ ಪ್ರತಿಯೊಬ್ಬರೂ ಮಾನವಕುಲದ ಸೇವೆಗೆ ಬದ್ಧರಾಗಬೇಕು.




೨) ಸಾಮಾನ್ಯ ಜೀವನಾನುಕೂಲಗಳೂ ಇಲ್ಲದ ಹಾಗೂ ಅಪಾಯದಂಚಿಗೆ ಸಿಲುಕಿರುವ ಸಮಾಜದ ವರ್ಗಗಳೆಡೆಗೆ ನಮ್ಮೆಲ್ಲ ಗಮನವನ್ನೂ ಹರಿಸಬೇಕು.

೩) ಸಂಸತ್ತಿನಲ್ಲಿ ನಿಗದಿಪಡಿಸಲಾಗಿರುವ ಮಾನದಂಡಗಳನ್ನು ಕಾಯ್ದುಕೊಂಡು ಹೋಗಬೇಕು; ಕಾಲನಿಷ್ಠೆ, ನಿಯತ ಹಾಜರಿ, ಸಭ್ಯತೆ, ಗಾಂಭೀರ್ಯ, ಆದರ್ಶ ಮಾದರಿಗಳು ಮತ್ತು ಶಿಷ್ಟಾಚಾರಗಳನ್ನು ಕಾಯ್ದುಕೊಂಡು ಹೋಗುವುದು ಇವುಗಳಲ್ಲಿ ಸೇರಿವೆ. ಜನರು ಕ್ಷೋಭೆಗೆ ಒಳಗಾಗಿರುವುದು, ಸಂಸತ್ತು ಮತ್ತು ವಿಧಾನಸಭೆಯಂಥ ಪ್ರಜಾಪ್ರತಿನಿಧಿ ಸಭೆಗಳ ಕಾರ್ಯಶೈಲಿಯ ಕುರಿತಾಗಿ ಅವರು ಹತಾಶರಾಗಿರುವುದು ಮತ್ತು ಚಿಂತಿತರಾಗಿರುವುದು ಇಡೀ ದೇಶಕ್ಕೆ ಒದಗಿರುವ ದೊಡ್ಡ ಕಳವಳವೆಂದೇ ಹೇಳಬೇಕು. ಆ ರಾಜ್ಯ, ಈ ರಾಜ್ಯ ಎನ್ನದೆ, ಬಹಳಷ್ಟು ರಾಜ್ಯಗಳಲ್ಲಿ ಇಂಥದೇ ಪರಿಸ್ಥಿತಿಯಿದೆ. ಆದ್ದರಿಂದ ಗುಣಮಟ್ಟದ ಚರ್ಚೆಗಳಾಗಬೇಕಿರುವುದು ಹಾಗೂ ಘನಗಾಂಭೀರ್ಯದೊಂದಿಗೆ ನಾವೆಲ್ಲ ವರ್ತಿಸಬೇಕಿರುವುದು ನಾವು ಅನಂತ್‌ಕುಮಾರ್ ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ. ಸಾರ್ವಜನಿಕ ಜೀವನದಲ್ಲಿ ಕಾರ್ಯನಿರ್ವಹಿಸುತ್ತಿರುವ ನಾವೆಲ್ಲ ರಾಜಕೀಯ ಎದುರಾಳಿಗಳೇ ವಿನಃ ವೈರಿಗಳಲ್ಲ ಎಂಬ ಸತ್ಯವನ್ನು ಅನಂತ್‌ಕುಮಾರ್ ಅವರ ವರ್ತನೆ, ವ್ಯಕ್ತಿತ್ವ ಮತ್ತು ಅವರು ಹಾಕಿಕೊಟ್ಟ ಮೇಲ್ಪಂಕ್ತಿಯಿಂದ ನಾವೆಲ್ಲ ಅರಿಯಬೇಕಾಗಿದೆ. ಅನಂತ್‌ಕುಮಾರ್ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರನ್ನು ಕಳೆದುಕೊಂಡ ಕುಟುಂಬಕ್ಕೆ ಆ ನೋವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಸರ್ವಶಕ್ತ ಭಗವಂತನನ್ನು ನಾನು ಪ್ರಾರ್ಥಿಸುತ್ತೇನೆ.

## ಅನಂತನ ಭವಿಷ್ಯವಾಣಿ




ಅನಂತಕುಮಾರ ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಪ್ರೌಢಶಾಲೆಯಲ್ಲಿ ಓದುತ್ತಿದ್ದ ಕಾಲ. ಒಮ್ಮೆ ತರಗತಿಯ ಅವಧಿಯೊಂದರಲ್ಲಿ ಶಿಕ್ಷಕರು ಮಕ್ಕಳನ್ನು ಉದ್ದೇಶಿಸಿ ಪ್ರಶ್ನೆಯೊಂದನ್ನು ಕೇಳಿದರು: " ನೀವೆಲ್ಲ ಮುಂದೆ ಏನಾಗಬಯಸುತ್ತೀರಿ?" ಮಕ್ಕಳಲ್ಲಿ ಕೆಲವರು ಇಂಜಿನಿಯರ್ ಆಗುವುದಾಗಿ ಹೇಳಿಕೊಂಡರೆ ಇನ್ನು ಕೆಲವರು ಡಾಕ್ಟರ್ ಆಗುವುದಾಗಿ ಪ್ರಕಟಿಸಿದರು. ಹೀಗೆಯೇ ಒಬ್ಬೊಬ್ಬರೂ ಉತ್ತರಿಸುವಾಗ ಅನಂತಕುಮಾರನ ಸರದಿ ಬಂದಿತು. ಕುಮಾರ ಎದ್ದವನೇ " **I shall rule over the territories** ನಾನು ಪ್ರಾಂತ್ಯಗಳನ್ನೇ ಆಳುತ್ತೇನೆ!" ಎಂದು ಘೋಷಿಸಿದ! ಶಿಕ್ಷಕರೂ ಸೇರಿದಂತೆ ಎಲ್ಲರೂ ಬೆರಗಾಗಿಬಿಟ್ಟರು.

ಇದು ಕೇವಲ ಒಬ್ಬ ಶಾಲಾ ಬಾಲಕನ ಹುಡುಗಾಟಿಕೆಯ ಮಾತಾಗಿರಲಿಲ್ಲ. ಎಲ್ಲೋ ಕೇಳಿದ ಮಾತಿನ ಬಾಯಿಪಾಠದ ಒಕ್ಕಣೆಯಾಗಿರಲಿಲ್ಲ. ಆತ್ಮವಿಶ್ವಾಸ ತುಂಬಿದ್ದ ಅನಂತಕುಮಾರನ ಗಂಭೀರವಾಣಿ ಅವನ ಶಿಕ್ಷಕರ ಹಾಗೂ ಸಹಪಾಠಿಗಳ ಮನದಲ್ಲಿ ನೆನಪಾಗಿ ಉಳಿಯಿತು. ಅನಂತಕುಮಾರನ ಜಾತಕದಲ್ಲಿ ಚಕ್ರವರ್ತಿಯೋಗವಿದೆ ಎಂದು ಅವನ ತಾತ ನರಹರಿಶಾಸ್ತ್ರಿಗಳು ಹೇಳುತ್ತಿದ್ದರಂತೆ. ಅಂಥ ಮಾತೇನಾದರೂ ಹುಡುಗನ ಮನದಲ್ಲಿ ಛಲ ತುಂಬಿ ಅಚ್ಚಳಿಯದ ಪ್ರಭಾವವುಂಟುಮಾಡಿತ್ತೋ ತಿಳಿಯದು. ಅಂತೆಯೇ ಅನಂತಕುಮಾರ ನಾಯಕತ್ವದ ಜಾಡು ಹಿಡಿದು ಯಶಸ್ಸಿನ ಸೋಪಾನಗಳನ್ನು ಏರತೊಡಗಿದಾಗ ಅವನ ಸಹಪಾಠಿಗಳಿಗೆಲ್ಲ ಪದೇ ಪದೇ ತಮ್ಮ ಗೆಳೆಯನ "ಭವಿಷ್ಯವಾಣಿ" ಯ ನೆನಪಾಗುತ್ತಿದ್ದುದು ಸಹಜವೇ.

## ಕೋವಿಡ್ ವಿರುದ್ಧದ ಸಮರದಲ್ಲಿ ಸ್ವಾವಲಂಬಿ ಭಾರತ

ಪುಟ 1 ರಿಂದ

ದೇಶದಲ್ಲಿ ದಿನಕ್ಕೆ ಐದು ಲಕ್ಷಕ್ಕಿಂತ ಹೆಚ್ಚಿನ ಕಿಟ್‌ಗಳನ್ನು ಸಿದ್ಧಪಡಿಸಬಲ್ಲ ತಯಾರಕರು ಇದ್ದಾರೆ. ಅದೇ ರೀತಿ ಎನ್‌೯೫ ಮಾಸ್ಕ್‌ಗಳನ್ನೂ ವೆಂಟಿಲೇಟರ್‌ಗಳನ್ನೂ ದೇಶದಲ್ಲಿ ತಯಾರಿಸಲಾಗುತ್ತಿದ್ದು ನಾವು ಈಗಾಗಲೇ ದೇಶಾದ್ಯಂತ ೨೫ ಸಾವಿರದಷ್ಟು ಸಾಧನಗಳನ್ನು ಆಸ್ಪತ್ರೆಗಳಿಗೆ ಸರಬರಾಜು ಮಾಡಿದ್ದೇವೆ. ಈ ಸಾಧನಗಳು ಅನನ್ಯವಾಗಿವೆ. ಈ ಎಲ್ಲ ಕಿಟ್‌ಗಳನ್ನು ಆರಂಭಿಕ ಹಂತದಲ್ಲಿ ಆಮದು ಮಾಡಿಕೊಳ್ಳುತ್ತಿದೆವು ಎಂಬುದನ್ನು ನೆನಪಿಸಿಕೊಂಡರೆ ಈ ಬೆಳೆವಣಿಗೆ ಪ್ರಶಂಸಾರ್ಹವೇ ನಿಜ. ಮೊದಲಿಗೆ ೨೦೦೦ ರೂಪಾಯಿ ವೆಚ್ಚವನ್ನು ಮಾಡಬೇಕಾಗಿದ್ದ ಒಂದು ಪರೀಕ್ಷೆಯ ಕಿಟ್ ಈಗ ೨೦೦-೩೦೦ ರೂಪಾಯಿಗಳಿಗೆ ಲಭ್ಯವಿದೆ.

ಈ ಸನ್ನಿವೇಶದಲ್ಲಿ ಹೈಡ್ರಾಕ್ಸಿಕ್ಲೋರೋಕ್ವಿನ್ ಎಂಬ ಔಷಧ ಬಹಳ ಮಹತ್ವದ್ದಾಗಿದೆ, ಇದನ್ನು ಇಡೀ ಪ್ರಪಂಚದ ೧೫೦ ಕ್ಕೂ ಹೆಚ್ಚು ದೇಶಗಳಿಗೆ ಹೆಚ್ಚು ರಫ್ತು ಮಾಡುತ್ತಿದ್ದೇವೆ. ಇಡೀ ವಿಶ್ವದಲ್ಲಿ ವೈರಸ್ ಅನ್ನು ಪ್ರತ್ಯೇಕಿಸಲು ಸಮರ್ಥವಾಗಿರುವ ಕೇವಲ ೫- ೬ ದೇಶಗಳಲ್ಲಿ ಭಾರತವೂ ಒಂದಾಗಿದೆ.

ಪ್ರಧಾನ ಮಂತ್ರಿಯವರು ಆರಂಭಿಕ ದಿನಗಳಲ್ಲಿಯೇ ನಮ್ಮ ಆರೋಗ್ಯ ಸಚಿವಾಲಯಕ್ಕೆ ೧೫,೦೦೦ ಕೋಟಿ ರೂ.ಗಳ ಬೆಂಬಲವನ್ನು ಘೋಷಿಸಿದ್ದು, ಆ ಹಣವನ್ನು ನಾವು ಎಲ್ಲಾ ರಾಜ್ಯಗಳಿಗೆ ವಿತರಿಸಿದ್ದೇವೆ. ಇಂದು ಇಡೀ ದೇಶದಲ್ಲಿ ನಾವು ೧೭,೦೦೦ ಕ್ಕೂ ಹೆಚ್ಚು ಮೀಸಲಾದ ಕೋವಿಡ್ ಆಸ್ಪತ್ರೆಗಳು, ಕೋವಿಡ್ ಆರೋಗ್ಯ ಕೇಂದ್ರಗಳು ಮತ್ತು ೧೭ ಲಕ್ಷಕ್ಕೂ ಹೆಚ್ಚು ಹಾಸಿಗೆಗಳಿರುವ ಕೋವಿಡ್ ಕೇರ್ ಕೇಂದ್ರಗಳನ್ನು ಅಭಿವೃದ್ಧಿಪಡಿಸಿದ್ದೇವೆ ಎಂದು ಹೇಳಲು ನನಗೆ ತುಂಬಾ ಸಂತೋಷವೆನಿಸಿದೆ.

ಅನಂತಕುಮಾರ್ ಅವರಂತಹ ಮಹಾನ್ ರಾಷ್ಟ್ರೀಯವಾದಿ ನಾಯಕನನ್ನು ನಾವು ಇಂದು ನೆನಪಿಸಿಕೊಳ್ಳುತ್ತಿದ್ದೇವೆ. ಅವರಂತೆಯೇ ದೇಶದ ಸೇವೆಗೆ ನಮ್ಮನ್ನು ಸಮರ್ಪಿಸಿಕೊಳ್ಳಲು ಇದೊಂದು ಸದವಕಾಶವಾಗಿದೆ. ಗೌರವಾನ್ವಿತ ಪ್ರಧಾನ ಮಂತ್ರಿಯ ಕನಸುಗಳನ್ನು ಸಾಕಾರಗೊಳಿಸಲು ನಾವು ಕಾರ್ಯತತ್ಪರರಾಗಿರುತ್ತೇವೆ. ಬದ್ಧತೆ ಮತ್ತು ಪ್ರಾಮಾಣಿಕತೆ ಮತ್ತು ಸಮರ್ಪಣೆಯೊಂದಿಗೆ ಅನಂತಕುಮಾರಜೀಯವರಂತಹ ನಮ್ಮ ಮಹಾನ್ ನಾಯಕರ ಆದರ್ಶಗಳನ್ನು ಅನುಸರಿಸಲು ನಮ್ಮನ್ನು ಆಶೀರ್ವದಿಸಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ . ಜೈ ಹಿಂದ್.

**ಡಾ. ಹರ್ಷವರ್ಧನ್**

## ಪುನಶ್ಚೇತನಕ್ಕೆ ಕರ್ನಾಟಕದ ಸುಧಾರಣಾಕ್ರಮಗಳು ದೇಶಕ್ಕೇ ಮಾದರಿ

ಪುಟ 1 ರಿಂದ

ಇಂದು ತಂತ್ರಜ್ಞಾನ ಸಾಕಷ್ಟು ಮುಂದುವರಿದಿದೆ ಎನ್ನುವುದಕ್ಕೆ ಇಂದು ಅನಂತಕುಮಾರ್ ಪ್ರತಿಷ್ಠಾನದ ಆಶ್ರಯದಲ್ಲಿ ನಡೆಯುತ್ತಿರುವ ವೆಬಿನಾರ್ ಸ್ವತಃ ಒಂದು ಉದಾಹರಣೆಯಾಗಿದೆ. ಇಲ್ಲಿ ಭಾಗವಹಿಸುತ್ತಿರುವವರು ದೇಶಾದ್ಯಂತ ಮೂಲೆಮೂಲೆಯಲ್ಲಿ ಹರಡಿಕೊಂಡಿದ್ದೇವೆ, ಆದರೂ ನಾವು ಪರಸ್ಪರ ಸಂಪರ್ಕ ಸಾಧಿಸಲು ಸಮರ್ಥರಾಗಿದ್ದೇವೆ. ಹೀಗೆಯೇ ಶಿಕ್ಷಣ ಕ್ಷೇತ್ರದಲ್ಲಿ, ಆರೋಗ್ಯ ಕ್ಷೇತ್ರದಲ್ಲಿ ಮತ್ತು ಇತರ ಅನೇಕ ಸೇವೆಗಳಲ್ಲಿ ನಾವು ತಂತ್ರಜ್ಞಾನದ ಬಳಕೆಯನ್ನು ಮುಂದುವರಿಸಬೇಕು.

ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿರುವ ಗೌರವಾನ್ವಿತ ಮುಖ್ಯಮಂತ್ರಿಯವರ ನಾಯಕತ್ವದಲ್ಲಿ ನಾವು ಶಾಸಕಾಂಗ ಮತ್ತು ಆಡಳಿತಾತ್ಮಕ ಸುಧಾರಣೆಗಳನ್ನು ಶಕ್ತಗೊಳಿಸಲು ಸಾಕಷ್ಟು ಬದಲಾವಣೆಗಳನ್ನು ತರಲು ಮುಂದುವರಿಯಬೇಕಾಗಿದೆ. ಈ ಸಂಕಷ್ಟ ಸ್ಥಿತಿಯಲ್ಲಿ ಜೀವನೋಪಾಯಕ್ಕೆ ಧಕ್ಕೆಯಾಗದಂತೆ ನಾವು ಸಾಕಷ್ಟು ಪ್ರೋತ್ಸಾಹಗಳನ್ನು ಒದಗಿಸಿದ್ದೇವೆ ಮತ್ತು ಅದೇ ಸಮಯದಲ್ಲಿ ಅನ್‌ಲಾಕ್ ಪ್ರಕ್ರಿಯೆಯನ್ನು ಜಾರಿಗೆ ತರುವಲ್ಲಿಯೂ ನಾವು ಕೆಲಸವನ್ನು ಪರಿಣಾಮಕಾರಿಯಾಗಿ ಜಾರಿಯಾಗುವುದನ್ನು ಖಚಿತಪಡಿಸಿಕೊಂಡಿದ್ದೇವೆ. ಎಲ್ಲಾ ಕ್ಷೇತ್ರಗಳಲ್ಲಿ ಇಡೀ ಆರ್ಥಿಕತೆಯ ಪುನಶ್ಚೇತನಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ದೀನ ಪರಿಸ್ಥಿತಿಯಲ್ಲಿರುವ ಕೆಲವು ವಲಯಗಳನ್ನು ಸಹಜ ಸ್ಥಿತಿಗೆ ತರುವುದು ನಿಜವಾಗಿಯೂ ಸವಾಲಿನ ಸಂಗತಿಯಾಗಿದೆ. ಆದರೆ ಈ ದಿಕ್ಕಿನಲ್ಲಿ, ಆರ್ಥಿಕತೆಯ ಪುನರುಜ್ಜೀವನದಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿ ಹೊರಹೊಮ್ಮಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ನಮ್ಮ ಆದಾಯಕ್ಕೆ ಹೋಲಿಸಿದರೆ ತೆರಿಗೆಗಳ ಸಂಗ್ರಹಕ್ಕೆ ಸಂಬಂಧಿಸಿದಂತೆ.

ನಾವು ಎಲ್ಲ ರಾಜ್ಯಗಳಿಗಿಂತ ಉನ್ನತ ಸ್ಥಾನದಲ್ಲಿದ್ದೇವೆ. ಆದ್ದರಿಂದ ಕರ್ನಾಟಕ ರಾಜ್ಯವು ಅಲ್ಪಾವಧಿಯಲ್ಲಿಯೇ ಅತ್ಯಂತ ಪರಿಣಾಮಕಾರಿ ರೀತಿಯಲ್ಲಿ ಸಹಜ ಸ್ಥಿತಿಗೆ ಬರಲು ಸಾಧ್ಯವಾಗುತ್ತದೆ ಎಂಬುದಕ್ಕೆ ಇದು ಉತ್ತಮ ಸೂಚಕವಾಗಿದೆ. ಕೈಗಾರಿಕಾ ಸ್ಥಾಪನೆಗೆ ಅಥವಾ ಕೃಷಿ ಉದ್ಯಮದ ಬೆಳವಣಿಗೆಗಾಗಿ ನಾವು ಸಾಕಷ್ಟು ಭೂಸುಧಾರಣೆಗಳನ್ನು ಜಾರಿಗೊಳಿಸಿದ್ದೇವೆ. ಭೂಮಿಯನ್ನು ಖರೀದಿಸಲು ಮತ್ತು ಮಾರಾಟ ಮಾಡಲು ಸುಲಭವಾಗುವಂತೆ ಮಾಡಿದ್ದೇವೆ. ಹೀಗೆಯೇ ಎ.ಪಿ.ಎಂ.ಸಿ ಕಾಯ್ದೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದೆ. ಈ ಮೊದಲು ಬೆಳೆಗಾರನು ಉತ್ಪನ್ನಗಳನ್ನು ಹೊಲದಿಂದ ಮಾರುಕಟ್ಟೆಗೆ ತೆಗೆದುಕೊಂಡು ಹೋಗಬೇಕಾಗಿತ್ತು. ಈಗ ಅದು ಹೊಲದಿಂದ ನೇರವಾಗಿ ಗ್ರಾಹಕರಿಗೆ ತಲುಪಬಹುದಾಗಿದೆ. ಸಾಕಷ್ಟು ಸುಧಾರಣೆಗಳ ಮೂಲಕ ರೈತರ ಆದಾಯವನ್ನು ದ್ವಿಗುಣಗೊಳಿಸಲು ಅನುಕೂಲವಾಗುವಂತೆ ತಂತ್ರಜ್ಞಾನ ಸಾಕಷ್ಟು ಪರಿಣಾಮಕಾರಿಯಾಗಿ ಬಳಕೆಯಾಗುತ್ತಿದೆ. ಕರ್ನಾಟಕ ರಾಜ್ಯವು ಜಾರಿಗೆ ತಂದ ಈ ಸುಧಾರಣೆಗಳು ಇಡೀ ದೇಶಕ್ಕೇ ಮಾದರಿಯಾಗಿವೆ ಎಂದರೆ ಅತಿಶಯೋಕ್ತಿಯಲ್ಲ.

ಇದರೊಂದಿಗೆ ನಾವು ಸಾಕಷ್ಟು ಕಾರ್ಮಿಕ ಸುಧಾರಣೆಗಳನ್ನೂ ಹೊಸ ಉದ್ಯಮ ನೀತಿಯನ್ನೂ ಜಾರಿಗೆ ತಂದಿದ್ದೇವೆ. ಕೈಗಾರಿಕೆಯನ್ನು ಸ್ಥಾಪಿಸಲು ಯಾವುದೇ ಹೂಡಿಕೆದಾರರು ಅನುಮತಿಗಳಿಗಾಗಿ ಕಾಯಬೇಕಾಗಿಲ್ಲ. ಆದರೆ ಕಾರ್ಯಾಚರಣೆಯನ್ನು ಪ್ರಾರಂಭಿಸುವ ಮೊದಲು ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿಶೇಷವಾಗಿ ನಾವು ಜಗತ್ತಿನ ಬೇರೆಲ್ಲೂ ಜಾರಿಗೆ ತಂದಿರದ ಕರ್ನಾಟಕ ಇನ್ನೋವೇಶನ್ ಅಥಾರಿಟಿಯನ್ನು ಜಾರಿಗೆ ತಂದಿದ್ದೇವೆ.

ವಿದ್ಯಾರ್ಥಿಗಳ ಎಲ್ಲಾ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ಪ್ರಸಕ್ತ ಶೈಕ್ಷಣಿಕ ವರ್ಷವನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಲು ಸಮರ್ಥರಾಗಿದ್ದೇವೆ. ಈ ವರ್ಷವನ್ನು ಪೂರ್ಣಗೊಳಿಸುವುದಲ್ಲದೆ, ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭವೂ ಸಹ ಸುಸೂತ್ರವಾಗಿ ಸಾಗುವಂತೆ ಖಚಿತಪಡಿಸಿಕೊಳ್ಳಬೇಕಾಗಿದೆ. ಈ ದಿಕ್ಕಿನಲ್ಲಿ ವಿದ್ಯಾರ್ಥಿಗೆ ಯಾವುದೇ ನಷ್ಟವಾಗುವುದಿಲ್ಲ . ನಾವು ಶೈಕ್ಷಣಿಕ ಚಟುವಟಿಕೆಯನ್ನು ಮುಂದುವರಿಸುವ ಪ್ರಕ್ರಿಯೆಯಲ್ಲೂ ಸಿಇಟಿ ಪರೀಕ್ಷೆಗಳನ್ನು ನಡೆಸುವಲ್ಲಿಯೂ ಇಡೀ ದೇಶಕ್ಕೆ ಆದರ್ಶಪ್ರಾಯರಾಗಿದ್ದೇವೆ.

**ಡಾ. ಸಿ.ಎನ್. ಅಶ್ವತ್ಥನಾರಾಯಣ**

ಜನ್ಮದಿನಸ್ಮರಣೆಯ (ಸೆಪ್ಟೆಂಬರ್ ೨೫) ವಿಶೇಷ ಲೇಖನ

# ಪಂಡಿತ ದೀನದಯಾಳ ಉಪಾಧ್ಯಾಯ

**ಕೆ. ಜನಾರ್ದನ ತುಂಗ**

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾಂಗ್ರೆಸ್ ಪಕ್ಷವು ದೇಶವನ್ನಾಳುವುದು ತನ್ನ ಹಕ್ಕು ಎಂದು ಭಾವಿಸಿಕೊಂಡಿತ್ತು. ಪಕ್ಷದಲ್ಲಿಯೂ ನೆಹರೂ ಬಿಟ್ಟರೆ ಅನ್ಯ ನಾಯಕರ ಮಾತುಗಳಿಗೆ ಬೆಲೆಯೇ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಭಿನ್ನ ವಿಚಾರಧಾರೆಯ ಅನೇಕರು ಕಾಂಗ್ರೆಸ್ ಪಕ್ಷದಿಂದ ಹೊರಬಂದು ಬೇರೆ ಬೇರೆ ಪಕ್ಷಗಳನ್ನು ಕಟ್ಟಿದರು. ಇದೇ ಕಾಲದಲ್ಲಿ ಭಾರತದ ಸಂಸ್ಕೃತಿಯನ್ನು ಅಭಿವ್ಯಕ್ತಿಸುವ ಪಕ್ಷವೊಂದರ ಅಗತ್ಯವನ್ನು ಮನಗಂಡ ಶ್ಯಾಮಪ್ರಸಾದ ಮುಖರ್ಜಿಯವರು ಭಾರತೀಯ ಜನಸಂಘವನ್ನು ದಶಂಬರ ೧೯೫೧ರಲ್ಲಿ ಸ್ಥಾಪನೆ ಮಾಡಿದರು. ಆಗ ಸರಸಂಘ ಚಾಲಕ ಗುರೂಜಿ ಗೋಳ್ವಲ್ಕರರ ಸಲಹೆಯ ಮೇರೆಗೆ ದೀನದಯಾಳ ಉಪಾಧ್ಯಾಯರು ಮುಖರ್ಜಿಯವರ ಜೊತೆಗೂಡಿದರು, ಭಾರತೀಯ ಜನಸಂಘದ ಆತ್ಮವೇ ಆದರು.

### ಪರೀಕ್ಷೆಯಿಲ್ಲದೆ ಪಂಡಿತ

ಎಂಟುವರ್ಷ ವಯಸ್ಸಿಗೆ ತಂದೆ ತಾಯಿ ಇಬ್ಬರನ್ನೂ ಕಳೆದುಕೊಂಡ ದೀನದಯಾಳ ಉಪಾಧ್ಯಾಯರು ಪರಪುಟ್ಟನಾಗಿಯೇ ಲೋಕದ ತೆಕ್ಕೆಯಲ್ಲಿ ಬೆಳೆದು ಲೋಕವನ್ನೇ ತಮ್ಮ ಮನೆಯನ್ನಾಗಿಸಿಕೊಂಡರು. ೧೯೧೬ರಲ್ಲಿ ಉತ್ತರಪ್ರದೇಶದ ಮಥುರಾದಲ್ಲಿ ಜನಿಸಿದ ಉಪಾಧ್ಯಾಯರು ಯಾವುದೇ ಪರೀಕ್ಷೆಯನ್ನು ಪಾಸು ಮಾಡಿ ಪಂಡಿತರೆನ್ನಿಸಿಕೊಂಡವರಲ್ಲ. ಆಂಗ್ಲಭಾಷೆಯಲ್ಲಿ ಬಿಎ ಮಾಡಿದ ನಂತರ ಎಂಎ ಓದುತ್ತಿದ್ದಾಗ ವೈಯಕ್ತಿಕ ಕಾರಣಗಳಿಂದ ಓದು ನಿಲ್ಲಿಸಬೇಕಾಯಿತು. ಆಗ ಸರಕಾರಿ ಸೇವೆಯನ್ನು ಸೇರುವ ಉದ್ದೇಶದಿಂದ ೧೯೪೨ರಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ತೆಗೆದುಕೊಂಡರು. ಪರೀಕ್ಷೆಗೆ ಹಾಜರಾದ ಎಲ್ಲರೂ ಕೋಟು, ಪ್ಯಾಂಟು, ಟೈ, ಟೋಪಿ ಧರಿಸಿ ಹಾಜರಾಗಿದ್ದರೆ ಇವರು ಧೋತಿ, ಕುರ್ತಾ ಮತ್ತು ಟೋಪಿ ಧರಿಸಿ ಹಾಜರಾಗಿದ್ದರು. ಆಗ ಎಲ್ಲರೂ ಇವರನ್ನು ಪಂಡಿತಜೀ ಎಂದು ಹಾಸ್ಯ ಮಾಡಿದ್ದರು. ಮುಂದೆ ಇದೇ ಅವರ ಹೆಸರಿಗೂ ಅಂಟಿಕೊಂಡಿತು. ಪರೀಕ್ಷೆಯಲ್ಲಿ ಮೊದಲಿಗರಾಗಿ ಉತ್ತೀರ್ಣರಾದರೂ ಉದ್ಯೋಗಕ್ಕೆ ಸೇರದೆ ಆರೆಸ್ಸೆಸ್ ನ ಪೂರ್ಣಾವಧಿ ಆಜೀವನ ಕಾರ್ಯಕರ್ತರಾದರು.

### ದೀನದಯಾಳು

ಅವರು ಹೆಸರಿಗೆ ತಕ್ಕಂತೆ ದೀನದಯಾಳುವೇ ಆಗಿದ್ದರು. ಸಮಾಜವ್ಯವಸ್ಥೆಯ ಕೊನೆಯ ಅಂಚಿನಲ್ಲಿರುವ ವ್ಯಕ್ತಿಯ ಉದ್ಧಾರವಾಗಬೇಕಾದರೆ ಉನ್ನತ ಶ್ರೇಣಿಯಲ್ಲಿರುವ ಜನರು ಬಾಗಿ ಶೋಷಿತರಿಗೆ ಮತ್ತು ಅಲಕ್ಷಿತ ಜನರಿಗೆ ಆಧಾರವಾಗಬೇಕು ಎಂದು ಅವರು ಬಲವಾಗಿ ನಂಬಿದ್ದರು. ಈ ನಿಟ್ಟಿನಲ್ಲಿ "ರಾಷ್ಟ್ರವೂ ಮಾನವಜೀವಿಯಂತೆ ತನ್ನದೇ ಆದ ಒಂದು ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮವನ್ನು ಹೊಂದಿರುತ್ತದೆ" ಎಂಬ ಅವರ ರಾಷ್ಟ್ರಪುರುಷನ ನಿರೂಪಣೆ ಗಮನಾರ್ಹ. ಈ ಪರಿಕಲ್ಪನೆಯು ಏಕಾತ್ಮ ಮಾನವತಾವಾದ ಎಂಬ ಹೆಸರಿನಿಂದ ಪ್ರಸಿದ್ಧಿಪಡೆಯಿತು. ಹೊಸ ಪಕ್ಷವೊಂದರ ಸ್ಥಾಪನೆಗೆ ಕಾರಣವಾದ "ಸಮಗ್ರ ಮಾನವತೆ" ಎಂಬ ಬೀಜದ ಮೂಲವಿರುವುದು ಈ ರಾಷ್ಟ್ರಪುರುಷನ ಕಲ್ಪನೆಯಲ್ಲಿಯೇ. ದೇಹದ ಒಂದು ಭಾಗಕ್ಕೆ ತೊಂದರೆಯಾದರೆ ಇತರ ಭಾಗಗಳೂ ಅದರ ಪರಿಣಾಮವನ್ನು ಎದುರಿಸುತ್ತವೆ; ಅದರ ರಕ್ಷಣೆಗೆ ಧಾವಿಸುತ್ತವೆ. ಅದೇ ರೀತಿ, ರಾಷ್ಟ್ರದ ಒಂದು ಪ್ರದೇಶ ಅಥವಾ ಜನವರ್ಗ ತೊಂದರೆಗೊಳಗಾದರೆ ಇಡೀ ರಾಷ್ಟ್ರ ಒಂದಾಗಿ ಬೆಂಬಲಕ್ಕೆ ಎದ್ದು ನಿಲ್ಲಬೇಕು. ಈ ಹಿನ್ನೆಲೆಯಲ್ಲಿ ದುರ್ಬಲರಿಗೆ ಬೇಕಾಗಿರುವುದು ಕರುಣೆಯಲ್ಲ, "ಅವರಿಗೆ ಸತ್ಕಾರವೂ ಬೇಡ, ತಿರಸ್ಕಾರವೂ ಬೇಡ; ಅವರಿಗೆ ಅಧಿಕಾರವನ್ನು ನೀಡಿ" ಎಂದು ಸ್ಪಷ್ಟವಾಗಿ ಅವರು ಹೇಳಿದ್ದರು.

### ದೂರದರ್ಶಿ ಉಪಾಧ್ಯಾಯ

ಆಧುನಿಕ ಭಾರತದಲ್ಲಿ "ವರ್ಗರಹಿತ, ಜಾತಿರಹಿತ ಮತ್ತು ಸಂಘರ್ಷಮುಕ್ತ ಸಾಮಾಜಿಕ ವ್ಯವಸ್ಥೆ" ಇರಬೇಕು ಎಂಬ ಕನಸನ್ನು ಇರಿಸಿಕೊಂಡು ೧೯೫೧ರಿಂದ ೧೯೬೮ರ ವರೆಗೆ ಅಹರ್ನಿಶಿ ಪಕ್ಷಕ್ಕಾಗಿ ದೀನದಯಾಳರು ದುಡಿದರು. "ದೇಶದ ರಕ್ಷಣೆಗೆ, ಜನತೆಯಲ್ಲಿ ರಾಷ್ಟ್ರೀಯತೆಯ ಉದ್ದೀಪನಕ್ಕೆ, ಆಡಳಿತದಲ್ಲಿ ಸಾಮಾಜಿಕ ಸಮಾನತೆಗೆ ಮತ್ತು ಪ್ರಜಾಪ್ರಭುತ್ವದ ವಿಕೇಂದ್ರೀಕರಣಕ್ಕೆ ಭಾರತೀಯ ಜನಸಂಘವು ಪ್ರಯತ್ನಿಸಬೇಕು. ಎಂಬ ಆದರ್ಶಕ್ಕೆ ಅನುಗುಣವಾಗಿ ಪಕ್ಷವನ್ನು ಅವರು ಸಂಘಟಿಸಿದರು.

ನೆಹರೂ ನಿಧನರಾದ ಮೇಲೆ ಕಾಂಗ್ರೆಸ್ ವಿಘಟನೆಯ ಹಾದಿಯಲ್ಲಿತ್ತು. ಆಗ ವಿರೋಧ ಪಕ್ಷದ ಅತಿರಥ ಮಹಾರಥರೆಲ್ಲರೂ ಒಗ್ಗಟ್ಟಾಗಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದರು. ಉಪಾಧ್ಯಾಯರು ಮಾತ್ರ "ವಿಘಟಿತವಾದ ದುರ್ಬಲವಾದ ಪಕ್ಷವನ್ನು ಸೋಲಿಸುವುದು ಮಾತ್ರವೇ ನಮ್ಮ ಗುರಿಯಾಗಬಾರದು, ಕಾಂಗ್ರೆಸ್ ಪಕ್ಷದ ನೀತಿಗಳಿಗೆ ಪರ್ಯಾಯವಾದ ಕಾರ್ಯಕ್ರಮಗಳನ್ನು ನಿರೂಪಿಸಿ ಅದರ ಮೂಲಕ ಜನಬೆಂಬಲವನ್ನು ಗಳಿಸಿ ಸಕಾರಾತ್ಮಕ ರೀತಿಯಲ್ಲಿ ಅಧಿಕಾರಕ್ಕೆ ಬರಬೇಕು" ಎಂಬ ನಿಲುವನ್ನು ತಾಳಿದ್ದರು. "ನಮ್ಮ ಇತಿಹಾಸದ ಮೇಲೆ ನಮಗೆ ಹೆಮ್ಮೆಯಿದೆ. ಈ ಹೆಮ್ಮೆಯು ನಮಗೆ ಸ್ಫೂರ್ತಿ ನೀಡುತ್ತಿದೆ. ನಮಗೆ ಭವಿಷ್ಯದ ಕನಸುಗಳಿವೆ. ನಮ್ಮ ಕನಸುಗಳನ್ನು ನನಸಾಗಿಸಲು ಪ್ರಯತ್ನಿಸುವ



ಕರ್ಮಯೋಗಿಗಳು ನಾವುಅಂತಿಮ ಜಯದ ಮೇಲೆ ನಮಗೆ ವಿಶ್ವಾಸವಿದೆ. ಇದಕ್ಕಾಗಿ ಯಾವುದೇ ತ್ಯಾಗಕ್ಕೂ ನಾವು ಸಿದ್ಧ." ಎಂಬುದು ಅವರ ಧೀರವಾಣಿ.

ದೀನದಯಾಳ ಉಪಾಧ್ಯಾಯರು ನುಡಿನಡೆಗಳಲ್ಲಿ ಭೇದವಿಲ್ಲದವರು. ರಾಜಕಾರಣದಲ್ಲಿಯೂ ಶುದ್ಧಚಾರಿತ್ರ್ಯದ ಪ್ರತಿಪಾದಕರಾಗಿದ್ದ ಅವರು ರಾಷ್ಟ್ರದ ಭದ್ರತೆಯ ವಿಷಯ ಬಂದಾಗ ರಾಷ್ಟ್ರಹಿತವೇ ಸರ್ವೋಪರಿ ಎಂದು ಭಾವಿಸಿದ್ದರು. ರಾಜಕೀಯ ಲಾಭನಷ್ಟಗಳ ಲೆಕ್ಕಾಚಾರಕ್ಕಿಂತ ದೇಶದ ಸಮಗ್ರತೆ ಮತ್ತು ಭದ್ರತೆ ನಮ್ಮ ಗಮನದಲ್ಲಿರಬೇಕು, ದೇಶವನ್ನು ಕಾಡುತ್ತಿರುವ ಹಸಿವು ಮತ್ತು ಬಡತನ ನಮ್ಮ ಗಮನದ ಕೇಂದ್ರ ಬಿಂದುವಾಗಬೇಕು ಎಂದು ಬಲವಾಗಿ ವಾದಿಸುತ್ತಿದ್ದರು.


### ಪಕ್ಷವೇ ಬದುಕು

೧೯೫೧ರ ದಶಂಬರ ತಿಂಗಳಿನಲ್ಲಿ ಶ್ಯಾಮಪ್ರಸಾದ ಮುಖರ್ಜಿಯವರ ಜೊತೆಗೂಡಿ ಭಾರತೀಯ ಜನಸಂಘದ ಸ್ಥಾಪನೆಗೆ ಕಾರಣರಾದರು. ೧೯೫೩ರಲ್ಲಿ ಮುಖರ್ಜಿಯವರು ನಿಧನರಾದಾಗ ಜನಸಂಘದ ಕಥೆ ಮುಗಿಯಿತು ಎಂದು ಭಾವಿಸಿಕೊಂಡವರಿಗೆ ನಿರಾಶೆಯಾಗುವ ರೀತಿಯಲ್ಲಿ ಪಕ್ಷಕ್ಕೆ ತಾತ್ವಿಕ ನೆಲೆಗಟ್ಟು ಒದಗಿಸಿ ಬೆನ್ನೆಲುಬಾಗಿ ನಿಂತರು. ೧೯೫೧ರಿಂದ ಸತತವಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದರು. . ಮುಂದೆ, ದೇಶದ ಪ್ರಮುಖ ರಾಷ್ಟ್ರೀಯ ಪಕ್ಷವಾಗಿ ಗುರುತಿಸಿಕೊಂಡ ಭಾರತೀಯ ಜನಸಂಘವು ದೇಶದ ಎರಡನೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಸಂಸತ್ತಿನಲ್ಲಿ ಅದರ ३५ ಸದಸ್ಯರಿದ್ದುದಲ್ಲದೆ ಅನೇಕ ರಾಜ್ಯಗಳ ಸ್ಥಳೀಯ ಸಂಸ್ಥೆಗಳಲ್ಲಿ ಅದರ ಚುನಾಯಿತ ಸದಸ್ಯರಿದ್ದರು.ಮುಂದೆ ಅದೇ ಪಕ್ಷವು ಭಾರತೀಯ ಜನತಾ ಪಕ್ಷವಾಗಿ ರೂಪಾಂತರಗೊಂಡು ದೇಶದ ಆಡಳಿತ ಸೂತ್ರವನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿದೆಯೆಂದರೆ ಪಂಡಿತ ದೀನದಯಾಳ ಉಪಾಧ್ಯಾಯರ ದೂರದೃಷ್ಟಿಯನ್ನು ಮೆಚ್ಚಲೇ ಬೇಕು. ಆದರೆ, ದೀನದಯಾಳರು ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು ಕೇವಲ ೪೩ ದಿನಗಳ ತನಕ ಮಾತ್ರವೇ!.

೧೯೬೮ರ ಫೆಬ್ರವರಿ ೧೦/೧೧ ರ ರಾತ್ರಿ ಮೊಗಲ್ ಸರಾಯ್ ನಿಲ್ದಾಣದ ಬಳಿ ದೀನದಯಾಳ ಉಪಾಧ್ಯಾಯರ ಮೃತದೇಹ ಪತ್ತೆಯಾದಾಗ ಇಡೀ ದೇಶಕ್ಕೇ ಆಘಾತಕರ ಸುದ್ದಿಯೆನಿಸಿತು. ಅವರು ಪಯಣಿಸುತ್ತಿದ್ದ ರೈಲಿನಿಂದ ಅವರನ್ನು ಹೊರತಳ್ಳಿ ಸಾಯಿಸಲಾಗಿತ್ತು. ಆದರೆ, ತನಿಖೆಯ ನಂತರವೂ ಕೊಲೆಯ ಕಾರಣ, ಸಂಚುಗಳು ಬಹಿರಂಗವಾಗದೆ ದೀನದಯಾಳರ ಬದುಕಿನೊಡನೆ ಅವರ ಸಾವಿನ ರಹಸ್ಯವೂ ಕಣ್ಮರೆಯಾಗಿಹೋಯಿತು. ಎಂದು ಸಾರಿದ ಧೀಮಂತ ದೀನದಯಾಳ ಉಪಾಧ್ಯಾಯರ ಬದುಕು ದುರಂತದಲ್ಲಿ ಕೊನೆಗೊಳ್ಳುವಂತಾಯಿತು.

“ಧರ್ಮವು ಶಾಂತಿ ಮತ್ತು ಸಮೃದ್ಧಿಯನ್ನು ತರುತ್ತದೆ" ಎಂಬುದು ದೀನದಯಾಳರ ಸಂದೇಶ. ಅವರು ಕಂಡ ಅಖಂಡ ಭವಿಷ್ಯದ ಕನಸನ್ನು ಸಾಕಾರಗೊಳಿಸುವ ಹೊಣೆ ನಮ್ಮ ಮೇಲಿದೆ.

## ನಾರಾಯಣ ಶಾಸ್ತ್ರಿಯವರ ಜ್ಯೋತಿಷ ಜ್ಞಾನ




ತಮ್ಮ ಪೂರ್ವಿಕರಿಂದ ಬಳುವಳಿಯಾಗಿ ಬಂದ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದ ತಮ್ಮ ಪರಿಜ್ಞಾನದ ಬಗೆಗೂ ಶಾಸ್ತ್ರಿಗಳಿಗೆ ಅದೇ ಪರಿಯ ಆತ್ಮವಿಶ್ವಾಸವಿದ್ದಿತು. ಅವರ ಮಾತಿನಲ್ಲಿರುತ್ತಿದ್ದ ನಿರ್ದುಷ್ಟತೆ, ಖಚಿತತೆಗಳಿಂದ ಕೇಳುವವರಿಗೂ ಸಂಶಯವಿಲ್ಲದಂತಾಗಿ ನೆಮ್ಮದಿ, ಸಮಾಧಾನ ಮೂಡುತ್ತಿತ್ತು. ಒಮ್ಮೆ ರಂಗರಾಜನ್‌ರವರನ್ನು ಕಾಣಲು ಬಂದ ಸ್ನೇಹಿತರೊಬ್ಬರು ಅವರೊಡನೆ ತಮ್ಮ ಚಿಂತೆಯನ್ನು ಹೇಳಿಕೊಂಡರು. ಆತ ತನ್ನ ಮಗಳಿಗೆ ಗಂಡು ಹುಡುಕುತ್ತಿದ್ದರು. ಒಳ್ಳೆಯ ಸಂಬಂಧವೆಂದು ಹೇಳಿ ಅವರಿಗೆ ಯಾರೋ ವರನ ಜಾತಕವೊಂದನ್ನು ಕಳುಹಿಸಿಕೊಟ್ಟಿದ್ದರು. ಜ್ಯೋತಿಷಿಯೊಬ್ಬರಿಗೆ ಆ ಜಾತಕವನ್ನು ತೋರಿಸಿದಾಗ, ಆ ಜಾತಕದಲ್ಲಿ ಗುಣವಿಲ್ಲವೆಂದೂ ಸಂಬಂಧ ಕೂಡಿ ಬರುವುದಿಲ್ಲವೆಂದೂ ಹೇಳಿದ್ದರಂತೆ.

ಆಗ ರಂಗರಾಜನ್ ಅಲ್ಲಯ್ಯ, ನಮ್ಮ ಶಾಸ್ತ್ರಿಗಳೇ ಇರುವಾಗ ನೀನು ಬೇರೆ ಯಾರಿಗೋ ಜಾತಕ ತೋರಿಸುವುದಕ್ಕೆ ಯಾಕೆ ಹೋದೆ? ಇರಲಿ, ಅವರನ್ನೂ ಒಂದು ಮಾತು ಕೇಳೋಣ ನಡಿ ಎಂದು ಗೆಳೆಯನನ್ನು ಶಾಸ್ತ್ರಿಯವರಲ್ಲಿಗೆ ಕರೆದುಕೊಂಡು ಹೋದರು. ಜಾತಕವನ್ನು ಕೈಯಲ್ಲಿ ಹಿಡಿದ ಶಾಸ್ತ್ರಿಗಳು ಕ್ಷಣಕಾಲ ಅದನ್ನೇ ದಿಟ್ಟಿಸಿದರು. ಗೆಳೆಯರು ನೋಡುತ್ತಿದ್ದಂತೆಯೇ ಶಾಸ್ತ್ರಿಯವರ ಕಣ್ಣಲ್ಲಿ ಮಿಂಚು ಮೂಡಿತು.

ಓ ಎಂಥಾ ಜಾತಕ ತಂದಿದ್ದೀಯಾ ! ಇದು ಬಿ.ವಿ.ಪಂಡಿತರ ಜಾತಕ ಕಣಯ್ಯಾ.. ಎಂದು ಉದ್ಗರಿಸಿದರು. ಬಂದವರಿಗೆ ಏನೂ ಅರ್ಥವಾಗದೆ ಶಾಸ್ತ್ರಿಗಳನ್ನೇ ದಿಟ್ಟಿಸಿ ಬೆರಗಾಗಿ ನೋಡುತ್ತಿದ್ದರು. ಗೆಳೆಯರತ್ತ ದೃಷ್ಟಿ ಹೊರಳಿಸಿದ ಶಾಸ್ತ್ರಿಗಳು ಅವರ ಮುಖಗಳಲ್ಲಿ ಅರ್ಥವಾಗದ ಗೊಂದಲವನ್ನು ಕಂಡು ಮುಗುಳ್ನಕ್ಕರು. ಬಿ.ವಿ.ಪಂಡಿತರು ಯಾರೆಂದು ಗೊತ್ತಿಲ್ಲವೇನ್ರಯ್ಯ? ಆತ ನಂಜನಗೂಡಿನಲ್ಲಿ ಕಪಿಲಾ ನದಿಯ ಮರಳು ಪುಡಿ ಮಾಡಿ, ಹಲ್ಲುಪುಡಿ ತಯಾರಿಸಿ ಲೋಕಪ್ರಸಿದ್ಧಿ ಗಳಿಸಲಿಲ್ಲವೇ? ಅವರ ಆಯುರ್ವೇದ ಔಷಧಿಗಳು ಪ್ರಪಂಚದಲ್ಲೆಲ್ಲ ಹೆಸರು ಮಾಡಿಲ್ಲವೇ? ಹಾಗೆಯೇ ಈ ಜಾತಕಕ್ಕೂ ಉನ್ನತಿಗೇರುವ ಯೋಗ ಇದೆ. ಜಾತಕದಲ್ಲಿ ಗ್ರಹಗತಿಗಳನ್ನು ತಾತ್ಕಾಲಿಕ ಲಕ್ಷಣದ ಆಧಾರದಲ್ಲಿ ಪರಿಗಣಿಸಬಾರದು, ದೀರ್ಘಕಾಲೀನ ಪರಿಣಾಮಗಳನ್ನು ಗಮನಿಸಿದರೇನೆ ಯೋಗ ಎಂಥದು ಅನ್ನೋದು ಗೊತ್ತಾಗೋದು. ಈ ವರನಿಗೆ ನಿಮ್ಮ ಮಗಳನ್ನು ಕೊಟ್ಟು ಮದುವೆ ಮಾಡು. ಚಿಂತಿಸಬೇಕಾದ್ದೇ ಇಲ್ಲ ಎಂದರು. ಶಾಸ್ತ್ರಿಗಳ ಮಾತಿನಲ್ಲಿದ್ದ ವಿಶ್ವಾಸ, ಖಚಿತತೆ ಕಂಡು ಬಂದ ಮಿತ್ರನಿಗೆ ತುಂಬ ಸಂತೋಷವಾಯಿತು. ಆತ ಮಗಳ ಮದುವೆ ನೆರವೇರಿದಷ್ಟೇ ಸಂತೋಷ ಪಟ್ಟುಕೊಂಡು ಹೊರಟರು.

## ನಿಮ್ಮ ಪತ್ರಗಳು

ಅನಂತಪಥದ ಈ ಸಂಚಿಕೆ ಸಮೃದ್ಧವಾಗಿ ಮೂಡಿಬಂದಿದೆ. ಹಿರಿಯರನ್ನು ಕುರಿತ ಲೇಖನ, ನೆನಪುಗಳು ಸಮಯೋಚಿತವಾಗಿವೆ. ರಥಯಾತ್ರೆಯ ನೆನಪುಗಳು ಚೈತನ್ಯದಾಯಕ. ಅನಂತ ಕುಮಾರರನ್ನು ಕುರಿತಾದ ನೆನಪುಗಳು ಆರ್ದ್ರತೆಯನ್ನು ಮೂಡಿಸುತ್ತವೆ. ಒಟ್ಟಾರೆ ಇಂತಹ ಒಂದು ಕೊಂಡಿ ಬೇಕಿತ್ತು. ಅದನ್ನು ಪತ್ರಿಕೆ ಪೂರೈಸಿದೆ. ಧನ್ಯವಾದಗಳು!
ಇದೊಂದು ಸಂವಹನ ಹಾಗೂ ಮಾರ್ಗದರ್ಶಕ ಸಂಚಿಕೆಯಾಗಲಿ, ಅನಂತಕುಮಾರ್ ಬಳಗ ಮಾಡಿದ ಪರಿಸರಪರ ಕಾರ್ಯಗಳನ್ನು ಪರಿಚಯಿಸಿ ಸ್ಫೂರ್ತಿ ತುಂಬಲಿ ಎಂದು ಹಾರೈಸುತ್ತೇನೆ. ಮಕ್ಕಳಿಗಾಗಿ ಒಂದು ಅಂಕಣ/ವಿಭಾಗ ಬರಲಿ.
ಈ ಸಮೃದ್ಧ ಸಂಚಿಕೆಯ ಹಿಂದೆ ದುಡಿದ ಎಲ್ಲರಿಗೂ, ಗುರುಸಮಾನರಾದ ಶ್ರೀ ಟಿ ಎಸ್ ಗೋಪಾಲ್ ಅವರಿಗೂ ನಮನಗಳು!

**ಕಲ್ಗುಂಡಿ ನವೀನ್**
ಲೇಖಕರು, ಬೆಂಗಳೂರು

ಅನಂತಪಥದ ಎರಡೂ ಸಂಚಿಕೆಗಳನ್ನು ಓದಿದೆ. ಒಟ್ಟಾರೆ ವಿನ್ಯಾಸ, ಬರೆವಣಿಗೆ ಎಲ್ಲವೂ ಉತ್ಕೃಷ್ಟವಾಗಿದೆ. ನಿಮಗೆ, ನಿಮ್ಮ ತಂಡದ ಎಲ್ಲ ಸದಸ್ಯರಿಗೂ ಅಭಿನಂದನೆಗಳು

**ಎಸ್. ಎಸ್ ಯದುರಾಜನ್**
ಶಿಕ್ಷಣ ತಜ್ಞರು, ಮೈಸೂರು

ಒಳ್ಳೆಯ ಅಂಕಣಗಳು, ಸೊಗಸಾದ ನಿರೂಪಣೆ, ಆಕರ್ಷಕ ವರ್ಣಮಯ ಪಾರದರ್ಶಿಕೆಗಳೊಂದಿಗೆ ಮನಮುಟ್ಟುವಂತಿದೆ. ಧನ್ಯವಾದಗಳು.

**ನೆ.ಲ. ರಾಮಮೂರ್ತಿ**
ಬೆಂಗಳೂರು

ಅನಂತ ಪಥ ಮಾಸ ಪತ್ರಿಕೆ ಬಹಳ ಚನ್ನಾಗಿ ಮೂಡಿ ಬರುತ್ತಿದೆ. ದಿ!! ಅನಂತ ಕುಮಾರ್ ರವರ ಬಗ್ಗೆ ನಮಗೆ ತಿಳಿಯದ ಎಷ್ಟೋ ಸಂಗತಿಗಳನ್ನು ತಿಳಿಯಲು ಇದು ಸಹಕಾರಿಯಾಗಿದೆ. ಲೇಖನಗಳು ಸಚಿತ್ರವಾಗಿ ಸುಂದರವಾಗಿಯೂ ಮೂಡಿಬರುತ್ತಿರುವುದು ಶ್ಲಾಘನೀಯ. ಪತ್ರಿಕೆ ಇನ್ನೂ ಹೆಚ್ಚು ಪ್ರಗತಿ ಹೊಂದಲಿ ಎಂದು ಮನಸಾರೆ ಹಾರೈಸುತ್ತೇನೆ.

**ಗಣಪತಿ ಮ.ಭಟ್.**
ಉಪಮಹಾಪ್ರಬಂಧಕರು (ನಿವೃತ್ತ) ಬಿ.ಎಸ್.ಎನ್. ಎಲ್.

ಅನಂತ ಕಥನ ಪತ್ರಿಕೆಯಲ್ಲಿ ಶ್ರೀ ಅನಂತ್ ಕುಮಾರ್ ಅವರ ತೇಜಸ್ವಿ ವ್ಯಕ್ತಿತ್ವವು ಅತಿ ಉತ್ತಮವಾಗಿ ಪ್ರತಿಬಿಂಬಿತವಾಗಿದೆ.
ಧನ್ಯವಾದಗಳು

**ಟಿ. ಆರ್. ಗೋಪಾಲ**

ಅನಂತಪಥ ಪತ್ರಿಕೆ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ತಮ್ಮ ಸಂಪಾದಕತ್ವದಲ್ಲಿ ಪತ್ರಿಕೆ ಯಶಸ್ಸು ಕಾಣಲೆಂದು ಹಾರೈಕೆ ನನ್ನದು

**ನಾಗನಾಥ್. ಜಿ.ಎಸ್**
ವ್ಯಂಗ್ಯಚಿತ್ರಕಾರರು, ಬೆಂಗಳೂರು

ಆತ್ಮೀಯರೇ,
"ಅನಂತಪಥ" ಪತ್ರಿಕೆ ತುಂಬಾ ಹದವಾಗಿ ಮೂಡಿಬಂದಿದೆ. ಸಾಕಷ್ಟು ವಿಷಯಗಳನ್ನು ಮೆಲುಕುಹಾಕಲು ಮತ್ತು ಹಲವಾರು ವಿಚಾರಗಳನ್ನು ವಿವಿಧ ಕೋನಗಳಿಂದ ತಿಳಿದುಕೊಳ್ಳಲು ಸಾಧ್ಯವಾಯಿತು. ಪುಟಗಳೆಲ್ಲವೂ ಸಹಜವಾಗಿ ಓದಿಸಿಕೊಂಡು ಹೋಗುತ್ತದೆ. ಎಲ್ಲಾ ರೀತಿಯಲ್ಲೂ ಅಚ್ಚುಕಟ್ಟಾಗಿ ಮೂಡಿಬಂದಿರುವ ಈ ವಿಶೇಷ ಪತ್ರಿಕೆಯನ್ನು ಅನಂತವಾಗಿ ಮುನ್ನಡೆಸಿಕೊಂಡು ಹೋಗುವ ಸರ್ವಾವಕಾಶಗಳನ್ನು ಭಗವಂತನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ತಂಡದ ಎಲ್ಲಾ ಸದಸ್ಯರಿಗೂ ಅಭಿನಂದನೆಗಳು.

**ಡಾ. ಸಿ. ಎನ್ . ಕೃಷ್ಣ**
ಸಂಸ್ಥಾಪಕ ಅಧ್ಯಕ್ಷರು - ಓಂ ಸೇವಾ ಕೇಂದ್ರ , ಬೆಂಗಳೂರು.
www.omsevakendra.org

ನಮಸ್ತೇ,
'ಅನಂತ ಪಥ' ನೋಡಿದೆ. ತುಂಬಾ ಖುಷಿಯಾಯಿತು. ಉತ್ತಮ ವಿನ್ಯಾಸ. ಆಕರ್ಷಕ ವರ್ಣ, ಅನುಭವಿಗಳ ಮಾತು ಎಲ್ಲವೂ ಸೇರಿ ಪತ್ರಿಕೆ ಪೂರ್ಣತೆಯ ಅನುಭವ ನೀಡುತ್ತದೆ. ಪ್ರತಿ ಸಂಚಿಕೆಯೂ ಹೀಗೆಯೇ ವೈವಿಧ್ಯಮಯವಾಗಿ ಬರಲಿ ಎಂದು ಹಾರೈಸುವೆ.

**ರಂಗನಾಥ್ ಬಿ.ಕೆ. ಬೆಂಗಳೂರು**

ಕನ್ನಡ ಸಾರಸ್ವತ ಲೋಕದಲ್ಲಿ ಪತ್ರಿಕೆಗಳಿಗೆ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವಿದೆ. ದೈನಿಕ, ವಾರ, ಮಾಸಿಕ ಪತ್ರಿಕೆಗಳು ಸೇರಿದಂತೆ ವಿವಿಧ ಪತ್ರಿಕೆಗಳು ವಿಚಾರಧಾರೆಗಳಿಗೆ ಮೂರ್ತ ಸ್ವರೂಪವನ್ನು ನೀಡಿವೆ. ಇವುಗಳಲ್ಲಿ ಮೌಲ್ಯಯುತ ವಿಷಯಗಳಿಗೆ ಹಾಗು ಸಂಘಟನೆಗೆಳು ತಮ್ಮದೇ ಆದ ಪತ್ರಿಕೆಗಳನ್ನು ಹೊಂದಿವೆ. ಈ ಮಾದರಿ ಪತ್ರಿಕೆಯಾದ ಅನಂತಪಥ ತನ್ನದೇ ಆದ ವಿಭಿನ್ನತೆಯಂದ ಗಮನ ಸೆಳೆಯುತ್ತದೆ.
ವ್ಯಕ್ತಿಯ ಅರಾಧನೆಗಿಂತ ಮಿಗಿಲಾಗಿ ಅವರ ವಿವಿಧ ವ್ಯಕ್ತಿತ್ವದ ಅಯಾಮಗಳನ್ನು ಹಿಡಿದು ಅವರ ಸಾಧನೆಗಳನ್ನ ವ್ಯಕ್ತಿಯ ಪ್ರೇರಣಾತ್ಮಕ ರೂಪಕವನ್ನು ಮಾಡುವಲ್ಲಿ ಪತ್ರಿಕೆ ಧನಾತ್ಮಕ ಕೆಲಸ ಮಾಡುತ್ತಿದೆ. ಸಮಾಜಮುಖಿಯಾಗಿ ಅವರ ವ್ಯಕ್ತಿತ್ವ ಹಾಗು ಸಂಘಟನೆಶಿಲತೆ ಅವರ ಕನಸಿನ ರೂಪದ ಹರಿಕಾರನಂತೆ ಸಾಗಿದಲ್ಲಿ ನಿಜಕ್ಕೂ ಅವರ ಬದುಕಿನ ದಾರಿಗೆ ಅರ್ಥಪೂರ್ಣ ನಮನ ಸಲ್ಲಿಸದಂತೆ
ಈ ಹಿನ್ನೆಲೆಯಲ್ಲಿ ಅನಂತಕುಮಾರರು ಸಾಗಿದ ಪಯಣದ ಕ್ಷಣಗಳಿಗೆ ಹೊಳಪು ನೀಡುವ ಪತ್ರಿಕೆ ಸಾಗಲಿ ಹಾಗು ನಿಮ್ಮ ನೇತೃತ್ವಕ್ಕೆ ಅಂತಹ ಸಾಧ್ಯತೆಯ ಇದ್ದು, ಈ ಪತ್ರಿಕೆ ಈ ಹಾದಿಯಲ್ಲಿ ತನ್ನದೇ ಅದ ಚಾಪು ಮೂಡಿಸಲಿ ಎಂದು ಆಶಿಸುತ್ತ

**ಶ್ರೀನಿವಾಸ ಮೂರ್ತಿ ಎನ್. ಎಸ್.**
ಎನ್ ಆರ್ ಕಾಲೋನಿ, ಬೆಂಗಳೂರು ೫೬೦ ೦೧೯

2nd "Ananthpatha" sanchike has come out very well Kudos to all those who have worked towards this

**Seema Killedar**, Bengaluru

The magazine has come out very well. The articles on current issues and festivals are very relevant. Sketches are very good. Hats off to the Editorial team for all the interesting articles.

**Jayashree Prasad**, Malleshwaram, Bengaluru

ಅನಂತಪಥ

Editor: **Gopal T.S** | Layout: **Abhishek Gubbi Creatives**
Sketches: **Raghupathi Sringeri** | Inputs: **Poornaprajna / Madhushree B A / T Rangarajan**
Photographs: **©Ananthkumar Prathishtana/ Ullas Karanth / G. ShanthaKumar & other sources**
Published by: **Dr. Tejaswini AnanthKumar**
For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04
Ph: 080 26568484 | Email: ananth.path@akp.org.in
**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.
To get a e-version of this periodical SMS your name and place to 8884182415

ಸಾಧಕರೊಡನೆ ಸಂದರ್ಶನ ಮಾಲಿಕೆ

# “ಸಾಧ್ಯತೆಗೆ ತಕ್ಕಷ್ಟು ವನ್ಯಜೀವನ ಸುಧಾರಿಸಿಲ್ಲ”

## ಡಾ. ಕೆ. ಉಲ್ಲಾಸ ಕಾರಂತ

**ತಮ್ಮ ತಾರುಣ್ಯದ ದಶಕಗಳಲ್ಲಿ ಸಂಶೋಧಕ ವಿಜ್ಞಾನಿಯಾಗಿ ತಾವು ನೋಡುತ್ತಿದ್ದ ವನ್ಯಜೀವನ, ಜೀವಿಪರಿಸ್ಥಿತಿಗೂ ಇಂದಿನ ಸ್ಥಿತಿಗತಿಗಳಿಗೂ ಏನಾದರೂ ವ್ಯತ್ಯಾಸವಿದೆಯೇ? ವನ್ಯಜೀವಿಗಳ ಸ್ಥಿತಿ ಸುಧಾರಣೆಯಾಗಿದೆ ಎನ್ನಿಸುತ್ತದೆಯೇ?**

೧೯೭೦ನೇ ದಶಕದಲ್ಲಿ ವನ್ಯಜೀವಿ ಸಂರಕ್ಷಣಾ ಕಾಯಿದೆ, ಮತ್ತೆ ೧೯೮೦ರಲ್ಲಿ ವನ್ಯಜೀವಿ ಸಂರಕ್ಷಣಾ ಕಾಯಿದೆಗಳು ಜಾರಿಗೆ ಬಂದವು, ಆಗಿನ ಅಧಿಕಾರಿಗಳಲ್ಲಿ ಒಂದು ರೀತಿಯ ಉತ್ಸಾಹ ಇತ್ತು. ಉತ್ತಮ ಕೆಲಸ ಆಯಿತು. ೨೦೦೦ ಇಸವಿ ದಾಟಿದ ಮೇಲೆ ನನ್ನ ಅಭಿಪ್ರಾಯದ ಪ್ರಕಾರ ನಾವು ಖರ್ಚು ಮಾಡಿದ್ದಕ್ಕೆ ಅನುಗುಣವಾಗಿ ನಾವು ಹೇಳಿಕೊಳ್ಳುವಷ್ಟು ಸಮಾನಾಂತರವಾಗಿ ಕೆಲಸ ನಡೆದಿಲ್ಲ. ಮಾತು ಹೆಚ್ಚು ; ಕಾರ್ಯ ಕಡಿಮೆ ಆಯಿತು. ಕಳೆದ ೨೦ ವರ್ಷಗಳಲ್ಲಿ ಸಾಧನೆ ಬಹಳ ಅತೃಪ್ತಕರವಾಗಿದೆ ಅಂತ ಹೇಳಬಹುದು. ೨೦೦೦ದವರೆಗೆ ಏನನ್ನು ಕಟ್ಟಿದ್ದೇವೋ ಆ ತಳಹದಿ ಮೇಲೆ ನಾವು ಸಂರಕ್ಷಣಾಕಾರ್ಯದಲ್ಲಿ ಪ್ರಗತಿ ಸಾಧಿಸಲಿಲ್ಲ.

**೯೦ರ ದಶಕದ ನಾಗರಹೊಳೆಯ ಬೆಂಕಿ ಪ್ರಕರಣ, ರೇಡಿಯೋ ಕಾಲರ್ ಹಗರಣ ಇತ್ಯಾದಿ ಮುಗಿದ ನಂತರವೇ ಅನಂತಕುಮಾರ್ ಅವರದ್ದು ರಾಜಕೀಯಕ್ಕೆ ಪ್ರವೇಶ ಆಯಿತು. ೧೯೯೮ರ ನಂತರವೇ ಅವರು ಕೇಂದ್ರದಲ್ಲಿ ಸ್ಥಾನಮಾನಗಳನ್ನೆಲ್ಲ ಪಡೆದವರು. ಅವರ ಅಧಿಕಾರದ ಅವಧಿಯಲ್ಲಿ ತಮ್ಮ ಸಂಶೋಧನೆಗಾಗಲಿ ಅಥವಾ ತಮ್ಮ ಚಟುವಟಿಕೆಗಳಿಗಾಗಲಿ ಅವರಿಂದ ಏನಾದರೂ ಪ್ರೋತ್ಸಾಹ ಸಿಕ್ಕಿತೇ? ನಿಮಗೆ ಅವರ ಜೊತೆ ಸಂಪರ್ಕ ಹೇಗಿತ್ತು?**

ಅನಂತಕುಮಾರ್ ಅವರಿಗೆ ನಮ್ಮ ತಂದೆಯವರ ಬಗ್ಗೆ ತುಂಬಾ ಅಭಿಮಾನ ; ಸಾಹಿತ್ಯದಲ್ಲೂ ಆಸಕ್ತಿಯಿತ್ತು. ನನಗೆ ಅವರ ಪರಿಚಯವಾದದ್ದು ಹೆಚ್.ಎನ್.ಎ.ಪ್ರಸಾದ್ ಅವರ ಮೂಲಕ. ಪ್ರಸಾದ್ ಅವರು ವ್ಯವಸ್ಥೆಯಲ್ಲಿ ಅನಂತಕುಮಾರ್ ಅವರಿಗೂ ಸೀನಿಯರ್ ಆಗಿದ್ದವರು.

ಸಾಮಾನ್ಯವಾಗಿ ರಾಜಕಾರಣಿಗಳು ಎದುರಿಗೆ ಬೇಕಾದ ಹಾಗೆ ಮಾತಾಡುತ್ತಾರೆ; ಅನಂತಕುಮಾರ್ ಅಂಥವರಲ್ಲ. ಉದಾಹರಣೆಗೆ, ಕೊಡಗಿನಲ್ಲಿ ಯೂನೆಸ್ಕೋ ವರ್ಲ್ಡ್ ಹೆರಿಟೇಜ್ ಆಗಬೇಕು ಅಂತ ಪ್ರಸ್ತಾವ ಬಂದಾಗ, ಅದರಿಂದ ಕೆಲವು ಮಟ್ಟಿಗೆ ಅಭಿವೃದ್ಧಿ ಚಟುವಟಿಕೆಗಳಿಗೆ ಹಿನ್ನಡೆ ಆಗಬಹುದು ಅಂತ ಸ್ಥಳೀಯರಲ್ಲಿ ಭಯ ಇತ್ತು. ಅನಂತಕುಮಾರರ ದೂರದೃಷ್ಟಿತ್ವ ಏನೆಂದರೆ ಇವತ್ತಿನ ಅನುಕೂಲ ಮಾತ್ರ ನೋಡದೆ ಮುಂದಕ್ಕೆ ಏನು ಬೇಕು, ಅದರಲ್ಲಿ ನಿಸರ್ಗ ರಕ್ಷಣೆಯ ಪಾತ್ರ ಏನೂ ಅಂತ ನೋಡುವುದು. ಅವರು ಇತರ ಎಲ್ಲ ರಾಜಕಾರಣಿಗಳಿಗಿಂತ ಭಿನ್ನವಾಗಿ ನಿಂತು, ಇದನ್ನು ವಿರೋಧಿಸುವುದು ನೋಬೆಲ್ ಪಾರಿತೋಷಕ ಬಂದಿದ್ದನ್ನು ವಾಪಸ್ಸು ಕಳುಹಿಸಿಕೊಟ್ಟ ಹಾಗೇ ಎಂದು ಬಹಳ ಧೈರ್ಯವಾಗಿ ಹೇಳಿದ್ದರು. ನನಗೆ ಬಹಳ ಖುಷಿಯಾಯಿತು.

ಇಂಥ ವಿಚಾರಗಳಲ್ಲಿ ಅವರು ಬಹಳ ನೇರವಾಗಿ ಮಾತಾಡುತ್ತ ಇದ್ದರು. ರಾಜಕಾರಣಿಗಳ ಸುತ್ತ ಎಷ್ಟು ಜನ ಇದ್ದರೂ ಆಯ್ಕೆ ಮಾಡಿ ಯಾರಿಗೆ ಫೋಕಸ್ ಮಾಡಬೇಕು ಯಾರ ಹತ್ತಿರ ಯಾವುದು ಮಾತಾಡಬೇಕು ಯಾರಿಗೆ ಕಾಲಾವಕಾಶ ಕೊಡಬೇಕು ಎನ್ನುವ ಫಿಲ್ಟರ್ ಬಹಳ ಮುಖ್ಯ. ಅಂಥ ಚಾಣಾಕ್ಷ ರಾಜಕಾರಣಿಯ ಒಂದು ಗುಣ ಅನಂತಕುಮಾರರಿಗಿತ್ತು. ಯಾವತ್ತಾದರೂ ಹೋಗಿ ಯಾವುದಾದರೂ ಬೇಡಿಕೆ ಹೇಳಿದರೆ ಅದನ್ನು ಐದು ನಿಮಿಷದಲ್ಲಿ ಅರ್ಥ ಮಾಡಿಕೊಂಡು ಫಾಲೋಅಪ್ ಮಾಡುತ್ತೀನಿ. ಇಲ್ಲದೆ ಇದ್ದರೆ ಆಗೋದಿಲ್ಲ ಅಂತ ಹೇಳುತ್ತೀನಿ ಎನ್ನುತ್ತಿದ್ದರು. ಸುಮ್ಮನೆ ‘ಆಗಲಿ, ಮಾಡುತ್ತೇನೆ’ ಎಂದೋ ‘ಮಾಡುತ್ತೇನೆ ನೋಡೋಣ’, ‘ನಡೆಯುತ್ತ ಇದೆ’ ಎಂಬ ರೀತಿಯ ಮಾತು ಯಾವತ್ತೂ ಆಡಿದವರಲ್ಲ. ರಾಜಕಾರಣದಲ್ಲಿ ಇವತ್ತು ಅಂಥವರು ಸಿಕ್ಕುವುದೂ ಇಲ್ಲ.




**ಹುಲಿಯ ಆವಾಸಕ್ಕೆ ಬೇಕಾದ ವಿಸ್ತಾರ , ಅದಕ್ಕೆ ಬೇಕಾಗುವಂಥ ಬಲಿ ಪ್ರಾಣಿಗಳ ಲಭ್ಯತೆ ಇದೆಲ್ಲದರ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಇವತ್ತು ಅರಣ್ಯನಾಶ, ಮಾನವನ ಒತ್ತಡ, ಅಜ್ಞಾನಗಳ ನಡುವೆ ವನ್ಯಜೀವಿಗಳ ಭವಿಷ್ಯವೇನು?**

ಪರಿಸ್ಥಿತಿ ತೀರ ನಿಕೃಷ್ಟವಾಗಿದೆ ಅಂತ ನಾನು ಹೇಳುವುದಿಲ್ಲ. ೧೯೬೫- ೬೮ರ ಕಾಲದಲ್ಲಿ ವನ್ಯಜೀವನದ ಪರಿಸ್ಥಿತಿ ತೀರ ಹಾಳಾಗಿತ್ತು ಈಗಲೂ ದೇಶದ ಅನೇಕ ಕಡೆ ಅದೇ ಪರಿಸ್ಥಿತಿ ಇದೆ. ಆದರೆ ಎಷ್ಟು ಈಗ ನಮ್ಮ ದೇಶದಲ್ಲಿ ಇರುವ ಅರಣ್ಯ ಪ್ರದೇಶದಲ್ಲಿ ಹೆಚ್ಚು ಕಡಿಮೆ ೧೦-೧೫ ಸಾವಿರ ಹುಲಿಗಳು ಇರುವಂಥ ಸಾಧ್ಯತೆ ಉಂಟು. ಆದರೆ ಹುಲಿಗಳ ಸಂಖ್ಯೆ ೫೦ ವರ್ಷಗಳಲ್ಲಿ ೨೦೦೦ ದಿಂದ ೩೦೦೦ಕ್ಕೆ ಏರಿದೆ ಅಂತ ಅದಕ್ಕೆ ಬೆನ್ನುತಟ್ಟಿಕೊಳ್ಳುವುದು ಅರ್ಥಹೀನ. ಅಧಿಕಾರಿಗಳ ಸಂಖ್ಯೆ ಜಾಸ್ತಿ ಆಗುತ್ತ ಇದೆ ಬಜೆಟ್ ಜಾಸ್ತಿ ಆಗುತ್ತ ಇದೆ ಅಷ್ಟೇ. ಸಂಪರ್ಕ, ಸಾರಿಗೆ, ನಗರೀಕರಣ ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ನಾವು ಪ್ರಗತಿ ಸಾಧಿಸಿದ್ದೇವೆ. ವನ್ಯ ಸಂರಕ್ಷಣೆ ಮಾತ್ರ ಯಾವುದೋ ಕಾಲದ ಐಡಿಯಾಗಳಿಗೆ ಜೋತು ಬಿದ್ದುಕೊಂಡು ನರಳುತ್ತಿದೆ. ವಿಜ್ಞಾನಕ್ಕೆ, ತಂತ್ರಜ್ಞಾನಕ್ಕೆ ಬೇರೆ ಕ್ಷೇತ್ರಗಳಿಗೆ ಕೊಟ್ಟ ಹಾಗೇ ಈ ವನ್ಯಜೀವಿ ಸಂರಕ್ಷಣೆ ಅರಣ್ಯ ವಿಚಾರಗಳಲ್ಲಿ ಪ್ರೋತ್ಸಾಹ, ಹೊಸ ತಂತ್ರಜ್ಞಾನ ಅಳವಡಿಕೆಯಾಗುತ್ತಿಲ್ಲ. ಇವತ್ತು ಯಾರೇ ಒಬ್ಬ ಒಳ್ಳೆ ಪ್ರತಿಭೆ ಇರುವ ವಿಜ್ಞಾನಿ ಕಾಡಿನೊಳಗೆ ಸಂಶೋಧನೆ ಮಾಡುತ್ತೇನೆ ಅಂದರೆ ಅವನಿಗೆ ಪರ್ಮಿಷನ್ನೇ ಸಿಕ್ಕುವುದಿಲ್ಲ. ಅದರಿಂದಾಗಿ ನಮ್ಮ ತರುಣ ಪೀಳಿಗೆಯ ವನ್ಯಜೀವಿ ವಿಜ್ಞಾನಿಗಳೆಲ್ಲ ಕಾಡಿನಲ್ಲಿ ಕ್ಷೇತ್ರಕಾರ್ಯ ಮಾಡಲಾಗದೆ ನಗರದ ಪ್ರಯೋಗಾಲಯಗಳಲ್ಲಿ ಜೆನಟಿಕ್ಸ್ ಅಧ್ಯಯನದಲ್ಲಿ ಸೀಮಿತಗೊಂಡಿದ್ದಾರೆ.



**ಈಗ ಒಂದೆಡೆ ಅತಿವೇಗವಾಗಿ ಬೆಳೆಯುತ್ತಿರುವ ಬೆಂಗಳೂರು, ಇನ್ನೊಂದು ಕಡೆ ಹತ್ತಿರದಲ್ಲೇ ಬನ್ನೇರುಘಟ್ಟ ಅಭಯಾರಣ್ಯವಿದೆ. ಅದರ ಹತ್ತಿರದಲ್ಲೇ ಕೈಗಾರಿಕೆಗಳು. ಅಲ್ಲಿ ಜನವಸತಿ ಮತ್ತು ಓಡಾಟಗಳು ಅವೆಲ್ಲ ಒತ್ತಡಗಳ ವಿಶ್ಲೇಷಣೆ ಆಗುತ್ತ ಇದೆಯಾ? ಅಥವಾ ನಗರೀಕರಣದ ಸಂಭ್ರಮದಲ್ಲಿ ವನ್ಯಜೀವನದ ಅಗತ್ಯಗಳನ್ನು ಅಲಕ್ಷ್ಯ ಮಾಡಲಾಗುತ್ತಿದೆಯೇ?**

ನೀವು ಹೇಳುವುದು ಬಹಳ ದೊಡ್ಡ ಪ್ರಶ್ನೆ. ಪ್ರಾಯಶ: ಇದಕ್ಕೆ ಇಡೀ ಉತ್ತರ ಕೊಡುವುದು ಸ್ವಲ್ಪ ಕಷ್ಟ. ಕೃಷಿ ಹಾಗೂ ಗ್ರಾಮೀಣ ಬದುಕಿನ ಅವಲಂಬನೆ ಕಮ್ಮಿಯಾಗಿ ಬಹುತೇಕ ಜನ ನಗರಗಳತ್ತ ವಲಸೆ ಬರುತ್ತಿದ್ದಾರೆ. ಇನ್ನೊಂದೆಡೆ ಪಶ್ಚಿಮಘಟ್ಟಗಳ ಮೂಲೆಗಳಲ್ಲಿ ಉತ್ತರಾಖಂಡದ ಘಟ್ಟಗಳಲ್ಲಿ ಕೃಷಿ ಮಾಡಲಿಕ್ಕೆ ಜನ ಇಲ್ಲ, ಯಾರಿಗೂ ಆಸಕ್ತಿ ಇಲ್ಲ. ಮುದುಕರು ಮಾತ್ರ ಕುಳಿತುಕೊಂಡಿದ್ದಾರೆ. ಒಂದು ರೀತಿಯಲ್ಲಿ ಇದು ನಿಸರ್ಗ ಸಂರಕ್ಷಣೆ ಮೊದಲು ಇದ್ದ ಹಾಗೇ. ಕಾಡೊಳಗೆ ಎಲ್ಲ ವ್ಯವಸಾಯ ಮಾಡಿಕೊಂಡು ಇರುವದು ಕಷ್ಟ ಆಗಿದೆ. ನಗರೀಕರಣದತ್ತ ಒಲಿಯುವ ಇಂಥ ಜೀವನಪ್ರವೃತ್ತಿಗಳು ನಿಸರ್ಗವನ್ನು ಉಳಿಸುವಂಥದ್ದರಲ್ಲಿ ಸಹಕಾರಿಯಾಗುತ್ತವೆ. ಆದರೆ ಇನ್ನೊಂದು ಪರಿಣಾಮ ಈಗ ಉದ್ಯಮ ಸ್ಥಾಪನೆಯಾದಾಗ ದೊಡ್ಡದೊಂದು ಪೈಪ್‌ಲೈನ್ ಹಾಕುತ್ತಾರೆ, ರೋಡ್ ಮಾಡುತ್ತಾರೆ. ಇನ್ಯಾವುದೋ ನಿಸರ್ಗಕ್ಕೆ ನೆಗೆಟಿವ್ ಆದ ಅಂಶ ಇರುತ್ತದೆ. ನಾವು ಇವೆರಡನ್ನೂ ಒಟ್ಟಾಗಿ ನೋಡಿದರೆ ಅನೇಕ ಕಡೆ ಪರಿಹಾರ ಇದೆ ನಮಗೆ ಅನ್ನಿಸುತ್ತದೆ.

**ಈಗ ಅನಂತಕುಮಾರ್ ಪ್ರತಿಷ್ಠಾನವು ನೀತಿ ನಿರೂಪಕರಿಗೂ ನಾಯಕತ್ವ ಆಕಾಂಕ್ಷಿಗಳಿಗೂ ತರಬೇತಿ ಕಾರ್ಯಕ್ರಮ ಮಾಡಲಿಕ್ಕೆ ಹೊರಟಿದೆ. ಈ ಶಿಕ್ಷಣಾರ್ಥಿಗಳಿಗೆ ಅರಣ್ಯ ಮತ್ತು ಪರಿಸರವನ್ನು ಬೋಧಿಸಿ ಅರ್ಥಮಾಡಿಸಲು ಯಾವಯಾವ ಮುಖ್ಯವಾದ ಅಂಶಗಳನ್ನು ಪಠ್ಯರೂಪದಲ್ಲಿ ಬೋಧಿಸಬಹುದು?**

ಬೋಧನೆಯು ನಿಮ್ಮ ಶಿಕ್ಷಣಾರ್ಥಿ ಯಾರು ಅನ್ನುವುದರ ಮೇಲೆ ಅವಲಂಬಿಸುತ್ತದೆ. ಈ ಕ್ಷೇತ್ರದಲ್ಲಿ ಕಾಲು ಇಟ್ಟಿರುವ ಒಬ್ಬ ವಿಜ್ಞಾನಿಯೋ ಅಥವಾ ಒಬ್ಬರು ಮಂಡಲ್ ಪಂಚಾಯತ್ ಛೇರ್ಮನ್ನೋ ಅಥವಾ ಒಬ್ಬರು ಎಮ್.ಎಲ್.ಎ.ಯೋ ಒಬ್ಬರು ಮಂತ್ರಿಗಳೋ ಅವರಿಗೆಲ್ಲ ಒಂದೇ ಬಗೆಯ ಸಲಹೆ ಕೊಡಲಿಕ್ಕೆ ಆಗುವುದು ಇಲ್ಲ. ವನ್ಯಜೀವಿ ಸಂರಕ್ಷಣೆಯ ವಿಷಯವನ್ನು ಅವಕಾಶ ಸಿಕ್ಕಾಗ ಅವರಿಗೆ ಮನದಟ್ಟಾಗುವ ರೀತಿಯಲ್ಲಿ ಹೇಳಿದರೆ ಅವರಿಂದ ಒಂದು ಪರಿವರ್ತನೆ ಆಗುತ್ತದೆ ನಿಜ. ಅದು ತರಗತಿಯ ಕೊಠಡಿಯಲ್ಲಾಗಲಿ, ವೆಬಿನಾರ್‌ನಲ್ಲಾಗಲಿ, ಅಥವಾ ಒಬ್ಬರನ್ನೇ ಕಾಡಿಗೆ ಕರೆದುಕೊಂಡು ಹೋಗಿ ವಿವರಿಸುತ್ತೀರೋ ಅದು ಬಹಳ ಮುಖ್ಯ.

ಜನಪ್ರತಿನಿಧಿಗಳಿಗೆ ಮಾಹಿತಿ ಏನು ತಲುಪುತ್ತ ಇದೆ ಅದರಲ್ಲಿ ಸಿಗ್ನಲ್ ಕಮ್ಮಿ , ಶಬ್ದ ಜಾಸ್ತಿ. ಯಾವುದು ನಿಜವಾಗಿ ಸಂರಕ್ಷಣೆ ಯಾವುದು ಸಂರಕ್ಷಣೆಗೆ ವಿರೋಧ ಅನ್ನುವುದನ್ನೇ ನಾವು ಮರೆಯುತ್ತ ಇದ್ದೇವೆ. ಯಾರೋ ಕೋತಿಗಳಿಗೆ ಆಹಾರ ಕೊಟ್ಟರು, ಬೀದಿ ನಾಯಿಗಳಿಗೆ ಊಟ ಕೊಟ್ಟರು, ಇದು ವನ್ಯಜೀವಿ ಸಂರಕ್ಷಣೆ ಅಲ್ಲ. ಹಾಗಾಗಿ ಬಹಳ ಸ್ಪಷ್ಟವಾಗಿ ನಿಸರ್ಗ ಸಂರಕ್ಷಣೆ ಅಂದರೆ ಏನೆಂಬುದನ್ನು ತಿಳಿಸಬೇಕಾಗಿದೆ. ಎರಡನೆಯದಾಗಿ ಸಂರಕ್ಷಣೆ ಅಂದರೆ ಯಾವುದು ಅಭಿವೃದ್ಧಿ ಅಂದರೆ ಯಾವುದು ಇವೆರಡನ್ನೂ ಹೇಗೆ ಮೇಳೈಸಿಕೊಂಡು ಮುಂದೆ ಹೋಗಬೇಕು ಎಂಬುದರಲ್ಲಿ ಅನೇಕ ಪ್ರಶ್ನೆಗಳು ಇವೆ. ಇದರಲ್ಲಿ ಅನೇಕ ಮಟ್ಟಿಗೆ ರಾಜಕಾರಣಿಗಳು ಒಂದು ಮಟ್ಟಕ್ಕೆ ತಲುಪಬೇಕಾದರೆ ಸಾಕಷ್ಟು ಚಾಣಾಕ್ಷತನ, ಮೌಲ್ಯಮಾಪನ. ತೀರ್ಮಾನಿಸುವ ಪ್ರಜ್ಞೆ ಇರಬೇಕಾಗುತ್ತದೆ ಅವರಿಗೆ ನಾವು ಸರಿಯಾಗಿ ಮನವರಿಕೆ ಮಾಡಿದರೆ ಅವರಿಗೆ ಅಧಿಕಾರಿಶಾಹಿಯನ್ನು ನಿಯಂತ್ರಿಸಿ ಅವರಿಂದ ಕೆಲಸ ತೆಗೆಯುತ್ತಾರೆ. ನೀವು ಮಾಡುತ್ತಿರುವುದು ಖಂಡಿತ ಬಹಳ ಒಳ್ಳೆಯ ಕೆಲಸ. ಅಗತ್ಯವೂ ಕೂಡ. ನಿಮ್ಮ ಕೆಲಸಕ್ಕೆ ನನ್ನ ಪೂರ್ಣ ಸಹಕಾರವಿದೆ. ನಮಸ್ಕಾರ.

# ನೆನಪಿನ ಅಂಗಳದಿಂದ

ಪಠ್ಯ-ಸಂಯೋಜನೆ: ತೇಜಸ್ವಿನಿ ಅನಂತಕುಮಾರ್
ಚಿತ್ರಗಳು: ವಿವಿಧ ಮೂಲಗಳಿಂದ

## ನರೇಂದ್ರ ಮೋದಿಯವರಿಗೆ ಜನ್ಮದಿನದ ವಿಶೇಷ ಕೊಡುಗೆ

ಸೆಪ್ಟೆಂಬರ್ ೨೦೧೪, ಗೋವಾದಲ್ಲಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆ ನಡೆದ ಸಂದರ್ಭ. ಆಗ ಅನಂತಕುಮಾರ್ ಅವರು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದರು ಹಾಗೂ ಬಿ.ಜೆ.ಪಿ.ಯ ರಾಷ್ಟ್ರೀಯ ಚುನಾವಣಾ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಅಷ್ಟೇ ಅಲ್ಲದೆ, ಬಿ.ಜೆ.ಪಿ.ಯ ಅತ್ಯುನ್ನತ ಸಮಿತಿಯೆನ್ನಿಸಿಕೊಂಡ ಪಾರ್ಲಿಮೆಂಟರೀ ಬೋರ್ಡ್‌ನ ಸೆಕ್ರೆಟರಿಯೂ ಆಗಿದ್ದರು. ಈ ಸಭೆಯಲ್ಲಿ ಮುಂದಿನ ಪ್ರಧಾನಮಂತ್ರಿಯ ಅಭ್ಯರ್ಥಿಯ ಹೆಸರನ್ನು ಘೋಷಣೆ ಮಾಡಬೇಕಿತ್ತು. ಈ ವಿಷಯದಲ್ಲಿ ಅನಂತಕುಮಾರ್ ವಹಿಸಿದ ಪಾತ್ರ ಗಮನಾರ್ಹವಾಗಿತ್ತು.

ಪಕ್ಷದ ಕೆಲವು ಹಿರಿಯ ನಾಯಕರಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಅವರನ್ನೆಲ್ಲ ಭೇಟಿಯಾಗಿ ಒಮ್ಮತದ ಅಭಿಪ್ರಾಯವನ್ನು ಬೆಂಬಲಿಸುವಂತೆ ಪತ್ರ ತೆಗೆದುಕೊಂಡದ್ದೇ ಅಲ್ಲದೆ, ಅವರೆಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡುವುದರವರೆಗೆ ಅನಂತಕುಮಾರ್ ಅವರು ಸಮಗ್ರವಾಗಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಶ್ರೀಮೋದಿಯವರನ್ನು ನಮ್ಮ ಮುಂದಿನ ಪ್ರಧಾನಿ ಅಭ್ಯರ್ಥಿ ಅಂತ ಹೇಳಿ ಘೋಷಣೆ ಮಾಡಿರುವಂತಹ ಸಂದರ್ಭದಲ್ಲಿ ಅನಂತಕುಮಾರ್ ಕಾನ್‌ಸೆನ್ಸಸ್ ಕ್ರಿಯೇಟರ್ ಅಂದರೆ ಒಮ್ಮತ ಅಭಿಪ್ರಾಯಸೃಷ್ಟಿಗೆ ಕಾರಣಕರ್ತನೆಂದು ಎಲ್ಲ ರಾಷ್ಟ್ರೀಯ ಪತ್ರಿಕೆಗಳೂ ಬಣ್ಣಿಸಿದ್ದವು.



## ಜಯಪ್ರಕಾಶ್ ನಾರಾಯಣ್ ಸ್ಮರಣೆ




ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾತ್ಮ ಗಾಂಧೀಯವರ ಹೆಸರು ಮೊದಲಿಗಿರುವಂತೆ, ತುರ್ತು ಪರಿಸ್ಥಿತಿಯ ಹೋರಾಟದ ಮುಂಚೂಣಿಯಲ್ಲಿ ಇದ್ದವರು ಜಯಪ್ರಕಾಶ್ ನಾರಾಯಣ್ . ಜಯಪ್ರಕಾಶ್ ನಾರಾಯಣ್ ಅವರ ಒಂದು ಕರೆಗೆ ಓಗೊಟ್ಟು ಲಕ್ಷಾಂತರ ಯುವಕ, ಯುವತಿಯರು ಆಂದೋಲನದಲ್ಲಿ ಭಾಗವಹಿಸಿದರು. ಜೆಪಿಯವರ ಕರೆಯ ಮೇರೆಗೇ, ಹದಿನಾರು ವರ್ಷದ ಹುಡುಗ ಅನಂತಕುಮಾರ್ ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿ ಜೈಲಿಗೆ ಹೋದದ್ದು. ನಂತರ ಪರೀಕ್ಷೆಗೆ ಕೂಡಲಿಕ್ಕೆ ಆಗದೆ ಆ ಹೋರಾಟವನ್ನು ಮುಂದುವರೆಸಬೇಕಾಗಿ ಬಂದಿತು. ತಮಗಷ್ಟೇ ಅಲ್ಲ ಆ ರೀತಿ ಬಂಧಿತರಾದ ಉಳಿದ ವಿದ್ಯಾರ್ಥಿಗಳಿಗೂ ಪರೀಕ್ಷೆಗೆ ಕೂಡಲಿಕ್ಕೆ ಅವಕಾಶ ಕೊಡಬೇಕು ಅಂತ ಹೋರಾಟ ಮಾಡಿ ಷಾ ಕಮೀಷನ್ ಎಂಬ ಆಯೋಗದ ಮುಂದೆ ಹಾಜರಾಗಿ, ಅನ್ಯಾಯವನ್ನು ಸರಿಪಡಿಸುವಲ್ಲಿ ಯಶಸ್ವಿಯಾದರು.

ಮುಂದೆ, ಅನಂತಕುಮಾರ್ ಅವರು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾಯದರ್ಶಿಯಾಗಿದ್ದಾಗ, ಶ್ರೀ ಲಾಲ್ ಕೃಷ್ಣ ಅಡ್ವಾಣಿಯವರ ನೇತೃತ್ವದಲ್ಲಿ ನಡೆದ ಜನಚೇತನ ಯಾತ್ರೆಯ ಸಂಚಾಲಕರಾಗಿ ಅನಂತಕುಮಾರ್ ಅವರು ಕಾರ್ಯನಿರ್ವಹಿಸಿದರು. ೨೦೦೮ರಲ್ಲಿ ಆ ಜನಚೇತನ ಯಾತ್ರೆಯು ಪ್ರಾರಂಭವಾಗಿದ್ದು ಜಯಪ್ರಕಾಶ್ ನಾರಾಯಣ್ ಅವರ ಜನ್ಮಸ್ಥಳವಾಗಿದ್ದ ಬಿಹಾರಿನ ಸಿತಾಬ್ಧಿಯಾರದಲ್ಲಿ. ಅಕ್ಟೋಬರ್ ೧೧ ಜಯಪ್ರಕಾಶ್ ನಾರಾಯಣ್ ಅವರ ಜಯಂತಿ; ಅದೇ ದಿನ ಜನಚೇತನ ಯಾತ್ರೆ ಪ್ರಾರಂಭ ಆಗಿದ್ದು.

ಮುಂದೆ ಅನಂತಕುಮಾರ್ ಅವರು ಪ್ರತಿವರ್ಷ ತಪ್ಪದೆ ಅಕ್ಟೋಬರ್ ೧೧ ಕ್ಕೆ ಬಿಹಾರದ ಸಿತಾಬ್ಧಿಯಾರದಲ್ಲಿರುವ ಜೆಪಿಯವರ ಮನೆಗೆ ಭೇಟಿಕೊಟ್ಟು ಅವರ ಕುಟುಂಬದವರನ್ನು ಮಾತನಾಡಿಸಿ ಅಲ್ಲಿರುವ ಜೆ.ಪಿ.ಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಬರುತ್ತಿದ್ದರು. ಸುಮಾರು ೧೦ ವರ್ಷ ಆ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದ ಅನಂತಕುಮಾರ್ ಅವರು ೨೦೧೮ರಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಸಂದರ್ಭ ಅಮೇರಿಕಾದಲ್ಲಿ ಇದ್ದರೂ ಆ ದಿನವನ್ನು ಮರೆಯಲಿಲ್ಲ. ಬೆಂಗಳೂರಿನ ಸೌತ್ ಎಂಡ್ ಕಛೇರಿಯಲ್ಲಿ, ಜಯಪ್ರಕಾಶ್ ನಾರಾಯಣ್ ಅವರ ಸಾಧನೆಗಳು ಮತ್ತು ತುರ್ತು ಪರಿಸ್ಥಿತಿಯ ಬಗ್ಗೆ ಮಾಹಿತಿಕೊಡುವಂಥ ಪ್ರದರ್ಶಿನಿಯನ್ನು ವ್ಯವಸ್ಥೆ ಮಾಡಿದ್ದರು.

## ಅನಂತವನ



ಸೆಪ್ಟೆಂಬರ್ ೨೨ , ೨೦೧೫. ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ಅನಂತಕುಮಾರ್ ಅವರು ನಮಗೊಂದು ಸಲಹೆ ಕೊಟ್ಟಿದ್ದರು- ಏನಾದರೂ ಸಮಾಜಕ್ಕೆ ನಮ್ಮ ಬೆಂಗಳೂರಿಗೆ ಉಪಯೋಗವಾಗುವಂಥ ಕೆಲಸವನ್ನು ಮಾಡಿ ಎಂದು. ಅದೇ ಸಂದರ್ಭದಲ್ಲಿ ಯಾಕೆ ಗಿಡನೆಡುವ ಕಾರ್ಯಕ್ರಮವನ್ನು ಪ್ರಾರಂಭ ಮಾಡಬಾರದು ಎಂಬ ಯೋಚನೆ ನಮ್ಮ ಮನಸ್ಸಿಗೂ ಬಂದಿತ್ತು. ಗಿಡನೆಡುವುದಕ್ಕೆ ಸೂಕ್ತಸ್ಥಳವನ್ನು ಹುಡುಕುವಾಗ ನಮಗೆ ನೆನಪಾಗಿದ್ದು ಬಸವನಗುಡಿ ಸರ್ಕಾರಿ ಶಾಲೆ. ಅಂದರೆ ಗಿರಿಜಾಂಬ ಸ್ಕೂಲ್ ಎಂದು ಪರಿಚಿತವಾದ ಈ ಶಾಲೆಯ ಪಕ್ಕದಲ್ಲಿ ಒಂದು ವಿಶಾಲವಾದ ಜಾಗವಿತ್ತು. ಒಂದು ಸಣ್ಣ ಹುಲ್ಲು ಕಡ್ಡಿಯು ಇಲ್ಲದೆ ಇರುವಂಥ ಒಂದು ಜಾಗ. ಆದರೆ ಆ ಸ್ಥಳದಲ್ಲಿ ಬಹಳಷ್ಟು ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯಗಳನ್ನೆಲ್ಲ ಸುರಿದು ಹಾಳುಗೆಡವಿದ್ದರು. ನಾವು ಆ ಶಾಲೆಯನ್ನ ದತ್ತು ತೆಗೆದುಕೊಂಡು ಅದಮ್ಯಚೇತನದಿಂದ ಪ್ರತಿದಿನ ಊಟ ತಲುಪಿಸುವಾಗ ಈ ತ್ಯಾಜ್ಯದ ರಾಶಿ ನಮ್ಮ ಗಮನಕ್ಕೆ ಬರುತ್ತ ಇತ್ತು ಆ ಸ್ಥಳವನ್ನು ಸ್ವಚ್ಛಮಾಡಿ ಅಲ್ಲಿ ಯಾಕೆ ಗಿಡ ನೆಡಬಾರದು ಅಂತ ಯೋಚನೆ ಮಾಡಿದೆವು. ಐದು, ಆರು ಲಾರಿ ತುಂಬುವಷ್ಟು ಪ್ರಮಾಣದ ಕಸವನ್ನೆಲ್ಲ ತೆಗೆದದ್ದಾಯಿತು. ಗುಂಡಿ ತೆಗೆದು ಗಿಡ ಹಾಕಿಸಬೇಕು. ಆದರೆ ಯಾವ ತರಹದ ಗಿಡ ಏನು ಮಾಡೋಣ ಎಂದು ಪರಿಸರತಜ್ಞ ಡಾಕ್ಟರ್ ಯಲ್ಲಪ್ಪ ರೆಡ್ಡಿಯವರ ಜೊತೆಗೆ ಚರ್ಚೆ ಮಾಡಿದೆವು. ಯಲ್ಲಪ್ಪ ರೆಡ್ಡಿಯವರು ಹೇಳಿದರು "ನೋಡಿ ಈ ವನವನ್ನು ನೀವು ಅನಂತಕುಮಾರ್ ಅವರು ಹುಟ್ಟು ಹಬ್ಬದ ದಿನ ಮಾಡುತ್ತ ಇರುವದು. ಅದು ಅನಂತ ಚತುರ್ದಶಿ ತಾನೇ. ಅಂದಮೇಲೆ ಅಲ್ಲಿ ಅನಂತವನ ಮಾಡೋಣ. ಶ್ರೀ ನಾಗೇಂದ್ರ ಭಟ್ ಹಿಪ್ಪಲಳ್ಳಿಯವರು ನಮ್ಮ ಪುರಾಣದಲ್ಲಿ ಕಂಡುಬರುವ ಸರಸ್ವತಿವನ, ಅನಂತವನ, ಗಣೇಶವನ ಎಂಬಂತೆ ಬೇರೆ ಬೇರೆ ವನಗಳ ಕಲ್ಪನೆಗಳನ್ನು ಆಯ್ಕೆ ಮಾಡಿ ಇವತ್ತಿನ ನಮಗೆ ಅರ್ಥವಾಗುವ ರೀತಿಯಲ್ಲಿ ವಿವರಣೆಯನ್ನು ಮಾಡಿಕೊಟ್ಟಿದ್ದಾರೆ. ಅದನ್ನು ನೋಡಿ ಅನಂತವನದಲ್ಲಿ ಏನೇನೂ ಇರಬೇಕು, ಯಾವ ಯಾವ ಗಿಡಗಳನ್ನು ಹಾಕಬೇಕು ಎಂಬುದನ್ನು ಹೇಳುತ್ತೇನೆ" ಎಂದರು. ಅವು ಯಾವ ಗಿಡಗಳು ಮತ್ತು ಅವನ್ನು ಯಾವ ರೀತಿಯಾಗಿ ಹಾಕಬೇಕು ಎಂಬುದನ್ನು ತಿಳಿಸಿಕೊಟ್ಟರು.

ನಮಗೆ ಗಿಡಗಳು ಬೇಕಾದಾಗೆಲ್ಲ ಇಂಡಸ್ ಹರ್ಬ್ಸ್‌ನ ರವೀಂದ್ರ ಅವರ ಸಹಾಯ ತೆಗೆದುಕೊಳ್ಳುವುದು ರೂಢಿ. ಈಗಲೂ ಆ ಗಿಡಗಳನ್ನು ತಂದು ಕೊಡುವಂತಹ ದೊಡ್ಡ ಜವಾಬ್ದಾರಿಯನ್ನು ರವೀಂದ್ರ ಅವರು ವಹಿಸಿಕೊಂಡರು. ಮಧ್ಯದಲ್ಲಿ ರುದ್ರಾಕ್ಷ ಅದರ ಸುತ್ತಲು ಕದಂಬ, ಸೀತಾ ಅಶೋಕ ಮತ್ತು ಬಿಲ್ವ ಹಾಗೂ ಕರವೀರ ಗಿಡಗಳು ಅದಕ್ಕೊಂದು ಬಹಳ ಸುಂದರವಾದ ವಿನ್ಯಾಸವನ್ನು ಕೊಟ್ಟಿದ್ದಾರೆ. ಒಂದರ ಹೊರಗೊಂದರಂತೆ ಚೌಕಾಕಾರಗಳು. ನಡುವೆ ರುದ್ರಾಕ್ಷೀ ಸುತ್ತಲೂ ಒಂದು ಸಾಲಿನಲ್ಲಿ ಏಳು ಮರಗಳು. ಮತ್ತೊಂದು ಚೌಕ. ಹೀಗೆ ಒಟ್ಟು ಏಳು ಸಾಲುಗಳು ಬರುವ ರೀತಿಯಲ್ಲಿ ೪೯ ದೊಡ್ಡ ಮರಗಳು ಮತ್ತು ಮಧ್ಯದಲ್ಲಿ ಕರವೀರ ಗಿಡಗಳು. ಹೀಗೆ ೫೦ಕ್ಕಿಂತ ಹೆಚ್ಚು ಗಿಡಗಳನ್ನು ಆ ದಿನ ನೆಡಲಾಯಿತು. ನಂತರ ಅದೇ ಸ್ಥಳದಿಂದ ನಮ್ಮ ಹಸಿರು ಭಾನುವಾರ ಸಹ ೨೦೧೬ ಜನವರಿ ೩ ರಿಂದ ಪ್ರಾರಂಭವಾಯಿತು. ಇವತ್ತು ಅನಂತವನದ ಗಿಡಗಳು ಬಹಳ ಎತ್ತರವಾಗಿ ಬೆಳೆದಿವೆ. ಕದಂಬವೃಕ್ಷ ೨೫-೩೦ ಅಡಿ ಎತ್ತರಕ್ಕೆ ಹೋಗಿವೆ. ಸೀತಾ ಅಶೋಕ ವೃಕ್ಷವೂ ಬೆಳೆದಿದೆ. ರುದ್ರಾಕ್ಷ ಈಗಾಗಲೇ ೩-೪ ಸಲ ರುದ್ರಾಕ್ಷ ಫಲವನ್ನು ಕೊಟ್ಟಿದೆ. ಐದು ವರ್ಷಗಳ ಹಿಂದೆ ಯಾವ ನೆಲದಲ್ಲಿ ಬರೀ ಪ್ಲಾಸ್ಟಿಕ್ ಕಸ ತುಂಬಿ ಬರಡಾಗಿತ್ತೋ ಅದು ಇವತ್ತು ಗೂಗಲ್ ಮ್ಯಾಪ್‌ನಲ್ಲೂ ಸಹ ಹಸಿರಾಗಿ ಕಾಣುತ್ತ ಇರುವದು ಒಂದು ಸಂತೋಷದ ವಿಷಯ.

# ಅನಂತಪಥ

ANANTHKUMAR PRATISHTHANA

## ಸೆಪ್ಟೆಂಬರ್ 2020ರ ಸಂಚಿಕೆಯಲ್ಲಿ


**ಸಂಸದೀಯ ಪಟುವಾದ ಮಾದರಿ ಕಾರ್ಯಕರ್ತ**
ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರ ನೆನಪು





**ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ನಾಯಕತ್ವ**
ಡಾ. ಆರ್. ಬಾಲಸುಬ್ರಹ್ಮಣ್ಯಂ

**ನಿಮ್ಮ ಮಿನಿಸ್ಟರ್.. ನನಗ ಮಗಾ !**
ಪ್ರಿಸಿಲ್ಲಾ ನಡಗಡ್ಡಿ





**“ಸಾಧ್ಯತೆಗೆ ತಕ್ಕಷ್ಟು ವನ್ಯಜೀವನ ಸುಧಾರಿಸಿಲ್ಲ”**
ಡಾ. ಕೆ. ಉಲ್ಲಾಸ ಕಾರಂತ

**ನಾಯಕತ್ವದ 'ಅನಂತ 'ಸೂತ್ರಗಳು**
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ





**ಕೋವಿಡ್ ವಿರುದ್ಧದ ಸಮರದಲ್ಲಿ ಸ್ವಾವಲಂಬಿ ಭಾರತ**
ಡಾ. ಹರ್ಷವರ್ಧನ್

**ಪುನಶ್ಚೇತನಕ್ಕಾಗಿ ಕರ್ನಾಟಕದ ಸುಧಾರಣಾಕ್ರಮಗಳು ದೇಶಕ್ಕೇ ಮಾದರಿ**
ಡಾ. ಸಿ.ಎನ್. ಅಶ್ವತ್ಥನಾರಾಯಣ





**ಆರೋಗ್ಯ ನೀತಿಯಲ್ಲಿ ಮಹತ್ತ್ವದ ಪರಿವರ್ತನೆಯ ಕ್ರಮಗಳು**
ಡಾ. ದೇವಿಶೆಟ್ಟಿ

**ಎರಡು ಸಾಮಾಜಿಕ ಲಸಿಕೆಗಳೇ ಸದ್ಯದ ಪರಿಹಾರ**
ಡಾ. ಸಿ.ಎನ್. ಮಂಜುನಾಥ್